ಸಂಪಾದಕರು :
ಎಂ.ಎಸ್. ವಿಕಾಸ್

ಶುಕ್ರವಾರ, ಮೇ 10, 2024
ದಾವಣಗೆರೆ, ಪುಟ : 8 ರೂ : 5
ಸಂಪುಟ : 50 ಸಂಚಿಕೆ : 359 RNI : 27369/75

# ಜನತಾ ವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

50 1974 2023

janathavani@mac.com
www.janathavani.com
08192 254736 91642 99999






# ಎಸ್ಸೆಸ್ಸೆಲ್ಸಿ ಫಲಿತಾಂಶ : ಜಿಲ್ಲೆಯಲ್ಲಿ ಕುಸಿತ

## ಶೇ.74.28ರಷ್ಟು ಉತ್ತೀರ್ಣ, ರಾಜ್ಯದಲ್ಲಿ 23ನೇ ಸ್ಥಾನಕ್ಕೆ ಇಳಿಕೆ

ದಾವಣಗೆರೆ, ಮೇ 9 - ಜಿಲ್ಲೆಯಲ್ಲಿ ಎಸ್.ಎಸ್.ಎಲ್.ಸಿ. ಫಲಿತಾಂಶದಲ್ಲಿ ಶೇ.74.28ರ ಫಲಿತಾಂಶ ದೊರೆತಿದ್ದು, ರಾಜ್ಯದಲ್ಲಿ 23ನೇ ಸ್ಥಾನಕ್ಕೆ ಕುಸಿದಿದೆ. ಕಳೆದ ವರ್ಷಕ್ಕೆ ಹೋಲಿಸಿದರೆ ಈ ಬಾರಿ ಫಲಿತಾಂಶ ಹಾಗೂ ಸ್ಥಾನ ಎರಡರಲ್ಲೂ ಕುಸಿತವಾಗಿದೆ.

ಕಳೆದ ವರ್ಷ ಜಿಲ್ಲೆ ಶೇ.92.55ರ ಫಲಿತಾಂಶದೊಂದಿಗೆ 14ನೇ ಸ್ಥಾನದಲ್ಲಿತ್ತು. ಈ ಬಾರಿ ಫಲಿತಾಂಶದಲ್ಲಿ ಶೇ.18.27 ರ ಭಾರೀ ಇಳಿಕೆಯಾಗಿದೆ.

ಈ ಬಾರಿ ಜಿಲ್ಲೆಯಲ್ಲಿ 20,602 ವಿದ್ಯಾರ್ಥಿಗಳು ಪರೀಕ್ಷೆಗೆ ಹಾಜರಾಗಿದ್ದರು. ಇವರಲ್ಲಿ 15,303 ವಿದ್ಯಾರ್ಥಿಗಳು ಮಾತ್ರ ಉತ್ತೀರ್ಣರಾಗಿದ್ದಾರೆ.

ನಗರದ ಸಿದ್ಧಗಂಗಾ ಪ್ರೌಢ ಶಾಲೆಯ ಹೆಚ್. ಗಾನವಿ ಹಾಗೂ ಚನ್ನಗಿರಿ ತಾಲ್ಲೂಕಿನ ತ್ಯಾವಣಗಿಯ ಎಂ.ಎನ್. ಸೃಷ್ಟಿ ಅವರು 620 ಅಂಕ ಗಳಿಸುವ ಮೂಲಕ ಜಿಲ್ಲೆಯ ಮೊದಲ ಸ್ಥಾನವನ್ನು ಹಂಚಿಕೊಂಡಿದ್ದಾರೆ.

ಜಿಲ್ಲೆಯ 361 ವಿದ್ಯಾರ್ಥಿಗಳು ಕನ್ನಡದಲ್ಲಿ 125ಕ್ಕೆ 125 ಅಂಕಗಳನ್ನು ಗಳಿಸಿದ್ದಾರೆ.

9,992 ಬಾಲಕರ ಪೈಕಿ 6,547 ಉತ್ತೀರ್ಣರಾಗಿದ್ದು, ಶೇ. 65.52ರಷ್ಟು ಫಲಿತಾಂಶ ದೊರೆತಿದೆ. ಬಾಲಕಿಯರಲ್ಲಿ ಹಾಜರಾದ 10,610ರ ಪೈಕಿ 8,756 ಉತ್ತೀರ್ಣರಾಗಿದ್ದು, ಶೇ.82.53ರ ಫಲಿತಾಂಶ ದೊರೆತಿದೆ.

ಶೈಕ್ಷಣಿಕ ವಲಯಗಳ ಪೈಕಿ ದಾವಣಗೆರೆ ದಕ್ಷಿಣ ಮೊದಲ ಸ್ಥಾನದಲ್ಲಿದ್ದು, ಶೇ.81.63ರ ಫಲಿತಾಂಶ ಪಡೆದಿದೆ. ಹೊನ್ನಾಳಿ ಶೇ.80.72, ದಾವಣಗೆರೆ ಉತ್ತರ ಶೇ.74.34, ಜಗಳೂರು ಶೇ.70.01, ಚನ್ನಗಿರಿ ಶೇ.70, ಹರಿಹರ ಶೇ.64.05 ಫಲಿತಾಂಶದೊಂದಿಗೆ ನಂತರದ ಸ್ಥಾನಗಳಲ್ಲಿವೆ.

ಕನ್ನಡ ಮಾಧ್ಯಮ ಶಾಲೆಗಳು ಶೇ.64.15, ಇಂಗ್ಲಿಷ್ ಮಾಧ್ಯಮ (5ನೇ ಪುಟಕ್ಕೆ)

## ಐಎಎಸ್ ಕನಸಿನಲ್ಲಿ ಜಿಲ್ಲಾ ಟಾಪರ್ ಗಾನವಿ



ದಾವಣಗೆರೆ, ಮೇ 9 - ತರಗತಿಯ ಮೊದಲ ದಿನದಿಂದಲೇ ಪರಿಶ್ರಮ, ಪೋಷಕರು ಹಾಗೂ ಶಿಕ್ಷಕರ ಮಾರ್ಗದರ್ಶನದಿಂದಾಗಿ ಉತ್ತಮ ಅಂಕಗಳು ದೊರೆತಿವೆ ಎಂದು ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ಜಿಲ್ಲೆಯಲ್ಲಿ ಮೊದಲ ಸ್ಥಾನ ಪಡೆದಿರುವ ಹೆಚ್.ಜಿ. ಗಾನವಿ ತಿಳಿಸಿದ್ದಾರೆ.

ಸಿದ್ದಗಂಗಾ ಶಾಲೆಯ ವಿದ್ಯಾರ್ಥಿನಿಯಾಗಿರುವ ಗಾನವಿ, 625ಕ್ಕೆ 620 ಅಂಕಗಳನ್ನು (5ನೇ ಪುಟಕ್ಕೆ)

## ಕೃಪಾಂಕ ನೀಡಿ ವಿದ್ಯಾರ್ಥಿಗಳ ಕೈ ಹಿಡಿದ ಸರ್ಕಾರ

ಬೆಂಗಳೂರು, ಮೇ 9- ಮಾರ್ಚ್-ಏಪ್ರಿಲ್‌ನಲ್ಲಿ ನಡೆದ ಎಸ್‌ಎಸ್‌ಎಲ್‌ಸಿ ಪರೀಕ್ಷೆ ಫಲಿತಾಂಶದಲ್ಲಿ ಭಾರೀ ಕುಸಿತ ಕಂಡಿದ್ದು, ಒಟ್ಟಾರೆ ಶೇಕಡ 73.40 ವಿದ್ಯಾರ್ಥಿಗಳು ತೇರ್ಗಡೆ ಹೊಂದಿದ್ದಾರೆ.

ಕಳೆದ ವರ್ಷಗಳಿಗೆ ಹೋಲಿಕೆ ಮಾಡಿದರೆ ಈ ವರ್ಷ ಶೇಕಡ 10 ರಷ್ಟು ಫಲಿತಾಂಶ ಕುಸಿದಿದೆ. ಇದೇ ಮೊದಲ (5ನೇ ಪುಟಕ್ಕೆ)

## ಸಣ್ಣ ರೈತರಿಗೆ 3 ಸಾವಿರ ರೂ. ಪರಿಹಾರ

ಬೆಂಗಳೂರು, ಮೇ 9 - ಸಣ್ಣ ಮತ್ತು ಅತಿ ಸಣ್ಣ ಒಣ ಬೇಸಾಯ ಮಾಡುವ ಸುಮಾರು 16 ಲಕ್ಷ ಕುಟುಂಬಗಳಿಗೆ ಬರಗಾಲದಿಂದ ಆಗಿರುವ ಜೀವನೋಪಾಯ ನಷ್ಟಕ್ಕೆ ಪರಿಹಾರವಾಗಿ ತಲಾ 3,000 ರೂ. ಪರಿಹಾರ ನೀಡಲು ತೀರ್ಮಾನಿಸಲಾಗಿದೆ ಎಂದು ಕಂದಾಯ (5ನೇ ಪುಟಕ್ಕೆ)










# ರೈತರ ಬೆಳೆ ನಷ್ಟ ಪರಿಹಾರದ ಬಾಕಿ 60.23 ಕೋಟಿ ವಿತರಣೆ

## ಮಾಹಿತಿ ನೀಡಲು ಸಹಾಯವಾಣಿ ಸ್ಥಾಪನೆ : ಜಿಲ್ಲಾಧಿಕಾರಿ ಡಾ.ಎಂ.ವಿ ವೆಂಕಟೇಶ್



ದಾವಣಗೆರೆ, ಮೇ 9- ಕಳೆದ ವರ್ಷದ ಮುಂಗಾರು ಹಂಗಾಮಿನಲ್ಲಿ ತೀವ್ರ ಮಳೆ ಕೊರತೆಯಿಂದ ಬೆಳೆ ನಷ್ಟವಾದ 82928 ರೈತರಿಗೆ ಬಾಕಿ ಎರಡನೇ ಕಂತು 60.23 ಕೋಟಿ ರೂ.ಗಳನ್ನು ವಿತರಿಸಲಾಗಿದೆ ಎಂದು ಜಿಲ್ಲಾಧಿಕಾರಿ ಡಾ. ವೆಂಕಟೇಶ್ ಎಂ.ವಿ ತಿಳಿಸಿದ್ದಾರೆ.

ಬಾಕಿ ಇದ್ದ ರೈತರಿಗೆ ಒಟ್ಟು ರೂ. 60,23,46,380 ಗಳನ್ನು ನೇರವಾಗಿ ರೈತರ ಖಾತೆಗೆ ಪಾವತಿಸಲಾಗಿದೆ . 2023ರ ಮುಂಗಾರು ಹಂಗಾಮಿನಲ್ಲಿ ಜಿಲ್ಲೆಯಲ್ಲಿ 1,50,621 ಹೆಕ್ಟೇರ್ ಪ್ರದೇಶದಲ್ಲಿ ಬೆಳೆ ಹಾನಿ ಸಂಭವಿಸಿದೆ ಎಂದು ಸರ್ಕಾರಕ್ಕೆ ವರದಿ ನೀಡಲಾಗಿತ್ತು. ಎಸ್‌ಡಿಆರ್‌ಎಫ್ ಹಾಗೂ ಎನ್‌ಡಿಆರ್‌ಎಫ್ ಮಾರ್ಗಸೂಚಿ ಅನ್ವಯ ಅರ್ಹ ರೈತರಿಗೆ ಗರಿಷ್ಠ ರೂ.2000 ವರೆಗೆ 82928 ರೈತರಿಗೆ ರೂ.15,88,15,380 ಗಳನ್ನು ಮೊದಲ ಕಂತಾಗಿ ಪಾವತಿಸಲಾಗಿತ್ತು.

ಮೇ 2ರ ಸರ್ಕಾರದ ಆದೇಶದಂತೆ ಮಾರ್ಗ ಸೂಚಿನ್ವಯ ಪರಿಹಾರ ನೀಡಲು ಬಾಕಿ ಇದ್ದ ಮೊತ್ತವನ್ನು ಈಗ ಜಿಲ್ಲೆಯ 69575 ರೈತರಿಗೆ ರೂ.44,35,31,000 ಗಳನ್ನು ನೇರವಾಗಿ ರೈತರ ಖಾತೆಗೆ ಪಾವತಿ ಮಾಡಲಾಗಿದೆ. ಒಟ್ಟಾರೆ ಜಿಲ್ಲೆಯಲ್ಲಿ ಇದುವರೆಗೆ ರೂ.60,23,46,381 ಗಳನ್ನು ಬೆಳೆ ಹಾನಿ ಪರಿಹಾರವಾಗಿ ನೀಡಲಾಗಿರುತ್ತದೆ.

ತಾಲ್ಲೂಕುವಾರು ವಿವರದನ್ವಯ ಚನ್ನಗಿರಿ ತಾಲ್ಲೂಕಿನ 16398 ರೈತರಿಗೆ ರೂ.3,07,12,576, ದಾವಣಗೆರೆ 17015 ರೈತರಿಗೆ ರೂ.3,22,94,548, ಹೊನ್ನಾಳಿ 8795 ರೈತರಿಗೆ ರೂ.1,66,55,292, ಜಗಳೂರು 27263 ರೈತರಿಗೆ ರೂ.5,36,64,034, ನ್ಯಾಮತಿ 9189 ರೈತರಿಗೆ ರೂ.1,74,61,001, ಹಾಗೂ ಹರಿಹರ ತಾಲ್ಲೂಕಿನ 4268 ರೈತರಿಗೆ ರೂ.80,27,929 ಗಳನ್ನು ಮೊದಲ ಕಂತಾಗಿ ಪಾವತಿಸಲಾಗಿದೆ.

ಜಿಲ್ಲೆಯಲ್ಲಿ ಬೆಳೆ ನಷ್ಟವಾದ ರೈತರಿಗೆ ಮೊದಲ ಕಂತಿನಲ್ಲಿ ಈಗಾಗಲೇ ಗರಿಷ್ಠ ರೂ.2000 ವರೆಗೆ ಪಾವತಿಸಲಾಗಿದ್ದು, ಬಾಕಿ ಪಾವತಿಸಬೇಕಾದ 69575 ರೈತರಿಗೆ ರೂ.44,35,37,000 ಪರಿಹಾರವನ್ನು ನೇರವಾಗಿ ಅವರ ಖಾತೆಗೆ ಈಗ ಪಾವತಿಸಲಾಗಿದೆ.

ತಾಲ್ಲೂಕುವಾರು ವಿವರದನ್ವಯ ಚನ್ನಗಿರಿ 12758 ರೈತರಿಗೆ ರೂ.6,50,30,311, ದಾವಣಗೆರೆ 13914 ರೈತರಿಗೆ ರೂ.8,34,19,466, ಹೊನ್ನಾಳಿ 7177 ರೈತರಿಗೆ ರೂ.3,87,43,550, ಜಗಳೂರು 24493 ರೈತರಿಗೆ ರೂ. 19,29,18,592, ನ್ಯಾಮತಿಯ 8025 ರೈತರಿಗೆ ರೂ.4,58,94,470, ಹಾಗೂ ಹರಿಹರ ತಾಲ್ಲೂಕಿನ 3208 ರೈತರಿಗೆ ರೂ.1,75,24,611 ಗಳನ್ನು ಈಗ ಪಾವತಿಸಿದೆ.

ಯಾವುದೇ ರೈತರಿಗೆ ಬೆಳೆ ಪರಿಹಾರ ಕುರಿತಂತೆ ಮಾಹಿತಿ ಮತ್ತು ಮಾರ್ಗಸೂಚಿ ಬಗ್ಗೆ ವಿವರ ನೀಡಲು ಎಲ್ಲಾ ತಾಲ್ಲೂಕುಗಳಲ್ಲಿ ಸಹಾಯವಾಣಿ ಸ್ಥಾಪಿಸಲಾಗಿದೆ. ಮಾಹಿತಿಗಾಗಿ ಬೆಳಿಗ್ಗೆ 10 ರಿಂದ ಸಂಜೆ 5.30ರವರೆಗೆ ಕರೆ ಮಾಡಬಹುದಾಗಿದೆ.

ಸಹಾಯವಾಣಿ ಸಂಖ್ಯೆಗಳು: ಚನ್ನಗಿರಿ.ತಾ. ಮೊ.ಸಂ:7892481962, ದಾವಣಗೆರೆ, ಮೊ.ಸಂ:9731254380, ಹೊನ್ನಾಳಿ.ತಾ. ಮೊ.ಸಂ:9686136015, ಜಗಳೂರು.ತಾ. ಮೊ.ಸಂ:8431977870, ನ್ಯಾಮತಿ.ತಾ. ಮೊ.ಸಂ:8073951245, ಹರಿಹರ.ತಾ.ಮೊ. ಸಂ:8618868370 ಸಂಪರ್ಕಿಸಬಹುದು ಎಂದು ಜಿಲ್ಲಾಧಿಕಾರಿಗಳು ತಿಳಿಸಿರುತ್ತಾರೆ.

# ಮಲೇಬೆನ್ನೂರಿನ ವೀರಭದ್ರೇಶ್ವರ ದೇವಸ್ಥಾನದಲ್ಲಿ ಇಂದಿನಿಂದ ಮಹಾರುದ್ರಯಾಗ





ಮಲೇಬೆನ್ನೂರು ಪಟ್ಟಣದ ಹೊರವಲಯದಲ್ಲಿರುವ ಶ್ರೀ ಭದ್ರಕಾಳಿ ಸಮೇತ ವೀರಭದ್ರೇಶ್ವರ ದೇವಸ್ಥಾನದಲ್ಲಿ ಮಹಾರುದ್ರಯಾಗವನ್ನು ಹಮ್ಮಿಕೊಳ್ಳಲಾಗಿದೆ ಎಂದು ದೇವಸ್ಥಾನ ಟ್ರಸ್ಟ್ ಕಮಿಟಿ ಉಪಾಧ್ಯಕ್ಷ ಬಿ.ಚಿದಾನಂದಪ್ಪ ತಿಳಿಸಿದ್ದಾರೆ.

ಇಂದು ಬೆಳಿಗ್ಗೆ 8 ಗಂಟೆಗೆ ಬಾಳೆಹೊನ್ನೂರಿನ ರಂಭಾಪುರಿ ಪೀಠದ ಶ್ರೀ ಡಾ. ಪ್ರಸನ್ನ ರೇಣುಕ ವೀರಸೋಮೇಶ್ವರ ಶಿವಾಚಾರ್ಯ ಸ್ವಾಮೀಜಿ ಮಹಾರುದ್ರಯಾಗಕ್ಕೆ ಚಾಲನೆ ನೀಡಲಿದ್ದಾರೆ.

ಬೆಳಿಗ್ಗೆ 9 ಗಂಟೆಯಿಂದ ಇಷ್ಟಲಿಂಗ ಮಹಾಪೂಜೆಯನ್ನು ಮಾಡಲಿರುವ ರಂಭಾಪುರಿ ಶ್ರೀಗಳವರು, ಪೂಜೆಯ ನಂತರ ಆಶೀರ್ವಚನ ನೀಡಲಿದ್ದಾರೆ.ನಂತರ ಸಂಜೆ 4 ರಿಂದ ರಾತ್ರಿ 8 ರವರೆಗೆ ಮತ್ತು ನಾಳೆ ಶನಿವಾರ ಹಾಗೂ ದಿನಾಂಕ 12ರ ಭಾನುವಾರ ದಿನವಿಡೀ ಮಹಾರುದ್ರಯಾಗ ನಡೆಯಲಿದೆ.

ಹೊನ್ನಾಳಿ ಹಿರೇಕಲ್ಮಠದ ಶ್ರೀಗಳು, ಕಡೇನಂದಿಹಳ್ಳಿ ಮಠದ ಶ್ರೀಗಳು, ಕೋಡಿಯಾಲ ಹೊಸಪೇಟೆಯ ಪುಣ್ಯಕೋಟಿ ಮಠದ ಶ್ರೀಗಳು ಭಾಗವಹಿಸಲಿದ್ದು, ವೇದ ಬ್ರಹ್ಮ ಬೆನಕಯ್ಯ ಶಾಸ್ತ್ರಿಗಳ ನೇತೃತ್ವದಲ್ಲಿ ಅಂಜನ ಪುರೋಹಿತರು ಈ ಮಹಾರುದ್ರ ಯಾಗವನ್ನು ನಡೆಸಿಕೊಡಲಿದ್ದಾರೆ.

3 ದಿನವೂ ಬೆಳಿಗ್ಗೆ ಉಪಹಾರ, ಮಧ್ಯಾಹ್ನ ಪ್ರಸಾದ, ಸಂಜೆ ಉಪಹಾರ ಮತ್ತು ರಾತ್ರಿ ಪ್ರಸಾದದ ವ್ಯವಸ್ಥೆ ಇದ್ದು, ಭಕ್ತರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸುವಂತೆ ಬಿ. ಚಿದಾನಂದಪ್ಪ ಕೋರಿದ್ದಾರೆ.

ಬಿ.ಉಮಾಶಂಕರ್, ಬಿ.ಮಲ್ಲಿಕಾರ್ಜುನ್, ಬಿ. ಶಂಭುಲಿಂಗಪ್ಪ, ಬಿ.ನಾಗೇಶಪ್ಪ, ಬಿ.ವಿ.ರುದ್ರೇಶ್, ಎಸ್. ಎನ್.ವಿಜಯಕುಮಾರ್, ಪ್ರಧಾನ ಅರ್ಚಕ ಬೆನಕಯ್ಯ ಶಾಸ್ತ್ರಿ, ಬೂದಿಸ್ವಾಮಿ ಶಾಸ್ತ್ರಿ ಮತ್ತಿತರರು ಈ ವೇಳೆ ಹಾಜರಿದ್ದರು.

## ಪ್ರತಿಷ್ಠಿತ ಖಾಸಗಿ ಶಾಲೆಯಲ್ಲಿ 6ನೇ ತರಗತಿ ಪ್ರವೇಶಕ್ಕೆ ಅರ್ಜಿ ಆಹ್ವಾನ

ದಾವಣಗೆರೆ,ಮೇ 9- ಪರಿಶಿಷ್ಟ ಜಾತಿಯ ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ಪ್ರತಿಷ್ಠಿತ ಖಾಸಗಿ ಶಾಲೆಗಳಲ್ಲಿ 6ನೇ ತರಗತಿ ಪ್ರವೇಶಕ್ಕಾಗಿ ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ.

5ನೇ ತರಗತಿಯಲ್ಲಿ ಶೇ.60 ಕ್ಕಿಂತ ಹೆಚ್ಚು ಅಂಕ ಪಡೆದು ಉತ್ತೀರ್ಣರಾಗಿರಬೇಕು. ವಿದ್ಯಾರ್ಥಿ ಕುಟುಂಬದ ವಾರ್ಷಿಕ ವರಮಾನ ರೂ. 2 ಲಕ್ಷದೊಳಗಿರಬೇಕು. ಜಾತಿ ಪ್ರಮಾಣ ಪತ್ರ, ಆದಾಯ ಪ್ರಮಾಣ ಪತ್ರ, ಪೋಟೋ ಹಾಗೂ ಅಂಕಪಟ್ಟಿ, ಗ್ರಾಮೀಣ ಪ್ರಮಾಣ ಪತ್ರಗಳೊಂದಿಗೆ ಸಮಾಜ ಕಲ್ಯಾಣ ಇಲಾಖೆ ಜಂಟಿ ನಿರ್ದೇಶಕರ ಕಚೇರಿ, ರೂಂ.ನಂ 37. ಜಿಲ್ಲಾಡಳಿತ ಭವನ, ದಾವಣಗೆರೆ ಇಲ್ಲಿಗೆ ಖುದ್ದು ಹಾಜರಾಗಿ ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಬಹುದಾಗಿದೆ. ಅರ್ಜಿ ಸಲ್ಲಿಸಲು ಇದೇ ದಿನಾಂಕ 21 ಕೊನೆಯ ದಿನವಾಗಿದೆ.

ಹೆಚ್ಚಿನ ಮಾಹಿತಿಗಾಗಿ ಸಮಾಜ ಕಲ್ಯಾಣ ಇಲಾಖೆ ಅಥವಾ ಆಯಾ ತಾಲ್ಲೂಕುಗಳ ಸಹಾಯಕ ನಿರ್ದೇಶಕರ ಕಚೇರಿ ಸಂಪರ್ಕಿಸಲು ಜಂಟಿ ನಿರ್ದೇಶಕ ಕೆ. ನಾಗರಾಜ ತಿಳಿಸಿದ್ದಾರೆ.

## ಹರಪನಹಳ್ಳಿ ತಾಲ್ಲೂಕಿನ ಕೆ. ಸಿ. ಸಾಗರ್ ರಾಜ್ಯಕ್ಕೆ 6 ನೇ ರ್‍ಯಾಂಕ್



ಹರಪನಹಳ್ಳಿ, ಮೇ 9- 2023-24ನೇ ಸಾಲಿನ ಎಸ್‌ಎಸ್‌ಎಲ್‌ಸಿ ವಾರ್ಷಿಕ ಪರೀಕ್ಷಾ ಫಲಿತಾಂಶ ಪ್ರಕಟವಾಗಿದ್ದು, ತಾಲ್ಲೂಕಿಗೆ ಶೇ. 69.08 ರಷ್ಟು ಫಲಿತಾಂಶ ಬಂದಿದೆ.

ವಿವಿಎಸ್ ಪ್ರೌಢಶಾಲೆ ವಿದ್ಯಾರ್ಥಿ ಸಾಗರ್ ಕೆ.ಸಿ. 620 ಅಂಕಗಳನ್ನು ಪಡೆದು ತಾಲ್ಲೂಕಿಗೆ ಪ್ರಥಮ ಹಾಗೂ ರಾಜ್ಯಕ್ಕೆ ಆರನೇ ರ್‍ಯಾಂಕ್ ಗಳಿಸಿದ್ದಾರೆ. ದ್ವಿತಿಯ ಸ್ಥಾನವನ್ನು ವಿವಿಎಸ್ ಶಾಲೆಯ ಪ್ರತೀಕ್ ಎಂ - 615 ಹಾಗೂ ತೃತೀಯ ಸ್ಥಾನವನ್ನು ಬಾಲಕಿಯರ ಸರ್ಕಾರಿ ಪ್ರೌಢಶಾಲೆಯ ಅಪ್ಸಾನ ಬಾನು -613 ಪಡೆದಿರುತ್ತಾರೆ. ತಾಲ್ಲೂಕಿನ ಮಾಚೇನಳ್ಳಿ ಕಿತ್ತೂರ ರಾಣಿ ಚೆನ್ನಮ್ಮ ವಸತಿ ಪ್ರೌಢಶಾಲೆ ನೂರಕ್ಕೆ ನೂರು ಫಲಿತಾಂಶ ಪಡೆದಿರುತ್ತದೆ.

ರ್‍ಯಾಂಕ್ ವಿದ್ಯಾರ್ಥಿಯನ್ನು ಕ್ಷೇತ್ರ ಶಿಕ್ಷಣಾಧಿಕಾರಿ ಯು. ಬಸವರಾಜಪ್ಪ, ವಿಜಯನಗರ ಜಿಲ್ಲಾ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಅಧ್ಯಕ್ಷ ಬಸವರಾಜ ಸಂಗಪ್ಪನವರ್, ಕನ್ನಡ ಸಾಹಿತ್ಯ ಪರಿಷತ್ತು ಅಧ್ಯಕ್ಷ ಕೆ.ಉಚ್ಚೆಂಗೆಪ್ಪ ಅಭಿನಂದಿಸಿದ್ದಾರೆ.

## ಗಾಂಧಿನಗರದಲ್ಲಿ ಇಂದು ಹುಲಿಗೆಮ್ಮ ದೇವಿ ಜಾತ್ರೆ, ಭಜನೆ



ದಾವಣಗೆರೆ ಗಾಂಧಿ ನಗರದಲ್ಲಿ ಶ್ರೀ ಹುಲಿಗೆಮ್ಮ ದೇವಿಯ ಜಾತ್ರಾ ಮಹೋತ್ಸವ ಇಂದು ನಡೆಯಲಿದೆ. ಇಂದು ಮುಂಜಾನೆ 6ಕ್ಕೆ ದೇವಿಯ ಅಗ್ನಿಕುಂಡ ಜರುಗಿದ ನಂತರ ಭಕ್ತರಿಗೆ ಪ್ರಸಾದ ವ್ಯವಸ್ಥೆ ಕಲ್ಪಿಸಲಾಗಿದೆ ಎಂದು ಸೇವಾ ಸಮಿತಿ ತಿಳಿಸಿದೆ.

## ಬೆಳ್ಳೂಡಿ ಪಟೇಲ್ ಗುರುಬಸಪ್ಪ ಶಾಲೆಗೆ ಶೇ 62.50 ಫಲಿತಾಂಶ

ಮಲೇಬೆನ್ನೂರು, ಮೇ 9 - ಬೆಳ್ಳೂಡಿ ಗ್ರಾಮದ ಶ್ರೀ ಪಟೇಲ್ ಗುರುಬಸಪ್ಪ ಪ್ರೌಢಶಾಲೆಗೆ ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ ಶೇ.62.50 ರಷ್ಟು ಫಲಿತಾಂಶ ಲಭಿಸಿದೆ. ಪರೀಕ್ಷೆ ಬರೆದ ಒಟ್ಟು 80 ವಿದ್ಯಾರ್ಥಿಗಳ ಪೈಕಿ 50 ವಿದ್ಯಾರ್ಥಿಗಳು ತೇರ್ಗಡೆ ಹೊಂದಿದ್ದಾರೆ ಎಂದು ಶಾಲೆಯ ಮುಖ್ಯ ಶಿಕ್ಷಕ ಎಸ್. ಶಿವಕುಮಾರ್ ತಿಳಿಸಿದ್ದಾರೆ.

## ಈಶ್ವರಮ್ಮ ಶಾಲೆಗೆ ಶೇ.100 ಫಲಿತಾಂಶ

ದಾವಣಗೆರೆ, ಮೇ 9- ಈಶ್ವರಮ್ಮ ಶಾಲೆಯಲ್ಲಿ ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ 78 ವಿದ್ಯಾರ್ಥಿಗಳು ಶೇ.100ರಷ್ಟು ಫಲಿತಾಂಶ ಪಡೆದ್ದಾರೆ. ಅತ್ಯುನ್ನತ ದರ್ಜೆಯಲ್ಲಿ 29, ಪ್ರಥಮ ದರ್ಜೆ 38 ಹಾಗೂ ದ್ವಿತೀಯ ದರ್ಜೆ 11 ವಿದ್ಯಾರ್ಥಿಗಳು ತೇರ್ಗಡೆಯಾಗಿದ್ದಾರೆ.

## ಎಲೆಬೇತೂರಿನ ತರಳಬಾಳು ಪ್ರೌಢಶಾಲೆಯ ಎಸ್ಸೆಸ್ಸೆಲ್ಸಿ ಫಲಿತಾಂಶ : ಸುಪ್ರಭೆ ಶಾಲೆಗೆ ಪ್ರಥಮ



ಎಲೆಬೇತೂರು, ಮೇ 9- ಶ್ರೀ ತರಳಬಾಳು ಜಗದ್ಗುರು ವಿದ್ಯಾಸಂಸ್ಥೆಯ ಅಡಿಯಲ್ಲಿ ನಡೆಯುತ್ತಿರುವ ಇಲ್ಲಿನ ಶ್ರೀ ಕೊಂಡಜ್ಜಿ ಬಸಪ್ಪ ಮತ್ತು ಶ್ರೀ ತರಳಬಾಳು ಪ್ರೌಢಶಾಲೆಯ ಈ ಬಾರಿಯ ಎಸ್ಸೆಸ್ಸೆಲ್ಸಿ ಫಲಿತಾಂಶ ಪ್ರಕಟವಾಗಿದ್ದು, ಕನ್ನಡ ಮಾಧ್ಯಮದಲ್ಲಿ ಪರೀಕ್ಷೆಗೆ ಕುಳಿತ 42 ವಿದ್ಯಾರ್ಥಿಗಳಲ್ಲಿ 37 ವಿದ್ಯಾರ್ಥಿಗಳು (ಶೇ. 88) ಉತ್ತೀರ್ಣರಾಗಿದ್ದಾರೆ.

ಡಿ.ಎಸ್.ಸುಪ್ರಭೆ 608 (ಶೇ.97.28). ಇದು ಶಾಲೆಯ ಸಾರ್ವಕಾಲಿಕ ದಾಖಲೆಯಾಗಿದ್ದು, ಇಲ್ಲಿಯೇ ಅಧ್ಯಾಪಕರಾಗಿರುವ ಹೆಚ್.ಎಸ್.ದ್ಯಾಮೇಶ್ ಮತ್ತು ಹೊಳಲ್ಕೆರೆ ತಾಲ್ಲೂಕು ಕೆಂಚಾಪುರದ ಶ್ರೀ ರಂಗನಾಥ ಪ್ರೌಢಶಾಲೆಯ ಮುಖ್ಯೋಪಾಧ್ಯಾಯಿನಿ ಬಿ.ಎಸ್. ಸುಜಾತ ದಂಪತಿ ಪುತ್ರಿ.

ಹಿಂದಿಯಲ್ಲಿ 100ಕ್ಕೆ 100 ಅಂಕಗಳನ್ನು ಪಡೆದಿರುತ್ತಾಳೆ. ತಮ್ಮ ಮಕ್ಕಳನ್ನು ತಮ್ಮದೇ ಶಾಲೆಯಲ್ಲಿ ಅದರಲ್ಲೂ ಕನ್ನಡ ಮಾಧ್ಯಮದಲ್ಲಿ ಸೇರಿಸಿ, ಉತ್ತಮ ದಾಖಲೆ ನಿರ್ಮಾಣ ಮಾಡಿ ಮಾದರಿಯಾಗಿದ್ದಾರೆ.

ಶ್ರೀ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿ ವಿದ್ಯಾರ್ಥಿನಿಗೆ ಶುಭ ಹಾರೈಸಿದ್ದಾರೆ. ವಿದ್ಯಾರ್ಥಿನಿ ಟಿ.ವಿದ್ಯಾ - 553 (ಶೇ.88.48) ಪಡೆದು ದ್ವಿತೀಯ ಸ್ಥಾನದಲ್ಲಿದ್ದಾಳೆ.

ಆಂಗ್ಲ ಮಾಧ್ಯಮದಲ್ಲಿ 15 ಜನ ವಿದ್ಯಾರ್ಥಿಗಳಲ್ಲಿ (ಶೇ.93.33) ಅದರಲ್ಲಿ ಅತಿ ಹೆಚ್ಚು ಅಂಕಗಳಿಸಿದ ವಿದ್ಯಾರ್ಥಿ ಕೆ.ಆರ್.ಅನನ್ಯ - 585 (ಶೇ.93.66), ಹಾಗೂ ಹೆಚ್.ಪಿ.ಆದರ್ಶ - 552 (ಶೇ.88.32) ಉತ್ತೀರ್ಣರಾಗಿದ್ದಾರೆ.

## ಎಲೆಬೇತೂರಿನಲ್ಲಿ ಇಂದು ಬಸವೇಶ್ವರ ಮೂರ್ತಿ ಪ್ರತಿಷ್ಠಾಪನೆ



ದಾವಣಗೆರೆ ಸಮೀಪದ ಎಲೆಬೇತೂರಿನಲ್ಲಿ ವಿಶ್ವಗುರು ಮತ್ತು ಸಾಂಸ್ಕೃತಿಕ ನಾಯಕ ಬಸವೇಶ್ವರರ ಜಯಂತಿಯ ಪ್ರಯುಕ್ತ ಗ್ರಾಮದ ಬಸವೇಶ್ವರ ವೃತ್ತದಲ್ಲಿ ವಿಶ್ವಗುರು ಬಸವೇಶ್ವರರ ಮೂರ್ತಿ ಪ್ರತಿಷ್ಠಾಪನಾ ಕಾರ್ಯಕ್ರಮವು ಇಂದು ನಡೆಯಲಿದೆ. ಬೆಳಿಗ್ಗೆ 8 ಗಂಟೆಗೆ ಬಸವೇಶ್ವರರ ಮೂರ್ತಿಯನ್ನು ವಿವಿಧ ಸಾಂಸ್ಕೃತಿಕ ಕಲಾತಂಡಗಳೊಂದಿಗೆ ಊರಿನ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ಮತ್ತು ಮೂರ್ತಿ ಪ್ರತಿಷ್ಠಾಪನೆ ಕಾರ್ಯ ನಡೆಯಲಿದೆ. ಇದೇ ಸಂದರ್ಭದಲ್ಲಿ ಸಾರ್ವಜನಿಕರಿಗೆ ಪ್ರಸಾದ ವಿನಿಯೋಗ ನಡೆಯಲಿದೆ.

## ಹರಿಹರದಲ್ಲಿ ಇಂದು ಬಸವೇಶ್ವರ ಜಯಂತಿ, ಎತ್ತುಗಳ ಮೆರವಣಿಗೆ

ಜನಪದ ಕಲಾ ತಂಡ, ಸಹ ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಯೋಗದಲ್ಲಿ ಹೊಸಪೇಟೆ ಬೀದಿಯಲ್ಲಿರುವ ಶ್ರೀ ಬಸವೇಶ್ವರ ದೇವಸ್ಥಾನದಲ್ಲಿ ಬಸವ ಜಯಂತಿ ಪ್ರಯುಕ್ತ ಇಂದು ಬ್ರಾಹ್ಮೀ ಮುಹೂರ್ತದಲ್ಲಿ ಶ್ರೀ ಬಸವೇಶ್ವರ ಸ್ವಾಮಿಗೆ ಮತ್ತು ಉತ್ಸವ ಮೂರ್ತಿ ಬೆಳ್ಳಿ ಬಸವೇಶ್ವರ ಸ್ವಾಮಿಗೆ ರುದ್ರಾಭಿಷೇಕ ನಡೆಯುವುದು.

ನಂತರ ಶ್ರೀ ಬಸವೇಶ್ವರ ಜಯಂತ್ಯೋತ್ಸವದ ಮೆರವಣಿಗೆಯು ಬೆಳಿಗ್ಗೆ 8.30 ರಿಂದ ವಿಜೃಂಭಣೆಯಿಂದ ಜರುಗಲಿದೆ. ರೈತರು ಎತ್ತುಗಳನ್ನು ಉಳುವೆ ಮತ್ತು ಬಂಡಿಗೆ ಹೂಡಬಾರದು. ಎತ್ತುಗಳನ್ನು ಸಿಂಗರಿಸಿ, ಮೆರವಣಿಗೆಗೆ ತರಬೇಕು ಎಂದು ಶ್ರೀ ಬಸವೇಶ್ವರ ದೇವಸ್ಥಾನ ಸಮಿತಿ ಅಧ್ಯಕ್ಷ ಟಿ.ಜೆ. ಮುರುಗೇಶ್, ಕಾರ್ಯದರ್ಶಿ ಎಂ.ಎಂ. ಶಾಂತವೀರಪ್ಪ ತಿಳಿಸಿದ್ದಾರೆ.

## 12ಕ್ಕೆ ನಗರದಲ್ಲಿ ಕವಿಗೋಷ್ಠಿ

ದಾವಣಗೆರೆ, ಮೇ 9 - ಡಾ. ಪಂ. ಪುಟ್ಟರಾಜ ಸೇವಾ ಸಮಿತಿಯಿಂದ ಇದೇ ದಿನಾಂಕ 12ರ ಭಾನುವಾರ ಬೆಳಿಗ್ಗೆ 11 ಗಂಟೆಗೆ ನಗರದ ಕುವೆಂಪು ಕನ್ನಡ ಭವನದಲ್ಲಿ ಕವಿಗೋಷ್ಠಿ ನಡೆಯಲಿದೆ.

ಅಂದು ಸಂಜೆ ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಭಾಗ ವಹಿಸಲು ಅವಕಾಶವಿದೆ. ವಿವರಕ್ಕೆ ಮಮತಾ ನಾಗರಾಜ್ (99648291 22) ಅವರನ್ನು ಸಂಪರ್ಕಿಸಬಹುದು.


## ರಾಣೇಬೆನ್ನೂರು : ಶೇ. 80.91 ಫಲಿತಾಂಶ


ರಾಣೇಬೆನ್ನೂರು, ಮೇ 9 - ತಾಲ್ಲೂಕಿನ ಸರ್ಕಾರಿ ಹಾಗೂ ಖಾಸಗಿ ಸೇರಿದಂತೆ ಒಟ್ಟು 83 ಪ್ರೌಢಶಾಲೆಗಳ ಒಟ್ಟು 4613 ವಿದ್ಯಾರ್ಥಿಗಳು ಎಸ್.ಎಸ್.ಎಲ್.ಸಿ ಪರೀಕ್ಷೆ ಬರೆದಿದ್ದು, 3754 ವಿದ್ಯಾರ್ಥಿಗಳು ಉತ್ತೀರ್ಣರಸಗಿದ್ದಾರೆ. ಶೇಕಡಾ 80.91 ರಷ್ಟು ಫಲಿತಾಂಶ ಬಂದಿದೆ.

## ಎಸ್ಸೆಸ್ಸೆಲ್ಸಿ : ಮಾಗನೂರು ಬಸಪ್ಪ ಶಾಲೆಗೆ ಶೇ. 100 ಫಲಿತಾಂಶ

ದಾವಣಗೆರೆ, ಮೇ 9- ನಗರದ ಮಾಗನೂರು ಬಸಪ್ಪ ಪ್ರೌಢಶಾಲೆಯು ಸತತ 8ನೇ ಬಾರಿಗೆ ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ 43 ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದು, ಶೇ.100ರಷ್ಟು ಫಲಿತಾಂಶ ತಂದಿದ್ದಾರೆ. ವಿದ್ಯಾರ್ಥಿ ಕೆ.ಕೆ.ಧನುಷ್ 591 (ಶೇ.94.56) ಅಂಕ ಪಡೆದು ಶಾಲೆಗೆ ಪ್ರಥಮರಾಗಿದ್ದಾರೆ.

## ಹೊನ್ನಾಳಿ : ವೆಂಕಟೇಶ್ವರ ವಿದ್ಯಾ ಸಂಸ್ಥೆಯ ಪ್ರೌಢಶಾಲೆಗೆ ಶೇ.100ರಷ್ಟು ಫಲಿತಾಂಶ







ಹೊನ್ನಾಳಿ, ಮೇ 9 - ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ ತಾಲ್ಲೂಕಿನ ಗೊಲ್ಲರಹಳ್ಳಿ ಗ್ರಾಮದ ಶ್ರೀ ವೆಂಕಟೇಶ್ವರ ವಿದ್ಯಾ ಸಂಸ್ಥೆಯ ಪ್ರೌಢಶಾಲೆಗೆ ಶೇ.100ರಷ್ಟು ಫಲಿತಾಂಶ ಲಭಿಸಿದೆ.

ಪರೀಕ್ಷೆಗೆ ಹಾಜರಾದ ಎಲ್ಲಾ 37 ವಿದ್ಯಾರ್ಥಿಗಳೂ ತೇರ್ಗಡೆ ಹೊಂದಿದ್ದಾರೆ. ಐವರು ವಿದ್ಯಾರ್ಥಿಗಳು ಉನ್ನತ ಶ್ರೇಣಿ, 22 ವಿದ್ಯಾರ್ಥಿಗಳು ಪ್ರಥಮ ಶ್ರೇಣಿ ಹಾಗೂ 10 ವಿದ್ಯಾರ್ಥಿಗಳು ದ್ವಿತೀಯ ಶ್ರೇಣಿಯಲ್ಲಿ ತೇರ್ಗಡೆ ಹೊಂದಿದ್ದಾರೆ.

ಶಾಲೆಯ ಎಚ್.ಜಿ. ಕವಿತಾ 578 ಅಂಕ (ಶೇ.92.48) ಎಚ್.ಜಿ. ಸವಿತಾ 570 ಅಂಕ (ಶೇ.91.20) ಮತ್ತು ಬಿ.ಆರ್. ಕವನ 553 ಅಂಕ (ಶೇ.88.48) ಗಳಿಸಿದ್ದಾರೆ.

ಶೇ.100ರಷ್ಟು ಫಲಿತಾಂಶ ಗಳಿಸಿರುವ ವಿದ್ಯಾರ್ಥಿಗಳ ಸಾಧನೆಗೆ ಶ್ರೀ ವೆಂಕಟೇಶ್ವರ ವಿದ್ಯಾ ಸಂಸ್ಥೆಯ ಅಧ್ಯಕ್ಷ ಜಿ.ಪಿ. ಸತೀಶ್, ಕಾರ್ಯದರ್ಶಿ ಜಿ.ಪಿ. ಹರೀಶ್, ಮುಖ್ಯ ಶಿಕ್ಷಕಿ ಎಚ್.ಬಿ. ಮಮತ ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.

## ಹೊನ್ನಾಳಿ : ಸ್ವಾಮಿ ವಿವೇಕಾನಂದ ಇಂಗ್ಲೀಷ್ ಮೀಡಿಯಂ ಶಾಲೆಗೆ ಶೇ.100







ಹೊನ್ನಾಳಿ, ಮೇ 9 - ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ ಪಟ್ಟಣದ ಸ್ವಾಮಿ ವಿವೇಕಾನಂದ ಇಂಗ್ಲೀಷ್ ಮೀಡಿಯಂ ಸ್ಕೂಲ್‌ಗೆ ಶೇ.100ರಷ್ಟು ಫಲಿತಾಂಶ ಲಭಿಸಿದೆ.

ಪರೀಕ್ಷೆಗೆ ಹಾಜರಾದ ಎಲ್ಲಾ 25 ವಿದ್ಯಾರ್ಥಿಗಳೂ ತೇರ್ಗಡೆ ಹೊಂದಿದ್ದಾರೆ.

ಶಾಲೆಯ ಬಿ.ಎಂ. ಗೌರಿ 615 ಅಂಕ (ಶೇ.98.4) ಗಳಿಸುವ ಮೂಲಕ ತಾಲ್ಲೂಕಿಗೆ ಟಾಪರ್ ಆಗಿ ಹೊರಹೊಮ್ಮಿದ್ದಾರೆ. ಜಿ.ಕೆ. ಪ್ರತಿಭಾ ಪಾಟೀಲ್ 612 ಅಂಕ (ಶೇ.97.92) ಮತ್ತು ಅಮೂಲ್ಯ ಎನ್. ಹೊಳೆಮಠ 599 ಅಂಕ (ಶೇ.95.84) ಗಳಿಸಿದ್ದಾರೆ.

ಶೇ.100ರಷ್ಟು ಫಲಿತಾಂಶ ಗಳಿಸಿರುವ ವಿದ್ಯಾರ್ಥಿಗಳ ಸಾಧನೆಗೆ ಸ್ವಾಮಿ ವಿವೇಕಾನಂದ ಇಂಗ್ಲೀಷ್ ಮೀಡಿಯಂ ಸ್ಕೂಲ್ ಅಧ್ಯಕ್ಷ ಎಂ.ಎನ್. ರಾಯ್ಕರ್, ಕಾರ್ಯದರ್ಶಿ ಎಚ್.ಎಸ್.ಎಂ.ಎ. ಖಾನ್, ಖಜಾಂಚಿ ಕಿರಣ್ ಎನ್. ರಾಯ್ಕರ್, ಆಡಳಿತಾಧಿಕಾರಿ ಸಮನಾ ಗೋಪಿನಾಥ್, ಮುಖ್ಯ ಶಿಕ್ಷಕ ಜಿ.ಬಿ. ಗಿರೀಶ್ ಪಾಟೀಲ್ ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.

## ಹರಿಹರದಲ್ಲಿ ಇಂದು ಔಷಧ ಭವನಕ್ಕೆ ಭೂಮಿ ಪೂಜೆ

ಪಟೇಲ್ ಬಡಾವಣೆಯಲ್ಲಿ ಇಂದು ಬೆಳಗ್ಗೆ 9 ಗಂಟೆಗೆ ಹರಿಹರ ತಾಲ್ಲೂಕು ಔಷಧ ವ್ಯಾಪಾರಿಗಳ ಸಂಘದ ಕಟ್ಟಡ ಔಷಧ ಭವನಕ್ಕೆ ಭೂಮಿ ಪೂಜೆ ನೆರವೇರಲಿದೆ. ಸಂಘದ ಅಧ್ಯಕ್ಷ ಎಂ.ಪ್ರಕಾಶ್ ಅಧ್ಯಕ್ಷತೆ ವಹಿಸುವರು. ಮುಖ್ಯ ಅತಿಥಿಗಳಾಗಿ ಔಷಧ ನಿಯಂತ್ರಕರಾದ ಜಿ.ಸಿ.ರವಿಪ್ರಸಾದ್, ಉಮಾಕಾಂತ್ ಆರ್.ಪಾಟೀಲ್ ಮತ್ತು ಗಿರೀಶ್ ಸಿ ಹಾಗೂ ಸಂಘದ ಗೌರವ ಅಧ್ಯಕ್ಷ ಕಾಳಪ್ಪ ಬೊಂಗಾಳೆ ಆಗಮಿಸುವರು.

# ಕಸ ವಿಲೇವಾರಿ ಘಟಕ ಸ್ಥಳಾಂತರಕ್ಕೆ ಆಗ್ರಹ

ದಾವಣಗೆರೆ, ಮೇ 9- ತಾಲ್ಲೂಕಿನ ಆವರಗೊಳ್ಳ ಸಮೀಪದ ಘನ ತ್ಯಾಜ್ಯ ಕಸ ವಿಲೇವಾರಿ ಘಟಕವನ್ನು ತಕ್ಷಣವೇ ಅಲ್ಲಿಂದ ಸ್ಥಳಾಂತರಿಸಲು ಗ್ರಾಮದ ಮುಖಂಡ ಬಿ. ಎಂ. ಷಣ್ಮುಖಯ್ಯ ಆಗ್ರಹಿಸಿದ್ದಾರೆ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಇಲ್ಲಿನ ಕಸ ವಿಲೇವಾರಿ ಘಟಕದಿಂದ ಗ್ರಾಮಸ್ಥರು ನಿತ್ಯವೂ ತೊಂದರೆ ಎದುರಿಸುತ್ತಿದ್ದೇವೆ ಮತ್ತು ಗದ್ದೆಗೆ ಹೋಗುವ ರೈತರಿಗೆ ನಾಯಿಗಳ ಕಾಟ ಹೆಚ್ಚಾಗಿದೆ ಎಂದರು.

ಸಂಬಂಧಿಸಿದ ಅಧಿಕಾರಿಗಳಿಗೆ ಅನೇಕ ಬಾರಿ ಮನವಿ ಮಾಡಿದರೂ ಕಾರಣ ಹೇಳುತ್ತಾ ನಿರ್ಲಕ್ಷ್ಯ ತೋರುತ್ತಿದ್ದಾರೆ ಎಂದು ದೂರಿದರು.

ನಗರದಿಂದ ದಿನಕ್ಕೆ 200 ಟನ್‌ನಷ್ಟು ಹಸಿ ಹಾಗೂ ಒಣ ಕಸ ಇಲ್ಲಿಗೆ ಬರುತ್ತಿದ್ದು, ಇದನ್ನು ಸರಿಯಾಗಿ ವಿಲೇವಾರಿ ಮಾಡುತ್ತಿಲ್ಲ ಎಂದ ಅವರು ರೈತರಿಗೆ ಹಿಡಿ ಗೊಬ್ಬರವನ್ನೂ ನೀಡುತ್ತಿಲ್ಲ ಎಂದರು.

ಘಟಕದಲ್ಲಿ ಅಗ್ನಿ ಅವಘಡ ಆದ ಕಾರಣ ಗಾಳಿಗೆ ಹಾರಿ ಬಂದ ಕಿಡಿಯಿಂದ ಭತ್ತದ ಬೆಳೆ ಹಾಗೂ ತೆಂಗಿನ ಗಿಡಗಳು ಹಾಳಾಗಿವೆ. ಆದ್ದರಿಂದ ಸಂಬಂಧಿಸಿದ ಅಧಿಕಾರಿಗಳು ಸೂಕ್ತ ಪರಿಹಾರ ಒದಗಿಸುವಂತೆ ಒತ್ತಾಯಿಸಿದರು.

ಗ್ರಾಮದ ಮುಖಂಡ ಬಿ. ವೀರಯ್ಯ, ಡಿ. ಶಶಿಧರಯ್ಯ, ವೀರರಾಜೇಂದ್ರ ಸ್ವಾಮಿ, ಬಸವರಾಜಪ್ಪ, ದೇವರಾಜ್ ಮತ್ತು ಇತರರು ಸುದ್ದಿಗೋಷ್ಠಿಯಲ್ಲಿದ್ದರು.


# ಕೈಲಾಸ ಶಿವಗಣಾರಾಧನೆ



**ದಿ|| ಶ್ರೀ ಶರಣ ಜಿ ರಾಮೇಶ್ವರಪ್ಪ**

ನಿವೃತ್ತ ಪ್ರಾಂಶುಪಾಲರು, ಅಣಜಿ.

ಬಾಣಗೆರೆ ಶ್ರೀಮತಿ ದೊಡ್ಡಮನೆ ಪಾರ್ವತಮ್ಮ ಮತ್ತು ಮಕ್ಕಳು
#3992/123, 16ನೇ ಕ್ರಾಸ್, ಆಂಜನೇಯ ಬಡಾವಣೆ, ದಾವಣಗೆರೆ ಇವರು ಮಾಡುವ ವಿಜ್ಞಾಪನೆಗಳು.


ದಿನಾಂಕ:03–05–2024ನೇ ಶುಕ್ರವಾರ ಬೆಳಿಗ್ಗೆ 4.30 ಗಂಟೆಯಲ್ಲಿ ನಮ್ಮ ಪೂಜ್ಯ ಪತಿ ದೇವರಾದ **ದಿ|| ಶ್ರೀ ಶರಣ ಜಿ ರಾಮೇಶ್ವರಪ್ಪ** ಇವರು ಲಿಂಗೈಕ್ಯರಾದ ಪ್ರಯುಕ್ತ ಇವರ ಆತ್ಮಶಾಂತಿಗಾಗಿ **ಕೈಲಾಸ ಶಿವಗಣಾರಾಧನೆಯನ್ನು** ದಿನಾಂಕ: 11–05–2024 ರ ಶನಿವಾರ ಬೆಳಿಗ್ಗೆ 10.40ಕ್ಕೆ ಲಿಂಗೈಕ್ಯರ ಸ್ವಗೃಹ ದಾವಣಗೆರೆಯಲ್ಲಿ ನೆರವೇರಿಸಲು ಗುರು–ಹಿರಿಯರು ನಿಶ್ಚಯಿಸಿರುವುದರಿಂದ ತಾವುಗಳು ಆಗಮಿಸಿ ಮೃತರ ಆತ್ಮಕ್ಕೆ ಚಿರಶಾಂತಿ ಕೋರಬೇಕಾಗಿ ವಿನಂತಿ.

ಇಂತಿ ದುಃಖತಪ್ತರು
ದೊಡ್ಡಮನೆ ಶ್ರೀಮತಿ ಪಾರ್ವತಮ್ಮ ಮತ್ತು ಮಕ್ಕಳು, ಮೊಮ್ಮಕ್ಕಳು ಹಾಗೂ ದೊಡ್ಡಮನೆ ವಂಶಸ್ಥರು, ಬಾಣಗೆರೆ ಮತ್ತು ಬಂಧು–ಮಿತ್ರರು.
Ph: 98450 95967


## ಎಸ್ಸೆಸ್ಸೆಲ್ಸಿ ಪರೀಕ್ಷೆ : ಸೇಂಟ್ ಜಾನ್ಸ್ ಶಾಲೆಗೆ ಶೇ. 100 ಫಲಿತಾಂಶ

ದಾವಣಗೆರೆ, ಮೇ 9- ನಗರದ ಸೇಂಟ್ ಜಾನ್ಸ್ ಶಾಲೆಗೆ ಶೇ. 100 ಫಲಿತಾಂಶ ಲಭಿಸಿದ್ದು, ಕು. ಅಮೂಲ್ಯ ಎನ್.ಎಸ್. ಹಾಗೂ ವರ್ಷಿತಾ ಹೆಚ್.ಕೆ. 605 ಅಂಕಗಳೊಂದಿಗೆ ಕನ್ನಡದಲ್ಲಿ 125 ಕ್ಕೆ 125 ಅಂಕ ಪಡೆದು ಶಾಲೆಗೆ ಕೀರ್ತಿ ತಂದಿದ್ದಾರೆ. 20 ಡಿಸ್ಟಿಂಕ್ಷನ್, 35 ಪ್ರಥಮ ದರ್ಜೆ, 9 ವಿದ್ಯಾರ್ಥಿಗಳು ದ್ವಿತೀಯ ದರ್ಜೆಯಲ್ಲಿ ಉತ್ತೀರ್ಣರಾಗಿದ್ದು, ಶಾಲೆಗೆ ಕೀರ್ತಿ ತಂದ ವಿದ್ಯಾರ್ಥಿಗಳನ್ನು ಹಾಗೂ ಶಾಲೆಯ ಶಿಕ್ಷಕರನ್ನು ಆಡಳಿತ ಮಂಡಳಿ, ಮುಖ್ಯೋಪಾಧ್ಯಾಯರು, ಸಿಬ್ಬಂದಿ ವರ್ಗದವರು ಅಭಿನಂದಿಸಿದ್ದಾರೆ.


## ತೃತೀಯ ವರ್ಷದ ಪುಣ್ಯಸ್ಮರಣೆ



|| ಶ್ರೀ ಭರ್ಮದೇವ ಪ್ರಸನ್ನ ||
**ಶ್ರೀ ದೊಡ್ಡ ಮುದುಕಪ್ಪ ಕೆ.ಎಂ. ಬಸಪ್ಪನವರು**
ಬಿ.ಕಲಪನಹಳ್ಳಿ, ದಾವಣಗೆರೆ ತಾ.

ನೀವು ನಮ್ಮನ್ನಗಲಿ ಇಂದಿಗೆ ಮೂರು ವರ್ಷಗಳಾದವು. ಸದಾ ನಿಮ್ಮ ಸ್ಮರಣೆಯಲ್ಲಿರುವ, ನೀವು ಹಾಕಿಕೊಟ್ಟ ಮಾರ್ಗದರ್ಶನದಲ್ಲಿ ಮುನ್ನಡೆಯುತ್ತಿರುವ,

ಪತ್ನಿ : ಶ್ರೀಮತಿ ಚಂದ್ರಮ್ಮನವರು ಮತ್ತು
ಮಕ್ಕಳಾದ :
ಶ್ರೀಮತಿ ಶಿಲ್ಪ ಮತ್ತು ರುದ್ರೇಶ್
ಶ್ರೀಮತಿ ವನಜಾ ಮತ್ತು ದಿ|| ಮಹೇಂದ್ರಪ್ಪನವರು, ಸಿದ್ದನೂರು
ಶ್ರೀಮತಿ ಶೀಲಾ ಮತ್ತು ರಮೇಶ್‌ರವರು, ಮಾಕನೂರು
ಶ್ರೀಮತಿ ಸುಜಾತ ಮತ್ತು ಕಲ್ಲೇಶ್‌ರವರು, ಕಾಕಬಾಳು
ಶ್ರೀಮತಿ ರಾಜೇಶ್ವರಿ ಮತ್ತು ಮುರಿಗೇಶ್‌ರವರು, ಕಲಪನಹಳ್ಳಿ
ಮೊಮ್ಮಕ್ಕಳಾದ :
ಸಿದ್ದೇಶ್, ಸ್ಫೂರ್ತಿ, ಸ್ಪಂದನ, ಸಂಕೇತ್, ಗಗನ್, ಭಾಗ್ಯ, ಶಶಾಂಕ್, ಚಿನ್ಮಯಿ, ಸಿಂಚನ, ತೇಜಸ್ ಹಾಗೂ
ದೊಡ್ಡ ಮುದುಕಪ್ಪ ವಂಶಸ್ಥರು ಹಾಗೂ ಬಂಧು-ಮಿತ್ರರು.


## ಕದಳಿ ಮಹಿಳಾ ವೇದಿಕೆಯಿಂದ ಕಾರ್ಮಿಕ ದಿನಾಚರಣೆ



ಹರಿಹರ

ಹರಿಹರ, ಮೇ 9- ನಗರದ ಕದಳಿ ಮಹಿಳಾ ವೇದಿಕೆಯ ವತಿಯಿಂದ ಕಾರ್ಮಿಕ ದಿನಾಚರಣೆ ಆಚರಣೆ ಮಾಡಲಾಯಿತು. ಈ ವೇಳೆ ಕಾಯಕ ಯೋಗಿಗಳಾದ ಆಟೋ ಚಾಲಕರು ಮತ್ತು ಮಾಲೀಕರಿಗೆ ಕದಳಿ ಮಹಿಳಾ ವೇದಿಕೆಯ ವತಿಯಿಂದ ಸನ್ಮಾನಿಸಿ ಗೌರವಿಸಿದರು. ಈ ಸಂದರ್ಭದಲ್ಲಿ ರೂಪಾ ನಾಗರಾಜ್ ಕುರವತ್ತಿ ವಿಜಯಲಕ್ಷ್ಮಿ, ಸುಧಾ, ಶಕುಂತಲಾ ಅಂಗಡಿ, ಶಕುಂತಲಾ ಪವಾರ್, ಜಯಮ್ಮ ಪ್ರೇಮಾ ಓಂಕಾರಪ್ಪ, ಅಂಜು ಸುರೇಶ್, ಮಂಗಳಾ, ಸುನೀತಾ ಮಾರವಳ್ಳಿ, ಆಟೋ ಚಾಲಕ ಬೆಂಕಿ ನಾಗರಾಜ್ ಇತರರು ಹಾಜರಿದ್ದರು.

### ಗಿರಿಧರ ವಲ್ಲೂರು ನಿಧನ



ದಾವಣಗೆರೆ ವಿಜಯನಗರ ಬಡಾವಣೆ, ಸಾಯಿಬಾಬಾ ಮಂದಿರ ರಸ್ತೆ, ಶ್ರೀ ಗದ್ವಾಲ್ ಜಮುಲಮ್ಮ ದೇವಸ್ಥಾನ ಹತ್ತಿರದ ವಾಸಿ ದಿ. ವಲ್ಲೂರು ಕೃಷ್ಣಪ್ಪನವರ ಪುತ್ರ ಶ್ರೀ ಗಿರಿಧರ ವಲ್ಲೂರು ಇವರು ದಿನಾಂಕ 9.5.2024ರ ಗುರುವಾರ ಬೆಳಿಗ್ಗೆ ನಿಧನರಾದರು.ತಾಯಿ, ಪತ್ನಿ, ಓರ್ವ ಪುತ್ರಿ, ಸಹೋದರ, ಸಹೋದರಿಯರು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 10.5.2024ರ ಶುಕ್ರವಾರ ಬೆಳಿಗ್ಗೆ 10ಕ್ಕೆ ಬೂದಾಳ್ ರಸ್ತೆಯ ಹಿಂದೂ ರುದ್ರಭೂಮಿಯಲ್ಲಿ ನೆರವೇರಲಿದೆ.

### ಹೆಚ್.ಎಂ. ಸಂಜಯ್ ನಿಧನ



ದಾವಣಗೆರೆ ನಗರದ ಶಿವಕುಮಾರ ಸ್ವಾಮಿ ಬಡಾವಣೆ ವಾಸಿ ಹೆಚ್.ಎಂ. ಸಿದ್ದೇಶ್ವರ ಅವರ ಪುತ್ರ ಹಾಗೂ ಬಾಪೂಜಿ ಬ್ಯಾಂಕ್ ನೌಕರ ಹೆಚ್.ಎಂ.ಸಂಜಯ್ ಇವರು ದಿನಾಂಕ 9.5.2024ರ ಗುರುವಾರ ಮಧ್ಯಾಹ್ನ 4 ಗಂಟೆಗೆ ನಿಧನರಾದರು. ಮೃತರ ಅಂತ್ಯಕ್ರಿಯೆ ದಿನಾಂಕ 10.05.2024ರ ಶುಕ್ರವಾರ ಮಧ್ಯಾಹ್ನ 12 ಗಂಟೆಗೆ ಶಾಮನೂರು ರುದ್ರಭೂಮಿಯಲ್ಲಿ ನೆರವೇರಲಿದೆ.

### ನಾಗರಸನಹಳ್ಳಿ ಶ್ರೀಮತಿ ನಾಗಮ್ಮ ನಿಧನ



ದಾವಣಗೆರೆ ತಾಲ್ಲೂಕು ನಾಗರಸನಹಳ್ಳಿ ಗ್ರಾಮದ ವಾಸಿ ಅಣಪೂರು ಮಠದ ಲಿಂ. ಹಾಲಯ್ಯನವರ ಧರ್ಮಪತ್ನಿ ಶ್ರೀಮತಿ ನಾಗಮ್ಮ ಅವರು ದಿನಾಂಕ 9.5.2024ರ ಗುರುವಾರ ಸಂಜೆ 5.30ಕ್ಕೆ ಲಿಂಗೈಕ್ಯರಾದರು. ಮಕ್ಕಳು, ಮೊಮ್ಮಕ್ಕಳು, ಸೊಸೆಯಂದಿರು ಹಾಗೂ ಬಂಧು - ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು 10.05.2024ರ ಶುಕ್ರವಾರ ಬೆಳಿಗ್ಗೆ 11.30 ಕ್ಕೆ ನೆರವೇರಿಸಲಾಗುವುದು.


THE TEAM ACADEMY
THE TEAM ACADEMY
Davangere : Vidyanagara BIET Road, Anjaneya Badavane
Shivamogga : 2nd Stage, Ravindra Nagar, Savalanga Road
Expected NEET Score 2024
100+
Medical Seats
Expected
600 Above 38 Students
500 Above 100 Students
661 Akash B B
680 Tejas T
690 Pakkiresh T
665 Harsha Vardhan
653 Mahesh N P
Pakkiresh T 690
Tejas T 680
Harshavardhan 665
Akash B B 661
Mahesh N P 653
Vinay H 645
Lingaraj B M 645
Rajath T B 641
Varshan Kumar 640
Kotresh K V 640
Shashank C 640
Atheeth 640
Ruthu D Rao 636
Shreyas B 635
Basavanagowda 635
Siri T S 630
Manoj Gowda 630
Suhas 630
Tanjeem Sharif 630
Vishnu S 625
Kushal A 625
Pavithra B M 621
Pooja C K 621
Deeksha H 618
Rabiya 617
Basavaraj 615
Niharika 612
Sandeesh M V 610
Spoorthi S S 610
Shantala T L 610
Suprith D K 610
Sri Balaji 608
Amith Katari 606
Shivani B 601
Yashwanth S 600
Kavana P 600
Darhan Nirvani 600
Bharamana Gowda 600
Madhavi G 592
Chiranthan M 590
Sandesh M H 587
Shruthi C S 585
Priyanka C D 584
Hitha 582
Niveditha B K 580
Dayana K S 580
Suraksha 580
Ayush B S 580
Akash F B 580
Sushmitha D 580
& Many More..!
For Davangere : 9035006723, 9035006724, 9035109411, 9900565795, 9538546758
For Shivamogga : 9035006726, 9035006727, 9902303441, 9963505593, 9591319279

# ಕಾಯಕ ಪ್ರಜ್ಞೆ ಸಾರಿದ ಮಹಾಪುರುಷ ಬಸವಣ್ಣ



**ಮರೆಯಲಾಗದ ಮಹಾ ಪುರುಷ**
**ಮಡಕೆಯ ಮಾಡುವಡೆ ಮಣ್ಣೇ ಮೊದಲು,**
**ತೊಡಿಗೆಯ ಮಾಡುವಡೆ ಹೊನ್ನೇ ಮೊದಲು,**
**ಶಿವಪಥವನರಿವಡೆ ಗುರುಪಾದವೇ ಮೊದಲು**
**ಕೂಡಲಸಂಗಮದೇವನರಿವಡೆ ಶರಣರ ಸಂಗವೇ ಮೊದಲು...**
**- ಬಸವಣ್ಣ**

ಭಾರತೀಯ ಸಾಂಸ್ಕೃತಿಕ ಚರಿತ್ರೆಯ ಸಂದರ್ಭದಲ್ಲಿ, ವಿಶೇಷವಾಗಿ ಕರ್ನಾಟಕದ ಐತಿಹಾಸಿಕ, ಸಾಮಾಜಿಕ, ರಾಜಕೀಯ, ಧಾರ್ಮಿಕ ಸಂದರ್ಭದಲ್ಲಿ, ಸಮಗ್ರತೆಯ ಅರ್ಥದಲ್ಲಿ ಸಾಂಸ್ಕೃತಿಕ ಅನನ್ಯತೆಯ ಅರಿವಿನ ಸಂದರ್ಭದಲ್ಲಿ ಬಸವಣ್ಣನವರನ್ನು ಹೊರತುಪಡಿಸಿದಂತೆ ಮಾತಾಡುವುದಾಗಲೀ, ಚರ್ಚಿಸುವುದಾಗಲೀ ಸುಲಭಕ್ಕೆ ಸಾಧ್ಯವಾಗುವಂತಹುದಲ್ಲ. ಮಾನವೀಯತೆಯ ಉತ್ಕರ್ಷ ವೆಂಬಂತೆ ವರ್ಣಮಯ ಬದುಕಿನ ಬಸವೇಶ್ವರರು, ಕ್ರಾಂತಿಕಾರಕ ಸಂಘಟನಾಕಾರನಾಗಿ ಬದುಕಿ ಬಾಳಿದವರು. ತನ್ನ ಕಾಲಕ್ಕೆ ಬಹುಪಾಲು ಕರ್ನಾಟಕದ ಮನೋಧರ್ಮವನ್ನು ರೂಪಿಸಿದ ಹೆಗ್ಗಳಿಕೆಯೂ ಇವರಿಗೆ ಸಲ್ಲುತ್ತದೆ. ವಚನ ಕ್ರಾಂತಿಯ ಗ್ರಹಿಕೆಯಲ್ಲಿ ಕನ್ನಡ ಸಾಹಿತ್ಯ ಮತ್ತು ಭಾಷೆಗೆ ಬಸವಣ್ಣನವರಿಂದ ಸಂದ ಗೌರವ ಮತ್ತು ಪ್ರಯೋಗಶೀಲತೆಯ ಅರ್ಥಗಳು ನಿರಂತರವಾದವುಗಳು.

ಬಸವಣ್ಣನವರು ಹನ್ನೆರಡನೇಯ ಶತಮಾನದಲ್ಲಿದ್ದ ಶರಣ ಪ್ರಮುಖ. ಬಿಜಾಪುರ ಜಿಲ್ಲೆಯ ಬಾಗೇವಾಡಿಯಲ್ಲಿ ಮಾದರಸ ಮತ್ತು ಮಾದಲಾಂಬಿಕೆಯ ಮಗನಾಗಿ ಬ್ರಾಹ್ಮಣ ಕುಟುಂಬದಲ್ಲಿ ಜನಿಸಿದರು. ಆತ ತನ್ನ ಬಾಲ್ಯದಲ್ಲಿಯೇ ಉಪನಯನವನ್ನು, ಬ್ರಾಹ್ಮಣ್ಯವನ್ನು ಧಿಕ್ಕರಿಸಿ ಕಲ್ಯಾಣಕ್ಕೆ ಹೊರಟನು. ಕಲ್ಯಾಣದಲ್ಲಿ ಬಸವಣ್ಣ ಇದ್ದಷ್ಟು ಕಾಲ ಅವನ ಕಾರ್ಯಕ್ಷೇತ್ರ ವಿಪುಲವಾಗಿ ವಿಸ್ತಾರವಾಯಿತು. ಸಮಾಜದ ಕಲ್ಯಾಣ ಕುರಿತು ಮಾನವೀಯ ನೆಲೆಯ ಅವರ ಚಿಂತನೆಯ ಕಾರಣದಿಂದಲೇ ಕಲ್ಯಾಣದ ಒಳ - ಹೊರಗಿನ ಸಾವಿರಾರು ಶರಣರು ಅವರ ಮಾರ್ಗಕ್ಕೆ ಧಾವಿಸಿ ಬಂದರು. ಸಮಾಜದ ಧಾರ್ಮಿಕ ಸಮಾನತೆಗೆ, ಆಶಯಕ್ಕೆ ನೆರವಾಗಿ ನಿಂತರು. 'ಅನುಭವ ಮಂಟಪ' ಸ್ಥಾಪಿತವಾಯಿತು. 'ಶೂನ್ಯ ಸಿಂಹಾಸನದ' ಹೊಸ ಆಲೋಚನೆ ಕಾರ್ಯರೂಪಕ್ಕೆ ಬಂದಿತು.

ಮುಕ್ತ ಚರ್ಚೆ, ಸಂವಾದ, ಚಿಂತನೆ, ವಚನ ಕೃಷಿಯಂತಹ ಕಾರ್ಯ ಸಾಂಗವಾಗಿ ನಡೆಯಿತು. ನುಡಿದಂತೆ ನಡೆಯುವ ಪರಿಪಾಠ ಬೆಳೆಯಿತು. ವರ್ಣ ಸಂಕರರ ಹುಯಿಲಿನ ಮಡಿವಂತರ ನಡುವಿನ ಸಂಘರ್ಷ ಬಹುಶಃ ದೊಡ್ಡದಾಗಿ ಅದು ಕಲ್ಯಾಣ ಕ್ರಾಂತಿಗೆ ಕಾರಣವಾಯಿತು. ಶರಣರೆಲ್ಲಾ ಚದುರಿದರು, ಬಸವಣ್ಣ ಕೂಡಲ ಸಂಗಮಕ್ಕೆ ತೆರಳಿದರು.

ಬಸವಣ್ಣನವರ ವಚನಗಳು ಸಾವಿರಕ್ಕೂ ಅಧಿಕ ದೊರಕಿವೆ.' ಕೂಡಲ ಸಂಗಮದೇವ' ಇವರ ವಚನದ ಅಂಕಿತ. ಮೂಲತಃ ಇವು ಸಾಹಿತ್ಯ ಕೃತಿಗಳಾಗುವ ಹಂಬಲದಿಂದ ಉದ್ದೇಶದಿಂದ ರಚಿತವಾದವೆಂದು ಹೇಳುವಂತಿಲ್ಲ. ಜನರ ಬದುಕನ್ನು, ಸಮಾಜವನ್ನು ನೇರ್ಪುಗೊಳಿಸುವ ಪ್ರಯತ್ನದಂತೆ ಕಾಣುತ್ತವೆ. ಇಂತಹ ಪ್ರಯತ್ನಕ್ಕೆ ಬಸವೇಶ್ವರ ಬಳಸಿದ ಭಾಷೆ ಮಧ್ಯಮ ಕನ್ನಡ, ಅಂದರೆ ಜನಭಾಷೆಯ ಧಾಟಿ ಅದು ಶಿಷ್ಟವಾಗಿರಲಿಲ್ಲ. ಕಾಳಜಿಯ, ಸಂವೇದನೆಯ, ಅನುಭವದ ಅರಿವಿನಿಂದ ರೂಪುಗೊಂಡ ಮಹತ್ವದ ಕ್ರಾಂತಿಕಾರಕ ಭಾಷೆಯೆಂದು ಬಸವಣ್ಣನವರ ವಚನ ಭಾಷೆಯನ್ನು ಗುರುತಿಸಬಹುದು. ಅವರ ವೈಯಕ್ತಿಕ ಬದ್ಧತೆ, ಆಚಾರ - ವಿಚಾರ, ತಾವು ಕಂಡ ಸಮಾಜ ಇತ್ಯಾದಿ ಸತ್ಯಗಳನ್ನು ಕುರಿತು ಅವರು ಬರೆದರು. ಸರ್ವರ ಉದಯವನ್ನು ಆ ಅರ್ಥದಲ್ಲಿಯೇ ಕಾಣಲು ಬಯಸಿದರು. ತನ್ಮೂಲಕ ' ಭಕ್ತಿ ಭಂಡಾರಿ'ಯೆಂದೂ ಅನ್ವರ್ಥರಾದರು. ಭಕ್ತಿ- ಕರ್ಮಗಳ ಸಮನ್ವಯವಾದ ಬಸವಣ್ಣ " ಕಾಯಕವೇ ಕೈಲಾಸ" ವೆಂದು ಬದುಕಿದವನು.

'ಮರ್ತ್ಯಲೋಕವೆಂಬುದು ಕರ್ತಾರನ ಕಮ್ಮಟವಯ್ಯ', 'ನುಡಿದರೆ ಮುತ್ತಿನ ಹಾರದಂತಿರಬೇಕು', 'ತುಪ್ಪದ ಸವಿಗೆ ಅಲಗ ನೆಕ್ಕುವ ಸೊಣಗನಂತೆ ಬಾಳುವ', 'ನಿಮ್ಮ ನಿಮ್ಮ ಮನವ ಸಂತೈಸಿ ಕೊಳ್ಳಿ', 'ಎನ್ನ ಕಾಯವ ದಂಡಿಗೆ ಮಾಡಯ್ಯ', 'ನಾಳೆಬಪ್ಪುದು ನಮಗಿಂದೇ ಬರಲಿ', ' ತನು ಕರಗಿ ನೆರೆವ ಸುಖವ ನಾನೇನೆಂಬೆ', 'ಕಲ್ಲ ನಾಗರ ಕಂಡರೆ ಹಾಲನೆರೆ ಎಂಬರು', ' ಉಣ್ಣದ ಲಿಂಗಕ್ಕೆ ಬೋನವ ಹಿಡಿ ಎಂಬರಂತೆ', 'ಸಕಲ ಜೀವಾತ್ಮರಿಗೆ ಲೇಸನೇ ಬಯಸುವ ನಮ್ಮ ಕೂಡಲಸಂಗನ ಶರಣರೇ ಕುಲಜರು', 'ದಯವಿಲ್ಲದ ಧರ್ಮವಾವುದಯ್ಯ', 'ತಮಂಧ ಘನ, ಜ್ಯೋತಿ ಕಿರಿದೆನ್ನಬಹುದೆ?', - ಹೀಗೆ ಬಸವಣ್ಣನವರ ವಚನ ಲಹರಿ ವೈವಿಧ್ಯಮಯವಾಗಿ ಸೃಷ್ಟಿಗೊಂಡಿದೆ.

ಒಟ್ಟಾರೆಯಾಗಿ ಬಸವಣ್ಣನವರ ವಚನಗಳ ವಸ್ತು ವಿಸ್ತಾರವಾದುದು. ಅದು ಬಹುಶಃ ದೃಷ್ಟಿಯಿಂದ - ಸಮಷ್ಟಿಯೆಡೆಗೆ ಚಲಿಸುವಂತಹುದು. ಅದು ಒಳಗೊಳ್ಳದ ವಿಚಾರ - ವಿಶೇಷಗಳಿಲ್ಲ ವೆಂದರೆ ಉತ್ಪ್ರೇಕ್ಷೆಯಾಗಲಾರದು. ಜ್ಞಾನ, ಭಕ್ತಿ, ಸಂಸಾರ ವಿರಕ್ತಿ, ಆತ್ಮನಿರೀಕ್ಷಣೆ, ಆತ್ಮದೂಷಣೆ, ಆರ್ತ ಭಕ್ತಿ, ಅಂತರಂಗ ನಿರೀಕ್ಷಣೆ, ಸಾಮಾಜಿಕ ವಿಡಂಬನೆ, ಟೀಕೆ - ವ್ಯಾಖ್ಯಾನ, ಧರ್ಮ- ಮೌಢ್ಯತೆ, ನೀತಿಬೋಧೆ, ಉಪದೇಶ ಎಂಬೆಲ್ಲಾ ಆಯಾಮಗಳಲ್ಲಿ ಬಸವಣ್ಣನವರ ವಚನಗಳು ಹರಡಿಕೊಂಡಿವೆ. ಸಾಹಿತ್ಯಿಕ, ಸರಳತೆ, ಪ್ರಸನ್ನತೆ, ಲಾಲಿತ್ಯಗಳಿಗೆಲ್ಲಾ ಮುನ್ನುಡಿಯಾದಂತಿರುವ ಇವರ ವಚನಗಳು, ಹೃದಯ ಸಂವಾದದ ರೂಪದಲ್ಲಿ, ಹೃದಯ ಸ್ಪರ್ಶಿಯಾಗಿಯೂ ಸಹೃದಯರನ್ನು ಒಳಗೊಂಡಿವೆ. ತನ್ಮೂಲಕ ಲಿಂಗಾಯತ ಧರ್ಮದ, ವಿಶ್ವ ಧರ್ಮದ, ಮಾನವತೆಯ ಅರ್ಥದ ವಿಚಾರವಂತಿಕೆಯ ನೆಲೆಯಿಂದ ಕನ್ನಡ ಸಾಹಿತ್ಯಕ್ಕೆ ವಿಶ್ವ ಸಾಹಿತ್ಯ ಸಂದರ್ಭದಲ್ಲಿಯೂ ವಿಶೇಷ ಮನ್ನಣೆ ತಂದುಕೊಡುವ ಶಕ್ತಿ ಪಡೆದಿದೆ.

**- ಮಾಡೋಳ್ ಗೌಡ್ರು ನಾಗರಾಜ್**
ಕುಂದೂರು, ಶಿಕ್ಷಕರು, ದಾವಣಗೆರೆ.

## ಬಸವಣ್ಣನವರಿಗೆ ನಮನ

ಬಸವ ಜಯಂತಿಯ ಶುಭ ದಿನವಿಂದು
ಬಸವಣ್ಣನವರ ನೆನೆಯೋಣ
ಅಸಮಾನ ಅಧ್ಯಾತ್ಮಿಕ ತತ್ವಗಳ
ಬಸವಣ್ಣರ ವಚನವ ಹಾಡೋಣ

ಅಂತರಂಗದಲ್ಲಿ ಇರುವ ದೇವನ
ಸತತ ಲಿಂಗದಿ ಪೂಜಿಸುತ
ಚಿಂತೆ ಬಿಟ್ಟು ಹೃದಯದೇಗುಲದಲಿ
ಅಂತರಾತ್ಮನನು ಸ್ಥಾಪಿಸುತ

ಶರೀರವೇ ದೇವಗೆ ದೇಗುಲ ಎನ್ನುತ
ಪರಿಪರಿ ಸದ್ಬೋಧನೆ ನೀಡುತ್ತ
ಅರಿವೀಯುವ ಅನುಭಾವವ ಅರಿತ
ಶರಣರ ಮಂಟಪದಲಿ ಸೇರಿಸುತ

ಕಾಯಕವೇ ಕೈಲಾಸ ಎನ್ನುತ
ದಯ ಧರ್ಮದ ಮೂಲವೆನ್ನುತ
ಕಾಯೇನವಾಚಾಮನಸಾ ಶುದ್ಧರಾಗಿ
ದಯಾಮಯಿ ಒಲಿವ ಎಂದೆನುತ

ಮುತ್ತಿನಹಾರದಂತೆ ಮಾತಾಡು ಎನ್ನುತ
ಚಿತ್ತ ಆತ್ಮಲಿಂಗನಲಿ ನಿಲ್ಲಿಸೆನ್ನುತ
ಉತ್ತಮ ಸಮಾಜದ ನಿರ್ಮಾಣಮಾಡುತ
ಉತ್ತಮ ಗುಣಗಳ ಹೇಳಿಕೊಡುತ

ನಮಿಸುವ ಇಂದು ಅನುಭಾವಿ ಗುರುವಿಗೆ
ಸಮವಿಲ್ಲದ ಅಧ್ಯಾತ್ಮ ಜ್ಞಾನಿಗೆ
ಸುಮನೋಹರ ಕೂಡಲಸಂಗಮದಲ್ಲಿ
ರಾಮಲಿಂಗನ ಧ್ಯಾನಿಸುತಿರುವನಿಗೆ

**- ಶ್ರೀ ಕೃಷ್ಣಾರ್ಪಣಮಸ್ತು**
**ರೂಪಶ್ರೀ ಶಶಿಕಾಂತ್**

## ಜಗಜ್ಯೋತಿ ಬಸವಣ್ಣ...



ಜಗವ ಬೆಳಗಲೆಂದು ಇಳೆಗೆ ಬಂದ ಬಸವ
ಅಂಗೈಲೇ ಹಿಡಿದರು ಇಷ್ಟಾರ್ಥ ಲಿಂಗವ
ಕಲಿತರು ಬಾಲ್ಯದಿ ಅಪಾರ ಜ್ಞಾನವ
ಮುಡಿಪಿಟ್ಟರು ತಮ್ಮ ಜೀವನ ಅಳಿಸಲು
ಜಗದ ಅಜ್ಞಾನವ

ಕಟ್ಟಿದರು ಕಲ್ಯಾಣದಲ್ಲಿ ಅನುಭವ ಮಂಟಪ
ಹರಿಸಿದರು ಶರಣರಿಂದ ಜ್ಞಾನದ ಇಂಪ
ತೋರಿದರು ವಚನಗಳ ಅನುಭವದ ರೂಪ
ಹಚ್ಚಿದರು ಕಲ್ಯಾಣದಲ್ಲಿ ಸಾಮರಸ್ಯದ ದೀಪ

ಜಾತಿ ಮತ ತೊಲಗಿಸಲು ಮಾಡಿದರು
ಅಂತರ್ಜಾತಿ ವಿವಾಹ
ಸಾರಿದರು ಸಕಲರು ಒಂದೇ ಎಂಬ ಭಾವ
ಅರಳಿಸಿದರು ಮೌಢ್ಯ ವ ತೊಲಗಿಸಲು
ಕ್ರಾಂತಿಯ ಹೂವ
ನೊಂದವರ ಮುಖದಲ್ಲಿ ಮೂಡಿಸಿದರು ನಗುವ

ಸ್ಥಾಪಿಸಿದರು ಜಗದ ಮೊದಲ ಪ್ರಜಾಪ್ರಭುತ್ವ
ಜನ ಸಾಮಾನ್ಯರ ಬಾಳಿಗೂ ನೀಡಿದರು ಅಸ್ತಿತ್ವ
ಬೋಧಿಸಿದರು ಎಲ್ಲರಿಗೂ ಸ್ವಾತಂತ್ರ್ಯ,
ಸಮಾನತೆ, ಭ್ರಾತೃತ್ವ
ಕಾಯಕವೇ ಕೈಲಾಸ ಅವರ ಮೂಲ ತತ್ವ

ದಯವೇ ಧರ್ಮದ ಮೂಲ ಮಂತ್ರ
ಬಯಲು ಮಾಡಿದರು ಸವರ್ಣೀಯರ ಕುತಂತ್ರ
ಜಗವ ಬೆಳಗಲೆಂದು ಬಂದ ಜಗಜ್ಯೋತಿ
ಎಲ್ಲ ಕಾಲಕೂ ಸಲ್ಲುವ ನಿಮ್ಮಯ ನೀತಿ...

**- ಬಸವರಾಜ ಕರುವಿನ**
ಬಸವನಾಳು

## ನಗರದಲ್ಲಿ ಇಂದು ಬಸವಣ್ಣನವರ ಜಯಂತ್ಯೋತ್ಸವ

ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತು (ದಾವಣಗೆರೆ) ಬಸವ ಬಳಗ ಇವರ ಸಹಯೋಗದಲ್ಲಿ ವಿಶ್ವಗುರು ಜಗಜ್ಯೋತಿ ಬಸವಣ್ಣನವರ ಜಯಂತೋತ್ಸವವನ್ನು ಬಸವ ಬಳಗದಲ್ಲಿ ಇಂದು ಸಂಜೆ 5ಕ್ಕೆ ಹಮ್ಮಿಕೊಳ್ಳಲಾಗಿದೆ.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಎ.ಹೆಚ್. ಹುಚ್ಚಪ್ಪ ಮಾಸ್ತರ್ ವಹಿಸುವರು. 'ಬಸವಣ್ಣ ನಿಜಭಕ್ತನಿಗಿಲ್ಲ ಮೌಢ್ಯ' ವಿಷಯ ಕುರಿತು ಪ್ರಾಧ್ಯಾಪಕ ಡಾ. ರಣದೀರ ಮಾತನಾಡುವರು.

## ಹೊನ್ನಾಳಿ ತಾಲ್ಲೂಕು : ಎಸ್ಸೆಸ್ಸೆಲ್ಸಿ ಫಲಿತಾಂಶದಲ್ಲಿ ಜಿಲ್ಲೆಗೆ 2ನೇ ಸ್ಥಾನ



ಹೊನ್ನಾಳಿ, ಮೇ 9- ಹೊನ್ನಾಳಿ - ನ್ಯಾಮತಿ ಅವಳಿ ತಾಲ್ಲೂಕುಗಳಲ್ಲಿ ಶೇ.80.72 ಎಸ್ಸೆಸ್ಸೆಲ್ಸಿ ಫಲಿತಾಂಶ ಬಂದಿದ್ದು, ಈ ಸಾಧನೆಯಿಂದಾಗಿ ಜಿಲ್ಲೆಯಲ್ಲಿ 2ನೇ ಸ್ಥಾನ ದಕ್ಕಿದೆ ಎಂದು ಬಿಇಒ ಎಸ್.ಸಿ.ನಂಜರಾಜ್ ಪತ್ರಿಕೆಗೆ ಮಾಹಿತಿ ನೀಡಿದರು.

ಅವಳಿ ತಾಲ್ಲೂಕುಗಳ 2 ಸರ್ಕಾರಿ ಮತ್ತು 4 ಖಾಸಗಿ ಸೇರಿದಂತೆ ಒಟ್ಟು 6 ಶಾಲೆಗಳು ಎಸ್ಸೆಸ್ಸೆಲ್ಸಿ ಫಲಿತಾಂಶದಲ್ಲಿ ಶೇ.100 ಫಲಿತಾಂಶ ಪಡೆದಿವೆ. ಅವುಗಳಲ್ಲಿ ಹೊನ್ನಾಳಿ ಪಟ್ಟಣದ ಸ್ವಾಮಿ ವಿವೇಕಾನಂದ ಆಂಗ್ಲ ಮಾಧ್ಯಮ ಪ್ರೌಢಶಾಲೆಯ 25, ಸ್ವಾಮಿ ವಿವೇಕಾನಂದ ಮೆಮೋರಿಯಲ್ ಆಂಗ್ಲ ಮಾಧ್ಯಮ ಪ್ರೌಢಶಾಲೆ ದುರ್ಗಿಗುಡಿಯ 35, ಗೊಲ್ಲರಹಳ್ಳಿಯ ಶ್ರೀ ವೆಂಕಟೇಶ್ವರ ಪ್ರೌಢಶಾಲೆಯ 37, ಹೆಚ್.ಕಡದಕಟ್ಟೆಯ ಕಿತ್ತೂರು ರಾಣಿ ಚನ್ನಮ್ಮ ವಸತಿ ಶಾಲೆಯ 50, ನ್ಯಾಮತಿ ತಾಲ್ಲೂಕಿನ ಮಾದನಬಾವಿಯ ಮೊರಾರ್ಜಿ ದೇಸಾಯಿ ವಸತಿ ಶಾಲೆಯ 46, ಚೀಲೂರಿನ ರಾಷ್ಟ್ರೀಯ ಆಂಗ್ಲಮಾಧ್ಯಮ ಪ್ರೌಢಶಾಲೆಯ 35 ವಿದ್ಯಾರ್ಥಿಗಳು ಉತ್ತಮ ಅಂಕಗಳೊಂದಿಗೆ ತೇರ್ಗಡೆಯಾಗಿದ್ದಾರೆ ಎಂದು ಮಾಹಿತಿ ನೀಡಿದರು.

## ಹೊನ್ನಾಳಿ : ಇಂದು ರಕ್ತದಾನ ಶಿಬಿರ

ಬಸವ ಜಯಂತಿ ಅಂಗವಾಗಿ ಕಡದಕಟ್ಟೆಯ ಪೆಟ್ರೋಲ್ ಬಂಕ್ ಬಳಿ ಸಾರ್ವಜನಿಕವಾಗಿ ಹಾಗೂ ಹೊನ್ನಾಳಿ ಸರ್ಕಾರಿ ಆಸ್ಪತ್ರೆ ಒಳರೋಗಿಗಳಿಗೆ ಬ್ರೆಡ್ ಹಾಗೂ ಹಣ್ಣುಗಳ ವಿತರಣೆ ಮಾಡುವುದಾಗಿ ವೀರಶೈವ ಸಮಾಜದ ಕಾಂಗ್ರೆಸ್ ಯುವ ಮುಖಂಡ ಅರಕೆರೆ ಅಮಿತ ತಿಳಿಸಿದ್ದಾರೆ. ಇಂದು ಬೆಳಗ್ಗೆ 10 ಗಂಟೆಗೆ ಹೊನ್ನಾಳಿ ಸರ್ಕಾರಿ ಆಸ್ಪತ್ರೆಯಲ್ಲಿ ಹಾಗೂ ದಿನಾಂಕ 12ರ ಭಾನುವಾರ ಕಡದಕಟ್ಟೆ ಸಚಿನ್ ನಯಾರ ಪೆಟ್ರೋಲ್ ಬಂಕ್ ಬಳಿ ರಕ್ತದಾನ ಶಿಬಿರ ಹಾಗೂ ಹಣ್ಣುಗಳ ವಿತರಣೆ ಮಾಡುವುದಾಗಿ ತಿಳಿಸಿದ್ದಾರೆ.

# ನಗರದಲ್ಲಿ ಇಂದು ವಿವಿಧೆಡೆಯಲ್ಲಿ ಬಸವ ಜಯಂತ್ಯೋತ್ಸವ



**ವಿರಕ್ತಮಠ :** ಶ್ರೀ ವಿರಕ್ತ ಮಠದ ವತಿಯಿಂದ ಶಿವಯೋಗಾಶ್ರಮ ವಿರಕ್ತ ಮಠದ ಚರಮೂರ್ತಿಗಳು ಹಾಗೂ ಚಿತ್ರದುರ್ಗ ಮುರುಘಾ ಮಠದ ಉಸ್ತುವಾರಿ ಶ್ರೀಗಳಾದ ಶ್ರೀ ಬಸವಪ್ರಭು ಸ್ವಾಮೀಜಿ ನೇತೃತ್ವದಲ್ಲಿ ಇಂದು 112ನೇ ಬಸವ ಜಯಂತ್ಯೋತ್ಸವವನ್ನು ಆಚರಿಸಲಾಗುವುದು.

ಬೆಳಿಗ್ಗೆ 7.30 ರಿಂದ ಶ್ರೀ ವಿರಕ್ತಮಠ ಲಿಂಗಾಯ ತರುಣ ಸಂಘ ಬಸವಣ್ಣನವರ ಭಾವಚಿತ್ರದೊಂದಿಗೆ, ಬಸವಾದಿ ಶರಣರ ವಚನ ಗ್ರಂಥ ಮೆರವಣಿಗೆಯು ಶ್ರೀ ವಿರಕ್ತ ಮಠದಿಂದ ಆರಂಭಗೊಂಡು ಬಕ್ಕೇಶ್ವರ ದೇವಸ್ಥಾನ, ಹಾಸಬಾವಿ ವೃತ್ತ, ಬಸವರಾಜಪೇಟೆ ನಂತರ ಶ್ರೀ ವಿರಕ್ತಮಠ ತಲುಪುವುದು.

ಬೆಳಿಗ್ಗೆ 9.30ಕ್ಕೆ ಶ್ರೀ ವಿರಕ್ತಮಠದಲ್ಲಿ ನಡೆಯುವ ತೊಟ್ಟಿಲು ಕಾರ್ಯಕ್ರಮದಲ್ಲಿ ನವಜಾತ ಶಿಶುಗಳಿಗೆ ನಾಮಕರಣ ಮಾಡಲಾಗುವುದು.

ಬೆಳಿಗ್ಗೆ 10ಕ್ಕೆ ಬಸವ ಜಯಂತಿ ಪ್ರಾರಂಭಿಸಿದ ಶ್ರೀ ಮೃತ್ಯುಂಜಯ ಅಪ್ಪಗಳು ಮತ್ತು ಶ್ರೀ ಹರ್ಡೇಕರ್ ಮಂಜಪ್ಪನವರ ಸ್ಮರಣೋತೋತ್ಸವ, ಬಸವ ಜಯಂತಿ ಉತ್ಸವದಲ್ಲಿ ಲಿಂಗಾಯತ ತರುಣ ಸಂಘದ ಸಂಚಾಲಕರಾದ ಕಣಕುಪ್ಪಿ ಮುರುಗೇಶಪ್ಪ ಉಪಸ್ಥಿತರಿರುವರು. ಜಾನಪದ ಜಂಗಮ ಗಂಜಿಗಟ್ಟೆ ಕೃಷ್ಣಮೂರ್ತಿ ಅವರಿಂದ ವಚನ ಗಾಯನ ನಡೆಯಲಿದೆ.

**ದೊಡ್ಡಪೇಟೆಯ ಬಸವ ಮಂಟಪ :** ದೊಡ್ಡಪೇಟೆಯ ಬಸವ ಮಂಟಪದ ಶ್ರೀ ಬಸವೇಶ್ವರ ದೇವಸ್ಥಾನದಲ್ಲಿ ಇಂದು -ನಾಳೆ ಶ್ರೀ ಬಸವೇಶ್ವರ ಜಯಂತ್ಯೋತ್ಸವ ನಡೆಯಲಿದ್ದು, ಇಂದು ಬೆಳಿಗ್ಗೆ 9 ಗಂಟೆಗೆ ತೊಟ್ಟಿಲು ಪೂಜೆ, ಸಂಜೆ 6 ಗಂಟೆಗೆ ಹೂವಿನ ಅಲಂಕಾರದ ಅಡ್ಡಪಲ್ಲಕ್ಕಿಯಲ್ಲಿ ಶ್ರೀ ಬಸವೇಶ್ವರ ಬೆಳ್ಳಿ ಪುತ್ಥಳಿಯ ಭವ್ಯ ಮೆರವಣಿಗೆಯು ರಾಜಬೀದಿಗಳಲ್ಲಿ ಜರುಗಲಿದೆ.

ನಾಳೆ ಶನಿವಾರ ಸಾರ್ವಜನಿಕರಿಗೆ ಅನ್ನ ದಾಸೋಹ ಏರ್ಪಡಿಸಲಾಗಿದ್ದು, ಕೈಗಾರಿಕೋದ್ಯಮಿ ಅಥಣಿ ಎಸ್. ವೀರಣ್ಣ ಸಹೋದರರು ದಾಸೋಹದ ಸೇವಾರ್ಥಿಗಳಾಗಿದ್ದಾರೆ.

**ಬಸವರಾಜಪೇಟೆ :** ಬಸವರಾಜಪೇಟೆಯ ಶ್ರೀ ಬಸವೇಶ್ವರ, ಶ್ರೀ ವೀರೇಶ್ವರ ದೇವಸ್ಥಾನ ಸಮಿತಿ ವತಿಯಿಂದ ಇಂದು ಬಸವ ಜಯಂತಿ ಪ್ರಯುಕ್ತ ಬೆಳಿಗ್ಗೆ 5 ಗಂಟೆಗೆ ಸ್ವಾಮಿಗೆ ರುದ್ರಾಭಿಷೇಕ ನಡೆಯಲಿದೆ.

ಮಧ್ಯಾಹ್ನ 12.30 ರಿಂದ ಅನ್ನ ಸಂತರ್ಪಣೆ ಏರ್ಪಡಿಸಲಾಗಿದ್ದು, ಸಂಜೆ 6 ಗಂಟೆಗೆ ಬಸವ ಜಯಂತಿ ಉತ್ಸವವನ್ನು ಪ್ರಮುಖ ಬೀದಿಗಳಲ್ಲಿ ವಿಜೃಂಭಣೆಯಿಂದ ನಡೆಸಲಾಗುವುದು ಎಂದು ಸಮಿತಿಯ ಅಧ್ಯಕ್ಷ ಮಲ್ಲಪ್ಪ ಬಿರಾದಾರ, ಪ್ರಧಾನ ಕಾರ್ಯದರ್ಶಿ ಎಂ. ದೊಡ್ಡಪ್ಪ ತಿಳಿಸಿದ್ದಾರೆ.

**ಕಾಯಿಪೇಟೆ :** ಕಾಯಿಪೇಟೆಯ ಶ್ರೀ ಬಸವೇಶ್ವರ ನಗರದಲ್ಲಿರುವ ಶ್ರೀ ಬಸವೇಶ್ವರ ದೇವಸ್ಥಾನದಲ್ಲಿ ಇಂದು - ನಾಳೆ ಶ್ರೀ ಬಸವೇಶ್ವರ ಜಯಂತ್ಯೋತ್ಸವ ನಡೆಯಲಿದೆ. ಇಂದು ಬೆಳಿಗ್ಗೆ 7 ರಿಂದ 9ರ ವರೆಗೆ ತೊಟ್ಟಿಲು ಪೂಜೆ, ಸಂಜೆ 5 ಗಂಟೆಗೆ ವಿದ್ಯುತ್ ಅಲಂಕೃತ ಭವ್ಯವಾದ ಹೂವಿನ ಮಂಟಪದಲ್ಲಿ ಶ್ರೀ ಬಸವೇಶ್ವರ ಮೂರ್ತಿಯ ಮೆರವಣಿಗೆ ರಾಜಬೀದಿಗಳಲ್ಲಿ ಜರುಗಲಿದೆ.

ನಾಳೆ ಶನಿವಾರ ಸರ್ವ ಭಕ್ತಾದಿಗಳಿಗೆ ಅನ್ನ ಸಂತರ್ಪಣೆ ಏರ್ಪಡಿಸಲಾಗಿದೆ ಎಂದು ಶ್ರೀ ಬಸವೇಶ್ವರ ದೇವಸ್ಥಾನ ಸೇವಾ ಸಂಘದ ಪದಾಧಿಕಾರಿಗಳು ತಿಳಿಸಿದ್ದಾರೆ.


ಜೈ ಶ್ರೀಮನ್ನಾರಾಯಣ
ವಿಕಾಸ ತರಂಗಿಣಿ, ದಾವಣಗೆರೆ
29ನೇ ವರ್ಷದ
ಉಚಿತ ಮಜ್ಜಿಗೆ ವಿತರಣೆ ಕಾರ್ಯಕ್ರಮ
ಮಾರ್ಚ್ 23 ರಿಂದ 2 ತಿಂಗಳ ಕಾಲ.
ಇಂದಿನ ಮಜ್ಜಿಗೆ ಪ್ರಾಯೋಜಕರು :-
ಶ್ರೀಮತಿ ರಾಮಲಕ್ಷ್ಮಿ ಸರೋಜ, ಶ್ರೀ ಕೊಲ್ಲೆಪಲ್ಲಿ ಸೂರ್ಯನಾರಾಯಣ ಇವರ ವಿವಾಹ ವಾರ್ಷಿಕೋತ್ಸವ ಪ್ರಯುಕ್ತ ವೆಂಕಟರತ್ನ ಜನರಲ್ ಸ್ಟೋರ್ಸ್, ಚಾಮರಾಜಪೇಟೆ, ದಾವಣಗೆರೆ ಇವರುಗಳ ಸೇವಾರ್ಥ.
ಸ್ಥಳ : ಮಹಾನಗರ ಪಾಲಿಕೆ ಆವರಣ

ಬೇಕಾಗಿದ್ದಾರೆ
ಜಾಹೀರಾತು ವಿಭಾಗದಲ್ಲಿ ಕೆಲಸ ಮಾಡಲು ಪುರುಷರು ಬೇಕಾಗಿದ್ದಾರೆ.
ಸಂಜೆ 6 ರಿಂದ 12ರವರೆಗೆ
ಭೇಟಿ ಸಮಯ : ಬೆ. 11.30 ರಿಂದ ಸಂ. 5.00
08192 254736

ಕರ್ನಾಟಕ ಮುಕ್ತ ವಿದ್ಯಾಲಯ (KOS)
ಕೇಂದ್ರ ಹಾಗೂ ರಾಜ್ಯ ಸರ್ಕಾರದ ಶಾಶ್ವತ ಮಾನ್ಯತೆ ಪಡೆದಿದೆ
ಶಿಕ್ಷಣ ವಂಚಿತರಾದವರಿಗೆ ನೇರ ಪರೀಕ್ಷೆ
SSLC/PUC/ಪದವಿ/ಸ್ನಾತಕೋತ್ತರ ಪದವಿ & ಡಿಪ್ಲೋಮಾ ಕೋರ್ಸ್‌ಗಳಿಗೆ ಪ್ರವೇಶ ಪ್ರಾರಂಭ
ಶ್ರೀ ಸಾಯಿ ಕರೆಸ್ಪಾಂಡೆನ್ಸ್ ಕಾಲೇಜ್
ಸೋಮ ಮೆಡಿಕಲ್ ಮೇಲೆ, ಗಣೇಶ ದೇವಸ್ಥಾನದ ಹಿಂಭಾಗ, ರಾಂ ಅಂಡ್ ಕೋ ಸರ್ಕಲ್, ದಾವಣಗೆರೆ.
87490 24789, 87620 58369, 82173 02649

ಇಂಡಸ್ಟ್ರೀಯಲ್, ಕಮರ್ಷಿಯಲ್ ಸೈಟುಗಳು ಮಾರಾಟಕ್ಕಿವೆ
ಬಂಬೂಬಜಾರ್ ಪಕ್ಕ, ಬಸಾಪುರ ರಸ್ತೆಯಲ್ಲಿ ಫೈನಲ್ ಅಪ್ರೂವಲ್ ಹಾಗೂ ಡೋ.ನಂಬರ್ ಹೊಂದಿರುವ 2700 ಚ.ಅಡಿ ಕಾರ್ನರ್ ಮತ್ತು 4200 ಅ.ಅಡಿ ಅಳತೆಯ 2 ಸೈಟುಗಳು ಮಾರಾಟಕ್ಕಿವೆ.
98441 88191

ಸ್ಪೋಕನ್ ಇಂಗ್ಲಿಷ್
100% ಅತ್ಯುತ್ತಮ ಫಲಿತಾಂಶ
ಟ್ಯೂಷನ್ ಕನ್ನಡ, ಹಿಂದಿ, ವೇದಿಕ್ ಮ್ಯಾಥ್ಸ್, ಹ್ಯಾಂಡ್‌ರೈಟಿಂಗ್
ಮಿರಜ್‌ಕರ್ ಟ್ಯುಟೋರಿಯಲ್
ಮೊ. : 90369 96243

ಬೇಕಾಗಿದ್ದಾರೆ
ಎಸ್ ಎಸ್.ಎಲ್ ಸಿ ಪಾಸ್/ಫೇಲಾಗಿರುವವರು ಸೇಲ್ಸ್ ಮನ್ ಹಾಗೂ ಡಿಲೆವರಿ ಬಾಯ್ಸ್ ಕೆಲಸಕ್ಕೆ ಬೇಕಾಗಿದ್ದಾರೆ. 18 ವರ್ಷ ಮೇಲ್ಪಟ್ಟ ಅನುಭವವುಳ್ಳವರು ಸಂಪರ್ಕಿಸಿ :
ಮಣಿಕಂಠ ಏಜೆನ್ಸೀಸ್
ಜಯದೇವ ಪ್ರೆಸ್ ಹಿಂಭಾಗ, ಚೌಕಿಪೇಟೆ, ದಾವಣಗೆರೆ.
94482 33326, 78991 35660

ಮನೆಗಳು ಬಾಡಿಗೆಗೆ, ಲೀಸ್‌ಗೆ ಇವೆ
ಸಿಂಗಲ್ ಬೆಡ್ ರೂಮ್, ಡಬಲ್ ಬೆಡ್ ರೂಮ್, ಮೂರು ಬೆಡ್ ರೂಮ್ ಮನೆಗಳು ಇವೆ.
ವಿದ್ಯಾನಗರ, ತರಳಬಾಳು ಬಡಾವಣೆ, ಆಂಜನೇಯ ಬಡಾವಣೆ, ಶಿವಕುಮಾರ ಸ್ವಾಮಿ ಬಡಾವಣೆಗಳಲ್ಲಿ
ಸ್ವಾಮಿ ಏಜೆಂಟ್, ವಿದ್ಯಾನಗರ
97421 44715

SSLC FAIL ಆದ ವಿದ್ಯಾರ್ಥಿಗಳಿಗೆ TUITION
Sub : Maths & Science
ತಕ್ಷಣ ಕರೆ ಮಾಡಿ. ವಿಳಾಸ :
ಜ್ಞಾನ ಕಾಶಿ ಟ್ಯೂಟೋರಿಯಲ್ಸ್
ಲಾಸ್ಟ್ ಬಸ್ ಸ್ಟಾಪ್, 17ನೇ ಕ್ರಾಸ್, ವಿದ್ಯಾನಗರ, ದಾವಣಗೆರೆ.
ಮೊ : 93410 16913, 82178 73944

ಶ್ರೀ ದುರ್ಗಾ ಹಾಸ್ಪಿಟಲ್
ಬೇಕಾಗಿದ್ದಾರೆ
ನರ್ಸಿಂಗ್ ಸೂಪರಿಂಟೆಂಡೆಂಟ್ ವಯಸ್ಸು : 30 ರಿಂದ 45 ವರ್ಷದ ಒಳಗೆ (Minimum 5 Years of Experience) ಸ್ಟಾಫ್ ನರ್ಸ್ (ಮಹಿಳೆ) GNM / B.sc Nursing (Minimum 1 years of experience)
ವಿ.ಸೂ : ವಸತಿ ಸೌಲಭ್ಯ ಇರುವುದಿಲ್ಲ
8ನೇ ಕ್ರಾಸ್, ಸಿದ್ದವೀರಪ್ಪ ಬಡಾವಣೆ ಬಾಪೂಜಿ ಬ್ಯಾಂಕ್ ಸಮುದಾಯ ಭವನದ ಎದುರು, ಶಾಮನೂರು ಮುಖ್ಯ ರಸ್ತೆ, ದಾವಣಗೆರೆ 577004
73378 53689, 97439 47362

ಟ್ಯಾಂಕ್ ಕ್ಲೀನಿಂಗ್
ಮನೆಯ ನೀರಿನ ತೊಟ್ಟಿ, ಟ್ಯಾಂಕ್‌ಗಳು ಗಲೀಜಾಗಿದ್ದರೆ ಯಂತ್ರಗಳನ್ನು ಬಳಸಿ ನಾವು ಕ್ಲೀನ್ ಮಾಡುತ್ತೇವೆ.
ಅತ್ಯುತ್ತಮ ಸೇವೆಗೆ ಸಂಪರ್ಕಿಸಿ
99863 61250
91132 85992

ಬೇಕಾಗಿದ್ದಾರೆ
ಆಸ್ಪತ್ರೆಯಲ್ಲಿ ಕೆಲಸ ಮಾಡಲು ಅನುಭವವುಳ್ಳ ನರ್ಸ್ ಬೇಕಾಗಿದ್ದಾರೆ.
ಸಂಪರ್ಕಿಸಿ : ಸಿ.ಜಿ.ಆಸ್ಪತ್ರೆ ಹಿಂಭಾಗ, ದಾವಣಗೆರೆ.
98450-35710
77607-39990

ಸುವರ್ಣಾವಕಾಶ
ನಿಮ್ಮಹಳೆಯ ಚಿನ್ನದ ಆಭರಣಗಳನ್ನು ಅಥವಾ ನೀವು ಅಡವು ಇಟ್ಟ ನಿಮ್ಮ ಚಿನ್ನ ಆಭರಣಗಳನ್ನು ಬಿಡಿಸಿ, ಇಂದಿನ ಸೂಕ್ತ ಬೆಲೆಗೆ ತೆಗೆದುಕೊಳ್ಳುತ್ತೇವೆ
MG ಗೋಲ್ಡ್ ಕಂಪನಿ
ಮೊ.: 9343546891, 7019426891

ಹುಡುಗರು ಬೇಕಾಗಿದ್ದಾರೆ
ಸಾನ್ವಿ ರೆಸ್ಟೋರೆಂಟ್
ಹೈಟೆಕ್ ಹಾಸ್ಪಿಟಲ್ ರಸ್ತೆ, ದಾವಣಗೆರೆ.
ವೇಟ್ಟರ್ ಕೆಲಸಕ್ಕೆ ಹುಡುಗರು ಬೇಕಾಗಿದ್ದಾರೆ. ಅನುಭವವುಳ್ಳವರಿಗೆ ಆದ್ಯತೆ.
80889 55916, 90197 23292

ಮನೆ ಬಾಡಿಗೆಗೆ ಇದೆ
ನೂತನವಾಗಿ ನಿರ್ಮಿಸಿರುವ ಮೊದಲನೇ ಮಹಡಿ
1 BHK ಮನೆ ಬಾಡಿಗೆಗೆ ಇದೆ.
ಜೆ.ಹೆಚ್ ಪಟೇಲ್ ಬಡಾವಣೆ, ಇ ಬ್ಲಾಕ್ 3ನೇ ಮೇನ್, 2ನೇ ಕ್ರಾಸ್, ದಾವಣಗೆರೆ.
70199 24038, 81478 38023

ಸೈಟುಗಳು ಮಾರಾಟಕ್ಕಿದೆ
ವಾಜಪೇಯಿ ಲೇಔಟ್ ಪಕ್ಕ ಗೀತಂ ಕಾಲೇಜು ಸುತ್ತ-ಮುತ್ತ ಹೊಸ ಬಡಾವಣೆಗಳಲ್ಲಿ 30x35 ಉತ್ತರ-ಪಶ್ಚಿಮ ಕಾರ್ನರ್, 60 ಅಡಿ ರಸ್ತೆಗೆ ಹೊಂದಿಕೊಂಡು 28x30 ಪಶ್ಚಿಮ ಅಕ್ಕ-ಪಕ್ಕ 30x40 ಪೂರ್ವ, 30x40 ದಕ್ಷಿಣ
ಸ್ವಾಮಿ ಏಜೆಂಟ್, ವಿದ್ಯಾನಗರ
97421 44715

ಪಿಜ್ಜಾ ಶಾಪ್‌ನಲ್ಲಿ ಕೆಲಸ ಮಾಡಲು ಹುಡುಗಿಯರು ಬೇಕಾಗಿದ್ದಾರೆ
ಸಂಪರ್ಕಿಸಿ :
94834 37363

ಮನೆ ಬಾಡಿಗೆಗೆ ಇದೆ
ಹೊಂಡದ ಸರ್ಕಲ್‌ನ ಖಂಡಪ್ಪನ ಗಲ್ಲಿಯಲ್ಲಿ 13x45 ಅಳತೆಯ ಒಂದನೇ ಮಹಡಿ ಮನೆ ಸೋಲಾರ್, ನೀರು ಸೌಲಭ್ಯವಿರುವ ಮನೆ ಬಾಡಿಗೆಗೆ ಇದೆ.
94480 47506

ಬೇಕಾಗಿದ್ದಾರೆ
ಕಾರ್‌ವಾಷ್, ವ್ಹೀಲ್ಸ್ ಅಲೈನ್ ಮೆಂಟ್ & ಬ್ಯಾಲೆನ್ಸಿಂಗ್ ಮಾಡಲು ಬೇಕಾಗಿದ್ದಾರೆ.
ಶ್ರೀ ಪ್ರಿಯಾ ಕಾರ್ ಕೇರ್
ವಿದ್ಯಾನಗರ, ದಾವಣಗೆರೆ.
8867322545, 7349194155
88673 22645

ಬೇಕಾಗಿದ್ದಾರೆ
PUC ಆದ ಮಹಿಳೆಯರು ಸ್ಟಾಕ್ ತೆಗೆಯಲು, ಹೋಲ್ ಸೇಲ್ ಫಾರ್ಮಾದಲ್ಲಿ ಬಿಲ್ಲಿಂಗ್ ಮಾಡಿರುವ ಅನುಭವವುಳ್ಳ ಮಹಿಳೆಯರು ಬೇಕಾಗಿದ್ದಾರೆ.
ಭೇಟಿಯ ಸಮಯ ಸಂಜೆ 6:30 ರ ನಂತರ
ಶ್ರೀ ಗುರು ಎಂಟರ್ ಪ್ರೈಸಸ್
#579, 6ನೇ ಮುಖ್ಯ ರಸ್ತೆ, ಪಿಜೆ ಬಡಾವಣೆ ದಾವಣಗೆರೆ.

ಬೇಕಾಗಿದ್ದಾರೆ
MRP ಲಿಕ್ಕರ್ ಶಾಪ್‌ನಲ್ಲಿ ಕೆಲಸಕ್ಕೆ ಹುಡುಗರು ಬೇಕಾಗಿದ್ದಾರೆ, ಶಾಮನೂರು ರೋಡ್, ದಾವಣಗೆರೆ.
98861 66432

ಶ್ರೀ ಗುರು ಮರುಳಸಿದ್ದೇಶ್ವರ ಸೇವಾ ಸಂಸ್ಥೆ (ರಿ.)
ಹಿಂದೂ ವಧು ವರರ ಮಾಹಿತಿ ಕೇಂದ್ರ
www.hindusmatrimony.com
SGM Tours
ನಮ್ಮ ಸಂಸ್ಥೆಯ ದಾವಣಗೆರೆ ಕಛೇರಿಗೆ ಕಂಪ್ಯೂಟರ್ ಅನುಭವವುಳ್ಳ ಮಹಿಳಾ ವ್ಯವಸ್ಥಾಪಕರು ಬೇಕಾಗಿದ್ದಾರೆ.
ಆಸಕ್ತರು ಸಂಪರ್ಕಿಸಿ.
78925 10652

Bruit Academy
IIT FOUNDATION (JEE)
FROM 5th Std to 10th Std
( CBSE, ICSE, IGCSE)
NIJALINGAPPA BADAVANE
96201 53806

ಮನೆಗಳು ಖಾಲಿ ಇವೆ
2 ಮತ್ತು 3ನೇ ಮಹಡಿಯಲ್ಲಿ ಸಿಂಗಲ್ ಬೆಡ್ ರೂಂ ಅಟ್ಯಾಚ್ ಮನೆಗಳು ಖಾಲಿ ಇವೆ. ಶ್ರೀ ಸಂಜೀವಿನಿ ಆಂಜನೇಯ ದೇವಸ್ಥಾನದ ಹತ್ತಿರ, ಹದಡಿ ರಸ್ತೆ, ದಾವಣಗೆರೆ.
97431 21419, 63637 18355

ಡ್ರೈವರ್, ಕಂಡಕ್ಟರ್ ಬೇಕಾಗಿದ್ದಾರೆ
ನಗರ ಸಾರಿಗೆ ಬಸ್ಸಿಗೆ ಡ್ರೈವರ್ (ಪುರುಷ) ಮತ್ತು ಕಂಡಕ್ಟರ್ (ಪುರುಷ ಅಥವಾ ಮಹಿಳಾ) ಬೇಕಾಗಿದ್ದಾರೆ. ಸಂಪರ್ಕಿಸಿ :
91642 22937

ಸೈಟ್ ಮಾರಾಟಕ್ಕಿದೆ
ಶಾಮನೂರು ಹತ್ತಿರ ಡಾಲರ್ಸ್ ಕಾಲೋನಿಯಲ್ಲಿ ಸೈಟು ಮಾರಾಟಕ್ಕಿದೆ
30x40 = 1200 ಚದುರ ಅಡಿ (ದಕ್ಷಿಣ ದಿಕ್ಕಿಗಿದೆ (South) ಸರ್ವೆ ನಂ. 545
91649 94701

ಶಿಕ್ಷಕಿಯರು ಬೇಕಾಗಿದ್ದಾರೆ
ಕನಕ ಸೆಂಟ್ರಲ್ ಸ್ಕೂಲ್
ಹಗೇದಿಬ್ಬ ಸರ್ಕಲ್, ದಾವಣಗೆರೆ
NTC or PUC, B.A.,B.Com, B.Sc,B.B.A, Diploma
ಓದಿದವರು ಶಿಕ್ಷಕಿಯಾಗಿ ಕೆಲಸ ಮಾಡಲು ಆಸಕ್ತಿ ಇರುವವರು ಸಂಪರ್ಕಿಸಿ:
98866 78178

TUITION FOR
1st to 10th Std
ICSE - CBSE State
ಟ್ಯೂಷನ್ ಮಾಡಲಾಗುವುದು.
Contact : Vidya Vikas Tuition Centre
Mob : 83109 32579

ಕೆಲಸಕ್ಕೆ ಬೇಕಾಗಿದ್ದಾರೆ
1) ANM/ GNM ನರ್ಸಿಂಗ್-01
2) ಆಯಾ ಕೆಲಸ - 01
ಆಸ್ಪತ್ರೆಯಲ್ಲಿ ಕೆಲಸ ಮಾಡಲು ಬೇಕಾಗಿದ್ದಾರೆ. ನೇರ ಸಂದರ್ಶನಕ್ಕೆ ಸಂಪರ್ಕಿಸಿ
86186 42929
08192-252228

ಹೋಟೆಲ್ ಗಾಡಿ ಬಾಡಿಗೆಗೆ ಇದೆ
ತಳ್ಳುವ ಕಬ್ಬಿಣದ ಹೊಸ ಗಾಡಿ ಸಿಲ್ವರ್ ಕಲರ್ 8 ಡೋರ್ ಕೆಳಗೆ ಬಾಕ್ಸ್ 4 ಬೈಕ್ ವ್ಹೀಲ್ ಇರುವ ಗಾಡಿ ಬಾಡಿಗೆ ಇದೆ.ಸಂಪರ್ಕಿಸಿ
90080 92650

ಬೇಕಾಗಿದ್ದಾರೆ
ಅಂಗಡಿಯಲ್ಲಿ ಕೆಲಸ ಮಾಡಲು 20-35 ವರ್ಷದೊಳಗಿನ ಹುಡುಗರು ಬೇಕಾಗಿದ್ದಾರೆ.
ಆಸಕ್ತರು ಸಂಪರ್ಕಿಸಿ :
ಪ್ರಕಾಶ್ ಟಿ.ವಿ. ಸೆಂಟರ್
ಶ್ರೀ ಮುರುಘರಾಜೇಂದ್ರ ಕಾಂಪ್ಲೆಕ್ಸ್, ಕುರುಬರ ಹಾಸ್ಟೆಲ್ ಎದುರು, ಹದಡಿ ರಸ್ತೆ, ದಾವಣಗೆರೆ.

ಮಳಿಗೆ ಬಾಡಿಗೆಗಿದೆ
ಚರ್ಚ್ ರಸ್ತೆ, ಲೂರ್ಡ್ಸ್ ಬಾಯ್ಸ್ ಸ್ಕೂಲ್ ಹತ್ತಿರ, ಮೇನ್ ರೋಡ್,
ಸಂಪರ್ಕಿಸಿ :
96201 62541

ಅಟ್ಯಾಚ್ ರೂಂ ಬಾಡಿಗೆಗಿದೆ
ಕಾಟ್, ಟೇಬಲ್, ವಾರ್ಡ್ ರೂಫ್, ಅಟ್ಯಾಚ್ ರೂಂ ಬಾಡಿಗೆಗಿದೆ.
#782, ಶ್ರೀ ಬನಶಂಕರಿ ನಿಲಯ, 2ನೇ ಮೇನ್, 6ನೇ ಕ್ರಾಸ್, ಶ್ರೀ ನಿಜಲಿಂಗಪ್ಪ ಬಡಾವಣೆ, ದಾವಣಗೆರೆ-4.
94483 19018, 94499 82481

ಬೇಕಾಗಿದ್ದಾರೆ
ಕಂಪ್ಯೂಟರ್ ಕೆಲಸಕ್ಕೆ ಹುಡುಗಿಯರು ಬೇಕಾಗಿದ್ದಾರೆ.
ಆಸಕ್ತಿಯುಳ್ಳವರು ಸಂಪರ್ಕಿಸಿ:
91641 06375

ಪ್ರವೇಶ ಪ್ರಕಟಣೆ
ಡಿಪ್ಲೊಮಾ ಇನ್ ಪೇಷೆಂಟ್ ಕೇರ್ ನರ್ಸಿಂಗ್ - 2 ವರ್ಷ
ವಿದ್ಯಾರ್ಹತೆ: PUC ಪಾಸ್/ಫೇಲ್, SSLC PASS
ತರಬೇತಿ ನಂತರ ಖಾಸಗಿ ಆಸ್ಪತ್ರೆ, ನರ್ಸಿಂಗ್ ಹೋಂಗಳಲ್ಲಿ ನರ್ಸ್‌ಗಳಾಗಿ ಕೆಲಸ ಮಾಡಬಹುದು.
ಮಾನಸ ಕಮ್ಯೂನಿಟಿ ಕಾಲೇಜ್ (ರಿ)
LK ಕಾಂಪ್ಲೆಕ್ಸ್, 1ನೇ ಮಹಡಿ, ಅಶೋಕ ರಸ್ತೆ, 1ನೇ ಕ್ರಾಸ್, ಆಹಾರ್ 2000 ಹಿಂಭಾಗ ರಸ್ತೆ, ದಾವಣಗೆರೆ-577002.
97402 58276

BUSINESS FOR SALE
HADADI ROAD DAVANAGERE
FURNITURE AND MATRESES BEDS SHOWROOM GOOD COMPANY PRODUCTS
Contact : 92432 19553

ವಧು ಬೇಕಾಗಿದೆ
2ನೇ ಸಂಬಂಧಕ್ಕೆ ಹಿಂದೂ ಲಿಂಗಾಯತ ವಿಚ್ಛೇದಿತೆ ಅಥವಾ ವಿಧವೆ ಇದ್ದಲ್ಲಿ ಸಂಪರ್ಕಿಸಿ. ವಿದ್ಯಾರ್ಹತೆ ಅಗತ್ಯವಿಲ್ಲ.
80731 24002

HOUSE TO LET
(Veg Only)
2 BHK, 1st floor, # 1653/28, 4th cross, `Umesh Nilaya', Siddaveerappa Badavane, Davangere.
94484 46708

ಸೈಟು ಮಾರಾಟಕ್ಕಿದೆ
ನಗರದ ಬಸವೇಶ್ವರ ಬಡಾವಣೆಯ ಹೊಸ ಬ್ಯಾಂಕ್ ಹತ್ತಿರ, ಬೇತೂರು ಲೇಔಟ್‌ನಲ್ಲಿ 30x40, ಪೂರ್ವ ದಿಕ್ಕಿನ ಸೈಟ್ ಮಾರಾಟಕ್ಕಿದೆ.
94820 68798

ಸೈಟು ಮಾರಾಟಕ್ಕಿದೆ
35x50 ಅಳತೆಯ ಸೈಟ್ ನಂ. 6, ಅಮರಾವತಿ ಬಡಾವಣೆ, ಆರ್ಕ್ ಗೇಟ್ ಹತ್ತಿರ, ಅಮರಾವತಿ ರಸ್ತೆ, 4ನೇ ಕ್ರಾಸ್, ಹರಿಹರ ಇಲ್ಲಿ ಸೈಟ್ ಮಾರಾಟಕ್ಕಿದೆ (1750/- ರೂ. ಚದುರಡಿ)
ಮಧ್ಯಾಹ್ನ 3 ಗಂಟೆಯ ನಂತರ ಸಂಪರ್ಕಿಸಿ :
98452 36274

ಮನೆ ಮಾರಾಟಕ್ಕಿದೆ
ಉತ್ತರ ದಿಕ್ಕಿನ, 15x45 ಅಳತೆಯ, ನೆಲಮಹಡಿ ಹಾಗೂ 1ನೇ ಮಹಡಿಯಲ್ಲಿರುವ ಮನೆ, 1ನೇ ಮೇನ್, 10ನೇ ಕ್ರಾಸ್, ಕೆ.ಬಿ. ಬಡಾವಣೆಯಲ್ಲಿ ಮಾರಾಟಕ್ಕಿದೆ.
99028 15559, 88616 14811

ಸೈಟು ಮಾರಾಟಕ್ಕೆ
ತುಂಗಭದ್ರಾ ಬಡಾವಣೆ, ಹೊಸ ಕುಂದುವಾಡ, ಕೆ.ಹೆಚ್.ಬಿ. ಕಾಲೋನಿ, ರಿಂಗ್ ರೋಡ್‌ನಿಂದ ಐದು ರಸ್ತೆ ಸೇರುವ ಜಡ್ಜ್ ಮನೆ ರಸ್ತೆಯ ದಕ್ಷಿಣ ದಿಕ್ಕಿಗೆ ಕಾರ್ನರ್ ನಿಂದ 2ನೇ ಸೈಟು ಹೆಚ್.ಐ.ಜಿ. ||-116, 50x80, ಅಳತೆ ಮಾರಾಟಕ್ಕೆ ಇದೆ.
98440 11532, 63606 75885

ಮನೆ ಮಾರಾಟಕ್ಕಿದೆ
3 ಮಳಿಗೆ, 2 BHK, ಗ್ರೌಂಡ್, 1ನೇ ಮಹಡಿ, 2 BHK, 1 BHK 12 ಚದರಡಿವುಳ್ಳ, ಬೋರ್‌ವೆಲ್ ಇರುವ ಮನೆ ಮಾರಾಟಕ್ಕಿದೆ. ಆಸಕ್ತರು ಕರೆ ಮಾಡಬಹುದು
70192 17786, 70191 08442

ಶ್ರೀ ಅಂಜನಾದ್ರಿ ಜ್ಯೋತಿಷ್ಯ ಕೇಂದ್ರ
ಕನ್ನಡ, ತೆಲುಗು, ಹಿಂದಿ ಭಾಷೆಗಳಲ್ಲಿ ಭವಿಷ್ಯ ಮತ್ತು ಸ್ತ್ರೀ-ಪುರುಷ ಎಲ್ಲಾ ಸಮಸ್ಯೆಗಳಿಗೆ ಪರಿಹಾರ ಹೇಳುತ್ತಾರೆ.
ಪಂಡಿತ್ ಶ್ರೀ ಲಕ್ಷ್ಮಿಕಾಂತ್ ಗುರೂಜಿ
(ಆಂಧ್ರಪ್ರದೇಶ), ಲಾಯರ್ ರಸ್ತೆ, ದಾವಣಗೆರೆ.
9740064163

ಲೈಂಗಿಕ ನಿಶ್ಯಕ್ತಿಗೆ ನಿರಾಶರಾಗಬೇಡಿ

ಶೀಘ್ರ ಸ್ಖಲನ, ಹಸ್ತ ಮೈಥುನ, ಸ್ವಪ್ನದೋಷ, ನರಗಳ ದೌರ್ಬಲ್ಯತೆ, ತಾರುಣ್ಯ ನಾಶ, ಸಂತಾನ ದೋಷ, ಲೈಂಗಿಕ ಸಮಸ್ಯೆಗೆ ಭೇಟಿಯಾಗಿ.
ದಾವಣಗೆರೆ : 2 & 3 ರಂದು
ಬಸವರಾಜ ಲಾಡ್ಜ್ ಪಿ.ಬಿ. ರಸ್ತೆ.
ಡಾ|| ಎಚ್.ಆಯ್. ದೊಡ್ಡಮನಿ (G.R.No.8969)
ಡಮ್ಮಣಗಿ ಕಾಂಪ್ಲೆಕ್ಸ್, 1ನೇ ಮಹಡಿ, ನಂ.26
ಹಳೇಬಸ್ ಸ್ಟ್ಯಾಂಡ್ ಎದುರಿಗೆ, ಹುಬ್ಬಳ್ಳಿ
M:9740523710

ಶಾಕಿರ ಬ್ಯೂಟಿ ಪಾರ್ಲರ್
SHAKIRA BEAUTY PARLER
ಕೆಲಸಕ್ಕೆ ಬೇಕಾಗಿದ್ದಾರೆ
ಬ್ಯೂಟಿಷಿಯನ್ (Beauticians) - 3
ಸಹಾಯಕರು (Helpers) - 3
# 741/4, 10th main, P.J. Extension, Davanagere.
Contact :
93420 19013

ಖಾಲಿ ನಿವೇಶನ ಮೂಲ ಪತ್ರ ಕಳೆದಿದೆ
ಶ್ರೀ ದತ್ತಾರಾಮ್ ಪಿ. ಶಿಂಪಿ ಬಿನ್ ಲೇಟ್ ಪುಂಡಲೀಕಪ್ಪ ಭ ಶಿಂಪಿ ಹೆಸರಿನಲ್ಲಿರುವ ಸರ್ಕಾರಿ ನೌಕರರ ಗೃಹ ನಿರ್ಮಾಣ ಸಹಕಾರ ಸಂಘ-ನಿಯಮಿತ, ದಾವಣ ಗೆರೆ. ಇವರಿಂದ ಹಂಚಿಯಾಗಿರುವ ಖಾಲಿ ನಿವೇಶನ 1ನೇ ಪುಸ್ತಕದ AD 246 ಸಂಪುಟ 182-183ನೇ ಪುಟದಲ್ಲಿ 1988-89ನೇ ಇಸವಿಯ 3366 ಮತ್ತು ಪುಟ 186-187ರಲ್ಲಿ 3368 ಎಂದು ಕ್ರಮವಾಗಿ ನನ್ನ ಹೆಸರಿನಲ್ಲಿ ನೋಂದಣಿಯಾಗಿರುತ್ತದೆ. ಸದರಿ ನೋಂದಣಿಯ ಪತ್ರವು ದಿನಾಂಕ : 1.5.2024 ರಂದು ಮಧ್ಯಾಹ್ನ 3.30ರ ಸಮಯದಲ್ಲಿ ಇಸ್ಲಾಂ ಪೇಟೆಯಲ್ಲಿ ದ್ವಿ-ಚಕ್ರ ವಾಹನದಲ್ಲಿ ಹೋಗುತ್ತಿರುವಾಗ ಕಳೆದಿದೆ. ಸಿಕ್ಕವರು ಈ ಕೆಳಗಿನ ಫೋನ್‌ಗೆ ತಿಳಿಸಲು ಕೋರಿದೆ.
ಫೋ. : 974172 5976

ನಿವೇಶನ ದಾಖಲೆ ಪತ್ರ ಕಳೆದಿದೆ
ಈ ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ನನ್ನ ಕಕ್ಷಿದಾರರಾದ ಶ್ರೀ ವಿ.ಎನ್. ಪಟೇಲ್ ಬಿನ್ ಎನ್.ಸಿ. ಪಟೇಲ್, ವ್ಯವಸಾಯಗಾರರು, ಅಣಜಿ ಗ್ರಾಮ, ದಾವಣಗೆರೆ ತಾಲ್ಲೂಕು ಇವರು ದಿನಾಂಕ : 30.04.2024ರಂದು ದಾವಣಗೆರೆ ನಗರದ ಎಂಸಿಸಿ "ಎ" ಬ್ಲಾಕ್‌ನಲ್ಲಿ ತಮ್ಮ ದ್ವಿಚಕ್ರ ವಾಹನದಲ್ಲಿ ಹೋಗುತ್ತಿದ್ದಾಗ ತಮಗೆ ಸೇರಿದ ಬೆಂಗಳೂರಿನ ಅಂಜನಾಪುರದ 5ನೇ ಜಿ. ಬ್ಲಾಕ್‌ನಲ್ಲಿರುವ ಬಿಡಿಎ ನಿವೇಶನ ಸಂಖ್ಯೆ 1125 ರ ಮೂಲ ಕ್ರಯಪತ್ರವನ್ನು ಕಳೆದುಕೊಂಡಿರುತ್ತಾರೆ. ಸಿಕ್ಕವರು ಈ ಕೆಳಗಿನ ಫೋನ್‌ಗೆ ತಿಳಿಸಲು ಕೋರಿದೆ.
ಫೋ. : 93410 31666

ಮಳಿಗೆಗಳು ಬಾಡಿಗೆಗಿವೆ
ಮಂಡಿಪೇಟೆಯ ಒಂದೇ ಕಾಂಪ್ಲೆಕ್ಸ್‌ನಲ್ಲಿ ಮೂರು ಮಳಿಗೆಗಳು ಲಭ್ಯವಿದ್ದು, ಆಸಕ್ತರು ಈ ಕೆಳಗಿನ ದೂರವಾಣಿ ಸಂಖ್ಯೆಗೆ ಸಂಪರ್ಕಿಸಿ...
ಮಂಡಿಪೇಟೆ, ದಾವಣಗೆರೆ.
96865 51303
99806 29965

ಬೇಕಾಗಿದ್ದಾರೆ
ಫರ್ನಿಚರ್ಸ್ ಫ್ಯಾಕ್ಟರಿಯಲ್ಲಿ ಹೆಲ್ಪರ್ ಕೆಲಸಕ್ಕೆ ಹುಡುಗರು ಬೇಕಾಗಿದ್ದಾರೆ.
ಕಿರಣ್ ಎಂಟರ್‌ಪ್ರೈಸಸ್
4ನೇ ಮುಖ್ಯ ರಸ್ತೆ, 1ನೇ ಅಡ್ಡ ರಸ್ತೆ, ವಿನೋಬನಗರ, ದಾವಣಗೆರೆ.
ಸಮಯ : ಬೆಳಿಗ್ಗೆ 9.30 ರಿಂದ ಸಂಜೆ 7
87629 02569

ಹೋಟೆಲ್ ಕೆಲಸಕ್ಕೆ ಮಹಿಳೆಯರು ಮತ್ತು ಪುರುಷರು ಬೇಕಾಗಿದ್ದಾರೆ
ಆಸಕ್ತರು ವಿಚಾರಿಸಿ ;
ಪಾರ್ಟ್‌ಟೈಂ, ಫುಲ್ ಟೈಂ
99646 36217

ಸೇಲ್ಸ್ ಎಕ್ಸಿಕ್ಯೂಟಿವ್ ಬೇಕಾಗಿದ್ದಾರೆ
ಸಂಪರ್ಕಿಸಿ :
ಪ್ರಕಾಶ್ ಟಿ.ವಿ. ಸೆಂಟರ್
ಶ್ರೀ ಮುರುಘರಾಜೇಂದ್ರ ಕಾಂಪ್ಲೆಕ್ಸ್, ಕುರುಬರ ಹಾಸ್ಟೆಲ್ ಎದುರು, ಹದಡಿ ರಸ್ತೆ, ದಾವಣಗೆರೆ.

ಅನ್ನದಾನ ಮಹಾದಾನ

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ - ವಸ್ತು ಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ಧಾರಿ ಯಾಗುವುದಿಲ್ಲ. -ಜಾಹೀರಾತು ವ್ಯವಸ್ಥಾಪಕರು

# ಇಂದು ಅಕ್ಷಯ ತೃತೀಯ ಶುಭ ದಿನ : ಬಂಗಾರದ ಖರೀದಿಯಿಂದ ಆರ್ಥಿಕ ಲಾಭವೆಂದ ಪರಿಣಿತರು

ನವದೆಹಲಿ, ಮೇ 9 – ವೈಶಾಖ ಮಾಸದ ಶುಕ್ಲ ಪಕ್ಷದ ತೃತೀಯದಂದು ಬರುವ ಅಕ್ಷಯ ತೃತೀಯ ದಿನ ಈ ಬಾರಿ ಶುಕ್ರವಾರದಂದು ಬಂದಿದೆ.

ಬಂಗಾರ ಖರೀದಿ, ಹೊಸ ವಹಿವಾಟುಗಳ ಆರಂಭ ಹಾಗೂ ಹೂಡಿಕೆಗೆ ಈ ದಿನ ಶುಭಕರ ಎಂದು ಭಾವಿಸಲಾಗಿದೆ.

ಅಕ್ಷಯ ಎಂದರೆ ಸಂಸ್ಕೃತದಲ್ಲಿ ಎಂದೂ ಖಾಲಿಯಾಗದ್ದು ಎಂಬ ಅರ್ಥ ಬರುತ್ತದೆ. ತೃತೀಯ ಎಂದರೆ ಮೂರನೇ ದಿನ ಎಂದರ್ಥ. ಈ ದಿನದಂದು ಯಾವುದೇ ಹೊಸತನ್ನು ಆರಂಭಿಸಿದರೆ ಸಮೃದ್ಧಿ ಹಾಗೂ ಅದೃಷ್ಟ ಸಿಗುತ್ತದೆ ಎಂಬ ಪ್ರತೀತಿ ಇದೆ.

ಬಂಗಾರದ ಮೇಲೆ ಹೂಡಿಕೆ ಮಾಡುವುದು ಭಾರತದ ಅತ್ಯಂತ ಶ್ರೀಮಂತ ಪರಂಪರೆಯಾಗಿದೆ. ಜನರು ಬಂಗಾರದ ಜೊತೆ ಭಾವನಾತ್ಮಕ ಸಂಬಂಧ ಹೊಂದಿದ್ದಾರೆ. ಹಬ್ಬ ಹರಿದಿನಗಳಲ್ಲಿ ಬಂಗಾರ ಖರೀದಿಸುವ ಪದ್ಧತಿ ಇದೆ. ಅದರಲ್ಲೂ ಅಕ್ಷಯ ತೃತೀಯದ ದಿನದಂದು



ಬಂಗಾರ ಖರೀದಿ ಅತ್ಯಂತ ಶ್ರೇಷ್ಠ ಎಂದು ಭಾವಿಸಲಾಗುತ್ತದೆ.

ಆರ್ಥಿಕ ಅಸ್ಥಿರತೆಗಳ ಸಮಯದಲ್ಲಿ ಬಂಗಾರ ಉತ್ತಮ ಹೂಡಿಕೆ ಆಯ್ಕೆಯಾಗಿದೆ ಎಂದು ಟಾಟಾ ಅಸೆಟ್ ಮ್ಯಾನೇಜ್‌ಮೆಂಟ್‌ನ ಫಂಡ್ ಮ್ಯಾನೇಜರ್ ತಪನ್ ಪಟೇಲ್ ತಿಳಿಸುತ್ತಾರೆ.

ಬಂಗಾರದ ಮೇಲೆ ಮಾಡುವ ಹೂಡಿಕೆ ದೀರ್ಘಾವಧಿಯಲ್ಲಿ ಲಾಭದಾಯಕವಾಗಿದೆ. ಹಣಕಾಸು ಅಸ್ಥಿರತೆಯಿಂದ ರಕ್ಷಣೆ ಸಿಗುತ್ತದೆ ಎಂದವರು ಹೇಳುತ್ತಾರೆ.

ಕಳೆದ ವರ್ಷ ಅಕ್ಷಯ ತೃತೀಯದಂದು 24 ಕ್ಯಾರೆಟ್ ಬಂಗಾರದ ಬೆಲೆ 10 ಗ್ರಾಂಗಳಿಗೆ 61,300 ರೂ. ಆಗಿತ್ತು. ಈ ವರ್ಷ ಅದರ ಬೆಲೆ 71,700 ರೂ.ಗಳ ಸಮೀಪದಲ್ಲಿದೆ. ಕಳೆದ ಒಂದು ವರ್ಷದ ಅವಧಿಯಲ್ಲಿ ಬಂಗಾರದ ಬೆಲೆ ಶೇ.19ರಷ್ಟು ಹೆಚ್ಚಾಗಿದೆ.

ಧಾರ್ಮಿಕ ಭಾವನೆಗಳ ಜೊತೆಗೆ ಆರ್ಥಿಕ ದೃಷ್ಟಿಯಿಂದಲೂ ಬಂಗಾರದ ಮೇಲಿನ ಹೂಡಿಕೆ ಪ್ರಾಮುಖ್ಯತೆ ಪಡೆದಿದೆ. ಇತ್ತೀಚಿನ ದಿನಗಳಲ್ಲಿ ದೇಶ ಹಾಗೂ ಅಂತರರಾಷ್ಟ್ರೀಯ ಬೇಡಿಕೆಯಿಂದಾಗಿ ಬಂಗಾರದ ಬೆಲೆ ದಾಖಲೆ ಮಟ್ಟಕ್ಕೆ ತಲುಪಿದೆ. ಕೇಂದ್ರ ಬ್ಯಾಂಕ್‌ಗಳೂ ಸಹ ಬಂಗಾರ ಖರೀದಿಸುತ್ತಿರುವುದು ಬೆಲೆ ಹೆಚ್ಚಾಗಲು ಉತ್ತೇಜನ ನೀಡಿದೆ. ಭೂ ರಾಜಕೀಯ ಅಸ್ಥಿರತೆಯೂ ಬಂಗಾರದ ಬೆಲೆ ಏರಿಕೆಗೆ ಕಾರಣವಾಗುತ್ತಿದೆ.

ಆಭರಣ, ನಾಣ್ಯ, ಇ.ಟಿ.ಎಫ್., ಬಂಗಾರದ ಫಂಡ್, ಡಿಜಿ ಗೋಲ್ಡ್ ಸೇರಿದಂತೆ ಹಲವು ರೂಪಗಳಲ್ಲಿ ಹೂಡಿಕೆಗೆ ಅವಕಾಶ ಇದೆ ಎಂದು ತಪನ್ ಪಟೇಲ್ ಹೇಳುತ್ತಾರೆ.

# ಕೃಪಾಂಕ ನೀಡಿ ವಿದ್ಯಾರ್ಥಿಗಳ ಕೈ ಹಿಡಿದ ಸರ್ಕಾರ

**(1ನೇ ಪುಟದಿಂದ)** ಬಾರಿಗೆ ವೆಬ್‌ಕಾಸ್ಟಿಂಗ್ ವಿಧಾನ ಪರಿಚಯಿಸಿರುವುದು ಫಲಿತಾಂಶದ ಮೇಲೆ ಗಂಭೀರ ಪರಿಣಾಮ ಬೀರಿದೆ.

ಹಳೆಯ ಪದ್ಧತಿಯಂತೆ ಪರೀಕ್ಷೆಯ ಅಂಕಗಳನ್ನು ನೀಡಿದ್ದರೆ ಫಲಿತಾಂಶ ಶೇ.30ರಷ್ಟು ಕುಸಿಯಬೇಕಿತ್ತು! ಆದರೆ, ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಸರ್ಕಾರ ಕೃಪಾಂಕದ ನಿಯಮಗಳನ್ನು ಬದಲಿಸಿದೆ. ಇದರಿಂದಾಗಿ ಕುಸಿತ ಶೇ.10ಕ್ಕೆ ಮಾತ್ರ ಸೀಮಿತವಾಗಿದೆ.

ಎಲ್ಲಾ ವಿಷಯಗಳಲ್ಲಿ ನೀಡುವ ಕೃಪಾಂಕಗಳನ್ನು ಆಕರ್ಷಿಸಲು ಪಡೆಯಬೇಕಾದ ಅರ್ಹ ಅಂಕಗಳನ್ನು ಶೇಕಡ 35ರಿಂದ 25ಕ್ಕೆ ಇಳಿಸಲಾಯಿತು.

ಕೃಪಾಂಕದ ಪ್ರಮಾಣವನ್ನು ಶೇ. 10ರಿಂದ 20ಕ್ಕೆ ಹೆಚ್ಚಿಸಿದ್ದರಿಂದ ಒಟ್ಟಾರೆ ಶೇಕಡ 73.40 ವಿದ್ಯಾರ್ಥಿಗಳು ತೇರ್ಗಡೆಗೊಂಡರೆಂದು ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯ ನಿರ್ಣಯ ಮಂಡಳಿ ಪ್ರಕಟಿಸಿದೆ.

ಬಾಲಕರಿಗಿಂತ ಬಾಲಕಿಯರು ಶೇ. 15ರಷ್ಟು ಹೆಚ್ಚು ತೇರ್ಗಡೆ ಹೊಂದಿದ್ದಾರೆ. ಒಟ್ಟಾರೆ 8,59,967 ವಿದ್ಯಾರ್ಥಿಗಳು ಪರೀಕ್ಷೆ ಬರೆದಿದ್ದು, ಇದರಲ್ಲಿ 6,31,204 ವಿದ್ಯಾರ್ಥಿಗಳು ತೇರ್ಗಡೆ ಹೊಂದಿದ್ದಾರೆ.

ಬಾಲಕಿಯರು ಶೇಕಡ 81.11ರಷ್ಟು, ಬಾಲಕರು ಶೇಕಡ 65.90 ರಷ್ಟು

**ಎಸ್ಸೆಸ್ಸೆಲ್ಸಿ ಫಲಿತಾಂಶದಲ್ಲಿ ಶೇ.10ರ ಕುಸಿತ**

ವಿದ್ಯಾರ್ಥಿಗಳು ಮುಂದಿನ ವ್ಯಾಸಂಗಕ್ಕೆ ಅನುವು ಮಾಡಿಕೊಂಡಿದ್ದಾರೆ.

ನಗರ ಪ್ರದೇಶಗಳಿಗಿಂತ ಗ್ರಾಮೀಣ ವಿದ್ಯಾರ್ಥಿಗಳು ಮೇಲುಗೈ ಸಾಧಿಸಿರುವುದಲ್ಲದೆ, ಹೆಚ್ಚು ಪ್ರಥಮ ಸ್ಥಾನಗಳನ್ನು ಪಡೆಯುವಲ್ಲಿ ಮುಂದಿದ್ದಾರೆ.

ಬಾಗಲಕೋಟೆ ಜಿಲ್ಲೆಯ ಸಮಾಜ ಕಲ್ಯಾಣ ಇಲಾಖೆ ವ್ಯಾಪ್ತಿಗೆ ಬರುವ ಮೊರಾರ್ಜಿ ದೇಸಾಯಿ ಶಾಲೆಯ ವಿದ್ಯಾರ್ಥಿನಿ ಅಂಕಿತಾ ಬಸಪ್ಪ ಕನ್ನೂರ 625ಕ್ಕೆ 625 ಅಂಕ ಪಡೆಯುವ ಮೂಲಕ ರಾಜ್ಯಕ್ಕೆ ಪ್ರಥಮ ಸ್ಥಾನ ಪಡೆದಿದ್ದಾರೆ.

ನಂತರ 625ಕ್ಕೆ 624 ಅಂಕಗಳೊಂದಿಗೆ ಏಳು ವಿದ್ಯಾರ್ಥಿಗಳು ಎರಡನೇ ಸ್ಥಾನ ಪಡೆದಿದ್ದಾರೆ. 14 ವಿದ್ಯಾರ್ಥಿಗಳು 623 ಅಂಕ ಪಡೆಯುವ ಮೂಲಕ 3ನೇ ಸ್ಥಾನದಲ್ಲೂ, 21 ಮಂದಿ 622 ಅಂಕ ಪಡೆದು 4ನೇ ಸ್ಥಾನದಲ್ಲೂ, 44 ವಿದ್ಯಾರ್ಥಿಗಳು 621 ಅಂಕ ಪಡೆದು 5ನೇ ಸ್ಥಾನದಲ್ಲಿದ್ದರೆ, 64 ಮಂದಿ 620 ಅಂಕ ಪಡೆದು 6ನೇ ಸ್ಥಾನ ಗಳಿಸಿದ್ದಾರೆ.

ಉಡುಪಿ ಶೇಕಡ 94ರಷ್ಟು ಪಡೆದು ಮೊದಲ ಸ್ಥಾನದಲ್ಲೂ, ದಕ್ಷಿಣ ಕನ್ನಡ ಶೇಕಡ 92.12 ಪಡೆದು ದ್ವಿತೀಯ ಸ್ಥಾನ, ಶಿವಮೊಗ್ಗ ಶೇಕಡ 88.67 ರಷ್ಟು ಪಡೆದು ಮೂರನೇ ಸ್ಥಾನ ಹೊಂದಿದೆ. ಯಾದಗಿರಿ ಶೇಕಡ 50.59 ರಷ್ಟು ತೇರ್ಗಡೆ ಪ್ರಮಾಣದೊಂದಿಗೆ ಕೊನೆಯ ಸ್ಥಾನದಲ್ಲಿದೆ.

ಕೊಡಗು 88.67%, ಹಾಸನ 86.28%, ಮೈಸೂರು 85.5%, ಮಂಡ್ಯ 73.59%, ದಾವಣಗೆರೆ 74.28%, ಚಾಮರಾಜನಗರ 71.59% ತೇರ್ಗಡೆ ಪ್ರಮಾಣ ಪಡೆದಿವೆ.

ಅನುತ್ತೀರ್ಣರಾದ ವಿದ್ಯಾರ್ಥಿಗಳು ತೇರ್ಗಡೆ ಹೊಂದಲು ಎರಡು ಬಾರಿ ಪರೀಕ್ಷೆ ಬರೆಯಲು ಮಂಡಳಿ ಅವಕಾಶ ಮಾಡಿಕೊಟ್ಟಿದೆ.

ಇದೇ ಮೊದಲ ಬಾರಿ ಸರ್ಕಾರ ಮೂರು ಪರೀಕ್ಷೆಗಳನ್ನು ಪರಿಚಯಿಸಿದ್ದು, ಮೇ ಮೂರನೇ ವಾರದಲ್ಲಿ ಎರಡನೇ ಪರೀಕ್ಷೆ ಆರಂಭವಾಗಲಿದೆ.

ಉತ್ತೀರ್ಣರಾದ ವಿದ್ಯಾರ್ಥಿಗಳು ಸಹಾ ಉಳಿದ ಎರಡು ಪರೀಕ್ಷೆಗಳನ್ನು ತೆಗೆದುಕೊಳ್ಳಬಹುದು. ಯಾವ ಪರೀಕ್ಷೆಯಲ್ಲಿ ಹೆಚ್ಚು ಅಂಕ ಪಡೆಯುತ್ತಾರೋ ಆ ಅಂಕ ಪಟ್ಟಿಯನ್ನು ಪಡೆಯಬಹುದಾಗಿದೆ.

# ಎಸ್ಸೆಸ್ಸೆಲ್ಸಿ : ವೆಬ್‌ಕಾಸ್ಟಿಂಗ್ ಕಲಿಕೆಗೆ ಹಿಡಿದ ಕನ್ನಡಿ

## ನಕಲಿಗೆ ಬಿತ್ತು ಕಡಿವಾಣ, ಕುಸಿಯಿತು ಫಲಿತಾಂಶ, ಹೆಚ್ಚಾಯಿತು ಪರೀಕ್ಷೆಯ ಗುಣಮಟ್ಟ

ದಾವಣಗೆರೆ, ಮೇ 9 - ಜಿಲ್ಲೆಯಲ್ಲಿ ಈ ಬಾರಿ ಎಸ್.ಎಸ್.ಎಲ್.ಸಿ. ಫಲಿತಾಂಶದ ಪ್ರಮಾಣ ಹಾಗೂ ರಾಜ್ಯದಲ್ಲಿ ಶ್ರೇಯಾಂಕ ಎರಡೂ ತೀವ್ರ ಕುಸಿತ ಕಂಡಿದೆ.

ಕಳೆದ ವರ್ಷ ಜಿಲ್ಲೆಯಲ್ಲಿ ಶೇ.92.55ರಷ್ಟು ಫಲಿತಾಂಶ ದೊರೆತಿತ್ತು. ಈ ಬಾರಿ ಶೇ.74.28ರ ಫಲಿತಾಂಶ ದೊರೆತಿದೆ. ಕಳೆದ ವರ್ಷ ಜಿಲ್ಲೆಯ ಫಲಿತಾಂಶದಲ್ಲಿ 14ನೇ ಸ್ಥಾನದಲ್ಲಿತ್ತು. ಈ ಬಾರಿ 23ನೇ ಸ್ಥಾನಕ್ಕೆ ಕುಸಿದಿದೆ. 2022ರಲ್ಲಿ ಜಿಲ್ಲೆ ಫಲಿತಾಂಶದಲ್ಲಿ 10ನೇ ಸ್ಥಾನದಲ್ಲಿತ್ತು.

ಕೇವಲ ದಾವಣಗೆರೆ ಜಿಲ್ಲೆಯಲ್ಲಷ್ಟೇ ಅಲ್ಲದೇ, ಇಡೀ ರಾಜ್ಯದಲ್ಲಿ ಫಲಿತಾಂಶದಲ್ಲಿ ತೀವ್ರ ಕುಸಿತವಾಗಿದೆ. ಇದಕ್ಕೆ ಕಟ್ಟುನಿಟ್ಟಿನ ಪರೀಕ್ಷೆಯೇ ಕಾರಣ ಎಂದು ಶಿಕ್ಷಣ ಮಂಡಳಿಯೇ ಪರೋಕ್ಷವಾಗಿ ಹೇಳುತ್ತಿದೆ.

ವೆಬ್‌ಕಾಸ್ಟಿಂಗ್ ನಿಗಾ ವಹಿಸಿದ ಕಾರಣ, ಪರೀಕ್ಷೆಯಲ್ಲಿ ನಕಲು ಮಾಡುವುದಕ್ಕೆ ದೊಡ್ಡ ಪ್ರಮಾಣದ ಕಡಿವಾಣ ಬಿದ್ದಿತ್ತು. ಹೀಗಾಗಿ ಹಲವಾರು ಜಿಲ್ಲೆಗಳ ಶ್ರೇಯಾಂಕದಲ್ಲಿ ಭಾರೀ ಏರಿಳಿತವಾಗಿದೆ. ಕಳೆದ ವರ್ಷ ಮೊದಲ ಸ್ಥಾನದಲ್ಲಿದ್ದ ಚಿತ್ರದುರ್ಗ, ಈ ಬಾರಿ 21ನೇ ಸ್ಥಾನಕ್ಕೆ ಕುಸಿದಿದೆ.

ಕರಾವಳಿ ಭಾಗದಲ್ಲಿ ನಕಲು ಮಾಡುವ ಪಿಡುಗು ಕಡಿಮೆ. ಹೀಗಾಗಿ ಈ ಬಾರಿ ನಕಲಿಗೆ ಕಡಿವಾಣ ಹಾಕಿದ್ದು, ಕರಾವಳಿ ಜಿಲ್ಲೆಗಳಿಗೆ ಲಾಭ ತಂದಿರುವ ಹಾಗಿದೆ. ಉಡುಪಿ 14ನೇ ಸ್ಥಾನದಿಂದ 1ನೇ ಸ್ಥಾನಕ್ಕೆ ಬರಲು ಹಾಗೂ ದಕ್ಷಿಣ ಕನ್ನಡ 17ನೇ ಸ್ಥಾನದಿಂದ ಎರಡನೇ ಸ್ಥಾನಕ್ಕೆ ಬರಲು ಇದೇ ಪ್ರಮುಖ ಕಾರಣ ಎಂಬ ಮಾತು ಸಾರ್ವಜನಿಕ ವಲಯದಲ್ಲಿ ಕೇಳಿ ಬರುತ್ತಿದೆ. ಫಲಿತಾಂಶ ಸುಧಾರಣೆಗಾಗಿ ವರ್ಷವಿಡೀ ಹಲವಾರು ಕ್ರಮಗಳನ್ನು ತೆಗೆದುಕೊಳ್ಳುತ್ತಾ ಬಂದಿರುವುದಾಗಿ ಶಿಕ್ಷಣ ಇಲಾಖೆ ತಿಳಿಸಿತ್ತು. ಕಡಿಮೆ ಫಲಿತಾಂಶದ ಶಾಲೆಗಳ ಮೇಲೆ ನಿಗಾ, ಕಲಿಕೆಯಲ್ಲಿ ಹಿಂದುಳಿದ ವಿದ್ಯಾರ್ಥಿಗಳಿಗೆ ಪಾಸಿಂಗ್ ಪ್ಯಾಕೇಜ್ ಬೋಧನೆ, ವಿಷಯ ತಜ್ಞರಿಂದ ಕಲಿಕೆ, ಶಿಕ್ಷಕರಿಗೆ ತರಬೇತಿ, ಪರೀಕ್ಷಾ ಭಯ ನಿವಾರಣೆಗೆ ಕ್ರಮ ಮುಂತಾದ ಹೆಜ್ಜೆಗಳನ್ನು ಇಡಲಾಗಿತ್ತು.

ಆದರೆ, ಅಂತಿಮ ಫಲಿತಾಂಶ ಮಾತ್ರ ನಿರೀಕ್ಷೆಗೆ ವಿರುದ್ಧವಾಗಿದೆ.

ಪರೀಕ್ಷೆಯ ಫಲಿತಾಂಶ ಸುಧಾರಣೆ ಕೇವಲ ಶಿಕ್ಷಕರು ಇಲ್ಲವೇ ಅಧಿಕಾರಿಗಳನ್ನು ಅವಲಂಬಿಸಿಲ್ಲ. ಪೋಷಕರು ಹಾಗೂ ವಿದ್ಯಾರ್ಥಿಗಳನ್ನೂ ಒಳಗೊಂಡಂತೆ ಇಡೀ ವ್ಯವಸ್ಥೆಯ ಸುಧಾರಿಸಿದಾಗ ಮಾತ್ರ ಫಲಿತಾಂಶ ಉತ್ತಮ ಪಡಿಸಲು ಸಾಧ್ಯ ಎಂದು ಶಿಕ್ಷಣ ಪರಿಣಿತರು ಅಭಿಪ್ರಾಯ ಪಡುತ್ತಾರೆ.

ಬಾಲಕರು ಹಾಗೂ ಬಾಲಕಿಯರ ಫಲಿತಾಂಶದ ನಡುವೆಯೂ ಗಣನೀಯ ವ್ಯತ್ಯಾಸ ಇದೆ. ದಾವಣಗೆರೆ ಜಿಲ್ಲೆಯಲ್ಲಿ ಬಾಲಕಿಯರು ಉತ್ತೀರ್ಣರಾಗುವ ಪ್ರಮಾಣ ಶೇ.82.53ರಷ್ಟಿದೆ. ಬಾಲಕರ ಉತ್ತೀರ್ಣ ಪ್ರಮಾಣ ಕೇವಲ ಶೇ.65.52ರಷ್ಟಿದೆ. ಬಾಲಕರು ಹಾಗೂ ಬಾಲಕಿಯರ ನಡುವಿನ ಉತ್ತೀರ್ಣತೆ ವ್ಯತ್ಯಾಸ ಶೇ.17ರಷ್ಟಿದೆ. ಕಲಿಕೆಯಲ್ಲಿ ಬಾಲಕರ ಗಮನ ನಿರೀಕ್ಷೆಯ ಮಟ್ಟದಲ್ಲಿ ಇಲ್ಲ ಎಂಬುದನ್ನು ಈ ಫಲಿತಾಂಶ ತೋರಿಸುತ್ತದೆ. ಬಾಲಕರ ಫಲಿತಾಂಶದಲ್ಲಿ ಸುಧಾರಣೆಯಾಗದೇ, ಒಟ್ಟಾರೆ ಫಲಿತಾಂಶವೂ ಏರಿಕೆಯಾಗದು ಎಂಬುದು ಸ್ಪಷ್ಟ.

ನಕಲು ಮಾರ್ಗದ ಮೂಲಕ ಎಸ್.ಎಸ್.ಎಲ್.ಸಿ. ಫಲಿತಾಂಶ ಹೆಚ್ಚಿಸಿಕೊಂಡು ಬೀಗುತ್ತಿದ್ದ ಜಿಲ್ಲೆಗಳು, ಈ ಬಾರಿ ಕಹಿ ವಾಸ್ತವ ಪರಿಸ್ಥಿತಿ ಎದುರಿಸಿವೆ.

ಇದು ಒಂದು ರೀತಿಯಲ್ಲಿ ಒಳ್ಳೆಯದೇ ಆಗಲಿದೆ. ನಕಲು ಮಾಡಲು ಅವಕಾಶವಿಲ್ಲದ ಕಾರಣ, ಶೈಕ್ಷಣಿಕ ವರ್ಷದ ಆರಂಭದಿಂದಲೇ ಕಲಿಕೆಗೆ ಒತ್ತು ನೀಡಬೇಕಾಗುತ್ತದೆ ಎಂದು ಶಿಕ್ಷಣ ಇಲಾಖೆಯ ಮೂಲಗಳು ತಿಳಿಸಿವೆ.

ದೇಶದಲ್ಲೇ ಮೊದಲ ಬಾರಿಗೆ ವೆಬ್‌ಕಾಸ್ಟಿಂಗ್ ಅನ್ನು ಪರಿಣಾಮಕಾರಿಯಾಗಿ ಜಾರಿಗೆ ತರಲಾಗಿದೆ. ಈ ಬಗ್ಗೆ ಬೇರೆ ಕೆಲ ರಾಜ್ಯಗಳಲ್ಲೂ ಆಸಕ್ತಿ ಕಂಡು ಬಂದಿದೆ. ವೆಬ್‌ಕಾಸ್ಟಿಂಗ್ ಕಾರಣದಿಂದ ಫಲಿತಾಂಶ ಕಡಿಮೆಯಾದರೂ, ಗುಣಮಟ್ಟದಲ್ಲಿ ಏರಿಕೆಯಾಗಿದೆ. ಮುಂದಿನ ದಿನಗಳಲ್ಲಿ ಇದರಿಂದ ಸಕಾರಾತ್ಮಕ ಪರಿಣಾಮವಾಗಲಿದೆ ಎಂದು ಇಲಾಖೆಯ ಮೂಲಗಳು ಹೇಳಿವೆ.

### ಗಂಭೀರತೆ ಹೆಚ್ಚಾದರೆ ಫಲಿತಾಂಶ ಉತ್ತಮ

ಮೂರು ದಿನಗಳ ಹಿಂದಷ್ಟೇ ಪ್ರಕಟವಾದ ಐ.ಸಿ.ಎಸ್.ಇ. 10ನೇ ತರಗತಿಯ ಫಲಿತಾಂಶದಲ್ಲಿ ಬಾಲಕರು ಶೇ.99.31 ಹಾಗೂ ಬಾಲಕಿಯರು ಶೇ.99.65ರಷ್ಟು ಫಲಿತಾಂಶ ಪಡೆದಿದ್ದರು. ಉಭಯರ ಫಲಿತಾಂಶದಲ್ಲಿ ಹೆಚ್ಚು ವ್ಯತ್ಯಾಸ ಇರಲಿಲ್ಲ.

ಆದರೆ, ಕರ್ನಾಟಕದಲ್ಲಿ ಹತ್ತನೇ ತರಗತಿಯಲ್ಲಿ ಬಾಲಕಿಯರು ಶೇಕಡ 81.11ರಷ್ಟು, ಬಾಲಕರು ಶೇಕಡ 65.90 ರಷ್ಟು ತೇರ್ಗಡೆಯಾಗಿದ್ದಾರೆ. ವ್ಯತ್ಯಾಸ ಶೇ.15ರಷ್ಟಿದೆ. ಕಲಿಕೆಯಲ್ಲಿ ಗಂಭೀರತೆ ಕಡಿಮೆಯಾಗುವುದೇ ಫಲಿತಾಂಶ ಇಳಿಕೆಯಾಗಲು ಕಾರಣ. ಐ.ಸಿ.ಎಸ್.ಇ. ವಿದ್ಯಾರ್ಥಿಗಳಲ್ಲಿ ಗಂಭೀರತೆ ಹೆಚ್ಚಾಗಿರುತ್ತದೆ. ಅದೇ ಗಂಭೀರತೆ ರಾಜ್ಯ ಮಂಡಳಿ ಪರೀಕ್ಷೆಯ ಬಾಲಕರಲ್ಲಿ ಕಂಡು ಬರುತ್ತಿಲ್ಲ ಎಂದು ಶಿಕ್ಷಣ ಪರಿಣಿತ ಜಗನ್ನಾಥ ನಾಡಿಗೇರ್ ಅಭಿಪ್ರಾಯ ಪಡುತ್ತಾರೆ.

ಪರೀಕ್ಷಾ ಸಮಯದಲ್ಲಿ ಐ.ಪಿ.ಎಲ್. ಬರುತ್ತದೆ. ಕ್ರಿಕೆಟ್ ಮೇಲೆ ಬಾಲಕರಿಗೆ ಹೆಚ್ಚು ಹುಚ್ಚು. ಇದು ಪರೀಕ್ಷಾ ಕಲಿಕೆಯ ಮೇಲೆ ಗಮನ ಕೇಂದ್ರೀಕರಿಸಲು ಅಡ್ಡಿಯಾಗುತ್ತಿದೆ ಎಂದೂ ಅವರು ತಿಳಿಸುತ್ತಾರೆ.

## ವೆಬ್‌ಕಾಸ್ಟಿಂಗ್‌ನಿಂದ ಶೇ.30ರಷ್ಟು ಕುಸಿದ ಫಲಿತಾಂಶ

ಬೆಂಗಳೂರು, ಮೇ 9 - ಈ ಬಾರಿ ನಕಲು ಮಾಡಲು ಅವಕಾಶ ಇಲ್ಲದಿದ್ದರಿಂದಲೇ ಎಸ್ಸೆಸ್ಸೆಲ್ಸಿ ಪರೀಕ್ಷೆ ಫಲಿತಾಂಶ ಶೇ. 30ರಷ್ಟು ಕುಸಿಯಲು ಕಾರಣ ಎಂದು ಪರೀಕ್ಷಾ ಮಂಡಳಿ ಪರೋಕ್ಷವಾಗಿ ಹೇಳಿದೆ.

ಇದೇ ಮೊದಲ ಬಾರಿಗೆ ಪರೀಕ್ಷಾ ಕೊಠಡಿಗಳಲ್ಲಿ ಸಿಸಿಟಿವಿ ಕ್ಯಾಮೆರಾ ಮತ್ತು ವೆಬ್‌ಕಾಸ್ಟಿಂಗ್ ಅಳವಡಿಸಿದ್ದರಿಂದ ನಕಲು ಮಾಡಲು ಹಾಗೂ ಕೊಠಡಿ ಮೇಲ್ವಿಚಾರಕರು ಸಣ್ಣ-ಪುಟ್ಟ ಸಮಸ್ಯೆ ಬಗೆಹರಿಸಲು ಸಾಧ್ಯವಾಗಲಿಲ್ಲ. ವೆಬ್‌ಕಾಸ್ಟಿಂಗ್‌ನಿಂದ ಪರೀಕ್ಷೆ ಕೊಠಡಿಗಳ ದೃಶ್ಯಾವಳಿಗಳನ್ನು ಮೇಲ್ವಿಚಾರಣೆ ಮಾಡಲು ಎಲ್ಲಾ ಜಿಲ್ಲೆಗಳಲ್ಲಿ ನಿಯಂತ್ರಣ ಕೊಠಡಿಗಳನ್ನು ಸ್ಥಾಪಿಸಲಾಗಿತ್ತು. ಇದರಿಂದಾಗಿ ಪರೀಕ್ಷಾ ಮೇಲ್ವಿಚಾರಕರು ಕಟ್ಟುನಿಟ್ಟಾಗಿ ಪರೀಕ್ಷೆಗಳನ್ನು ನಡೆಸಿದರು. ಇದರ ಪರಿಣಾಮವಾಗಿ ಫಲಿತಾಂಶ ಶೇಕಡ 30 ರಷ್ಟು ಕುಸಿಯಿತು. ಗ್ರೇಸ್ ಅಂಕ ಇಲ್ಲದೇ ಫಲಿತಾಂಶವನ್ನು ನೀಡಿದ್ದರೆ, ಇನ್ನೂ 1,75,000 ವಿದ್ಯಾರ್ಥಿಗಳು ಅನುತ್ತೀರ್ಣರಾಗಿರುತ್ತಿದ್ದರು.

ಸರ್ಕಾರ ಮಧ್ಯೆ ಪ್ರವೇಶ ಮಾಡಿ, ವಿದ್ಯಾರ್ಥಿಗಳ ಹಿತ ದೃಷ್ಟಿಯಿಂದ 20 ಅಂಕಗಳ ಗ್ರೇಸ್ ಮಾರ್ಕ್ಸ್ ನೀಡಿದ್ದಲ್ಲದೆ, ಪರೀಕ್ಷೆ ಪಾಸಾಗಲು ಇದ್ದ ಕನಿಷ್ಠ 35 ಅಂಕಗಳನ್ನು 25ಕ್ಕೆ ಇಳಿಸಿತು. ಫಲಿತಾಂಶ ಕುಸಿತ ಶೇ. 10ಕ್ಕೆ ಸೀಮಿತವಾಯಿತು. ಮುಂದಿನ ದಿನಗಳಲ್ಲಿ ವಿದ್ಯಾರ್ಥಿಗಳು ವೆಬ್‌ಕಾಸ್ಟಿಂಗ್ ವಿಧಾನಕ್ಕೆ ಹೊಂದಿಕೊಳ್ಳುವುದರಿಂದ ಫಲಿತಾಂಶದಲ್ಲಿ ಚೇತರಿಕೆ ಕಾಣುವ ವಿಶ್ವಾಸವಿದೆ ಎಂದು ಮಂಡಳಿ ಸಮರ್ಥಿಸಿಕೊಂಡಿದೆ.

## ಐಎಎಸ್ ಕನಸಿನಲ್ಲಿ ಜಿಲ್ಲಾ ಟಾಪರ್ ಗಾನವಿ

**(1ನೇ ಪುಟದಿಂದ)** ಗಳಿಸಿದ್ದಾರೆ. ಅವರು ರಾಜ್ಯ ಮಟ್ಟದಲ್ಲಿ ಆರನೇ ಸ್ಥಾನ ಪಡೆದುಕೊಂಡಿದ್ದಾರೆ.

ಎ.ಪಿ.ಎಂ.ಸಿ. ವರ್ತಕ ಹೆಚ್.ಎನ್. ಗಿರೀಶ್ ಹಾಗೂ ಗೃಹಿಣಿ ಡಿ.ಎಸ್. ಜ್ಯೋತಿ ಅವರ ಪುತ್ರಿಯಾಗಿರುವ ಗಾನವಿ, ಕನ್ನಡದಲ್ಲಿ 124, ಇಂಗ್ಲಿಷ್‌ನಲ್ಲಿ 98, ಹಿಂದಿಯಲ್ಲಿ 100, ಗಣಿತ 100, ವಿಜ್ಞಾನ 98 ಹಾಗೂ ಸಮಾಜದಲ್ಲಿ 100 ಅಂಕಗಳೊಂದಿಗೆ ಶೇ.99.20ರಷ್ಟು ಅಂಕ ಪಡೆದಿದ್ದಾರೆ.

ಚಿಕ್ಕಂದಿನಿಂದಲೂ ಓದಿನಲ್ಲಿ ತಾಯಿ ಮಾರ್ಗದರ್ಶನ ನೀಡುತ್ತಿದ್ದರು. ಸಿದ್ದಗಂಗಾ ಶಾಲೆಯಲ್ಲಿ ಬೆಳಿಗ್ಗೆ ಹಾಗೂ ಸಂಜೆ ಅಧ್ಯಯನಕ್ಕೆ ನೀಡುತ್ತಿದ್ದ ಮಾರ್ಗದರ್ಶನ ಹೆಚ್ಚು ಅಂಕ ಗಳಿಕೆಗೆ ನೆರವಾಗಿದೆ. ಮುಂದೆ ಐ.ಎ.ಎಸ್. ಪರೀಕ್ಷೆಯಲ್ಲಿ ಉತ್ತೀರ್ಣಳಾಗಿ ಜನ ಸೇವೆ ಮಾಡುವ ಬಯಕೆ ಇದೆ ಎಂದವರು ತಿಳಿಸಿದ್ದಾರೆ.

## ಸಣ್ಣ ರೈತರಿಗೆ 3 ಸಾವಿರ ಪರಿಹಾರ

**(1ನೇ ಪುಟದಿಂದ)** ಸಚಿವ ಕೃಷ್ಣಭೈರೇಗೌಡ ತಿಳಿಸಿದರು.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಕೇಂದ್ರದಿಂದ ಎನ್‌ಡಿಆರ್‌ಎಫ್ ಹಣ ಬಿಡುಗಡೆ ಆದ ಬಳಿಕ ರೈತರಿಗೆ ಅರ್ಹತೆಯ ಆಧಾರದಲ್ಲಿ ಪರಿಹಾರವನ್ನು ಪಾವತಿಸಲಾಗುತ್ತಿದೆ. ಈವರೆಗೆ ಒಟ್ಟು 32.12 ಲಕ್ಷ ರೈತರಿಗೆ ಸಂಪೂರ್ಣ ಬೆಳೆ ಪರಿಹಾರ ಮೊತ್ತವನ್ನು ಜಮೆ ಮಾಡಲಾಗಿದೆ ಎಂದು ಹೇಳಿದರು.

ಇನ್ನೂ ಸುಮಾರು ಎರಡು ಲಕ್ಷ ರೈತರಿಗೆ ಪರಿಹಾರ ನೀಡುವ ಪ್ರಕ್ರಿಯೆ ದಾಖಲೆ ಪರಿಶೀಲನೆ ಹಂತದಲ್ಲಿದೆ ಎಂದರು. ಇದಲ್ಲದೇ, ಸಾಕಷ್ಟು ತಾಲ್ಲೂಕುಗಳಲ್ಲಿ ಬರ ಪರಿಹಾರ ಪಟ್ಟಿಯಲ್ಲಿ ಸೇರದೆ ಇದ್ದ ಮಳೆ ಆಧಾರಿತ ಬೆಳೆಗಳಿಗೂ ಪರಿಹಾರ ಧನ ವಿತರಿಸಲು ಮತ್ತು ಎರಡು ಲಕ್ಷ ಹೆಕ್ಟೇರ್ ನೀರಾವರಿ ಪ್ರದೇಶವನ್ನು ಒಳಗೊಳ್ಳುವ 1.63 ಲಕ್ಷ ಅರ್ಹ ರೈತರಿಗೂ ಪರಿಹಾರ ವಿತರಿಸಲು ತೀರ್ಮಾನಿಸಲಾಗಿದೆ ಎಂದು ಹೇಳಿದರು.

ರಾಜ್ಯದಲ್ಲಿ ಅವಶ್ಯ ಇರುವ ವಿವಿಧ ಭಾಗಗಳಲ್ಲಿ 47 ಮೇವಿನ ಬ್ಯಾಂಕ್‌ಗಳನ್ನು ಮತ್ತು 28 ಕಡೆಗಳಲ್ಲಿ ಗೋಶಾಲೆಗಳನ್ನು ತೆರೆದು ಮೇವಿನ ಕೊರತೆ ನೀಗಿಸಲಾಗುತ್ತಿದೆ. ಈ ವೆಚ್ಚವನ್ನು ಭರಿಸಲು ಜಿಲ್ಲಾಧಿಕಾರಿಗಳು ಮತ್ತು ತಹಶೀಲ್ದಾರರ ಖಾತೆಯಲ್ಲಿ 836 ರೂ. ಕೋಟಿ ಅನುದಾನ ಲಭ್ಯವಿದೆ ಎಂದು ಕೃಷ್ಣಭೈರೇಗೌಡ ಹೇಳಿದರು.

## ಫಲಿತಾಂಶ : ಜಿಲ್ಲೆಯಲ್ಲಿ ಕುಸಿತ

**(1ನೇ ಪುಟದಿಂದ)** ಶಾಲೆಗಳು ಶೇ.88.25 ಹಾಗೂ ಉರ್ದು ಮಾಧ್ಯಮ ಶಾಲೆಗಳು ಶೇ.65.45ರ ಫಲಿತಾಂಶ ಪಡೆದಿವೆ.

ನಗರ ಪ್ರದೇಶಗಳಲ್ಲಿ ಶೇ.77.64 ಹಾಗೂ ಗ್ರಾಮೀಣ ಭಾಗದಲ್ಲಿ ಶೇ.72.13ರ ಫಲಿತಾಂಶ ದೊರೆತಿದೆ.

ಜಿಲ್ಲೆಯ ಒಟ್ಟು 36 ಶಾಲೆಗಳು ಶೇ.100ರಷ್ಟು ಫಲಿತಾಂಶ ಪಡೆದಿವೆ. ಇವುಗಳಲ್ಲಿ 26 ಅನುದಾನ ರಹಿತ, ಒಂಭತ್ತು ಸರ್ಕಾರಿ ಶಾಲೆ ಹಾಗೂ ಒಂದು ಅನುದಾನಿತ ಶಾಲೆಯಾಗಿದೆ.

ನಗರದ ಭಾರತ್ ಕಾಲೋನಿಯಲ್ಲಿರುವ ನೇತಾಜಿ ಸುಭಾಷ್‌ಚಂದ್ರ ಬೋಸ್ ಶಾಲೆ, ಎಸ್.ಎಸ್. ಬಡಾವಣೆ ಬಿ ಬ್ಲಾಕ್‌ನಲ್ಲಿರುವ ರಾಘವೇಂದ್ರ ವಿದ್ಯಾನಿಕೇತನ ಹಾಗೂ ಹೊನ್ನಾಳಿಯ ಸಾಸ್ವೆಹಳ್ಳಿಯ ಎ.ಡಿ.ವಿ.ಎಸ್. ಹೈಸ್ಕೂಲ್‌ಗಳು ಶೂನ್ಯ ಫಲಿತಾಂಶ ಪಡೆದಿವೆ.

ಜಿಲ್ಲೆಯ 47 ಶಾಲೆಗಳಲ್ಲಿ ಶೇ.40ಕ್ಕೂ ಕಡಿಮೆ ಫಲಿತಾಂಶ ದಾಖಲಾಗಿದೆ. ಇವುಗಳಲ್ಲಿ 33 ಅನುದಾನಿತ, ಎಂಟು ಸರ್ಕಾರಿ ಹಾಗೂ ಆರು ಅನುದಾನ ರಹಿತ ಶಾಲೆಗಳಾಗಿವೆ.

## ಜೈನ್ ವಿದ್ಯಾಲಯಕ್ಕೆ ಉತ್ತಮ ಫಲಿತಾಂಶ



ದಾವಣಗೆರೆ, ಮೇ 9 - ಪಿ.ಜೆ. ಬಡಾವಣೆಯ ಜೈನ್ ವಿದ್ಯಾಲಯ ಶಾಲೆಯಲ್ಲಿ ಎಸ್.ಎಸ್.ಎಲ್.ಸಿ. ಪರೀಕ್ಷೆಗೆ ಒಟ್ಟು 98 ವಿದ್ಯಾರ್ಥಿಗಳು ಹಾಜರಾಗಿದ್ದು, ಅವರಲ್ಲಿ 23 ವಿದ್ಯಾರ್ಥಿಗಳು ಡಿಸ್ಟಿಂಕ್ಷನ್, 55 ವಿದ್ಯಾರ್ಥಿಗಳು ಪ್ರಥಮ ದರ್ಜೆ, 12 ವಿದ್ಯಾರ್ಥಿಗಳು ದ್ವಿತೀಯ ದರ್ಜೆಯಲ್ಲಿ ಉತ್ತೀರ್ಣರಾಗಿದ್ದಾರೆ.

ಶಾಲೆಯ ಕು. ಮನೋಜ್ ಹೆಗ್ಗಡೆ ಎಸ್.ಡಿ., 625 ಕ್ಕೆ 610 (97.6%) ಅಂಕಗಳನ್ನು ಗಳಿಸಿದ್ದಾರೆ. ಸಂಸ್ಕೃತ – 3 ವಿದ್ಯಾರ್ಥಿಗಳು, ಇಂಗ್ಲೀಷ್ – 1 ವಿದ್ಯಾರ್ಥಿ, ಹಿಂದಿ - 5 ವಿದ್ಯಾರ್ಥಿಗಳು, ತೃತೀಯ ಭಾಷೆ ಕನ್ನಡ – 1 ವಿದ್ಯಾರ್ಥಿ, ಸಮಾಜ ವಿಜ್ಞಾನ – 1 ವಿದ್ಯಾರ್ಥಿ 100 ಕ್ಕೆ 100 ಅಂಕ ಗಳಿಸಿದ್ದಾರೆ.

# ಪ್ರಜ್ವಲ್ ಪೆನ್‌ಡ್ರೈವ್ ಪ್ರಕರಣ ಸಿಬಿಐಗೆ ವಹಿಸಲು ರಾಜ್ಯಪಾಲರಿಗೆ ಜೆಡಿಎಸ್ ಮನವಿ

ಬೆಂಗಳೂರು, ಮೇ 9 - ಸಂಸದ ಪ್ರಜ್ವಲ್ ರೇವಣ್ಣ ಪೆನ್‌ಡ್ರೈವ್ ಪ್ರಕರಣದ ತನಿಖೆಯನ್ನು ಸಿಬಿಐಗೆ ವಹಿಸುವಂತೆ ಜಾತ್ಯತೀತ ಜನತಾ ದಳ ಇಂದಿಲ್ಲಿ ರಾಜ್ಯಪಾಲ ಥಾವರ್ ಚಂದ್ ಗೆಹ್ಲೋಟ್ ಅವರಿಗೆ ಮನವಿ ಮಾಡಿದೆ.

ಲೈಂಗಿಕ ದೌರ್ಜನ್ಯ ದೃಶ್ಯಗಳನ್ನು ಪೆನ್‌ಡ್ರೈವ್ ಮೂಲಕ ಹಂಚಿ, ಸಂತ್ರಸ್ತೆಯರ ಬದುಕು ಹಾಳುಗೆಡವುವಲ್ಲಿ ಉಪಮುಖ್ಯ ಮಂತ್ರಿ ಡಿ.ಕೆ. ಶಿವಕುಮಾರ್ ಅವರ ಕೈವಾಡ ಮೇಲ್ನೋಟಕ್ಕೆ ಕಂಡುಬಂದಿದೆ.

ತನಿಖೆ ಮುಗಿಯುವವರೆಗೂ ಅವರನ್ನು ಸಂಪುಟದಿಂದ ಕೈಬಿಡುವಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ನಿರ್ದೇಶನ ನೀಡಬೇಕೆಂದು ಮನವಿ ಮಾಡಿದೆ.


ರಾಜಭವನಕ್ಕೆ ತೆರಳುವ ಮುನ್ನ ಮಾಜಿ ಸಚಿವ ಜಿ.ಟಿ. ದೇವೇಗೌಡರ ಅಧ್ಯಕ್ಷತೆಯಲ್ಲಿ ನಡೆದ ಕೋರ್ ಕಮಿಟಿ ಸಭೆಯಲ್ಲಿ ಪ್ರಜ್ವಲ್ ರೇವಣ್ಣ ಪ್ರಕರಣ ಹಾಗೂ ಎಸ್‌ಐಟಿ ಏಕಪಕ್ಷೀಯವಾಗಿ ವರ್ತಿಸುತ್ತಿರುವ ಬಗ್ಗೆ ಚರ್ಚಿಸಿ, ನ್ಯಾಯಕ್ಕಾಗಿ ರಾಜ್ಯಪಾಲರ ಮೊರೆ ಹೋಗುವ ತೀರ್ಮಾನವನ್ನು ಸಭೆ ಕೈಗೊಂಡಿತು. ಅದರಂತೆ, ಮಾಜಿ ಸಿಎಂ ಹೆಚ್.ಡಿ.ಕುಮಾರಸ್ವಾಮಿ ನೇತೃತ್ವದಲ್ಲಿ ಪಕ್ಷದ ಮುಖಂಡರು ರಾಜ್ಯಪಾಲರನ್ನು ಭೇಟಿ ಮಾಡಿ ಮನವಿ ಸಲ್ಲಿಸಿದರು.

ದೇವರಾಜೇಗೌಡ ಮತ್ತು ಡಿ.ಕೆ.ಶಿವಕುಮಾರ್ ನಡುವಿನ ಸಂಭಾಷಣೆಯಿಂದ ಈ ಪ್ರಕರಣದಲ್ಲಿ ದೇವೇಗೌಡ, ಕುಮಾರಸ್ವಾಮಿ ಮತ್ತು ಜೆಡಿಎಸ್‌ನ ಗೌರವ ಮತ್ತು ಘನತೆಗೆ ಕುಂದು ತರುವ ಪಿತೂರಿ ಕಾಣುತ್ತಿದೆ.

ಪ್ರಕರಣ ತನಿಖೆ ನಡೆಸುತ್ತಿರುವ ಎಸ್‌ಐಟಿ ಏಕಪಕ್ಷೀಯವಾಗಿ ಕಾರ್ಯನಿರ್ವಹಿಸುತ್ತಿದೆ, ಕಾನೂನು ರೀತ್ಯ ತನಿಖೆ ಕೈಗೊಳ್ಳದೆ, ದುರುದ್ದೇಶ ಪೂರಿತ, ಪಾರದರ್ಶಕವಲ್ಲದ ತನಿಖೆ ನಡೆಸುತ್ತಿದೆ.

ಪೆನ್‌ಡ್ರೈವ್‌ಗಳನ್ನು ಹಂಚುವುದನ್ನು ತಡೆಗಟ್ಟುವಲ್ಲಿ ರಾಜ್ಯ ಸರ್ಕಾರ ಸಂಪೂರ್ಣ ವಿಫಲವಾಗಿದ್ದು, ಘಟನೆಯ ಸಂತ್ರಸ್ತೆಯರ ಗೌರವಕ್ಕೆ ಧಕ್ಕೆ ತಂದಿದೆ ಎಂದು ಜೆಡಿಎಸ್ ನಾಯಕರು ಮನವಿಯಲ್ಲಿ ತಿಳಿಸಿದ್ದಾರೆ.

**ಶ್ರೀ ಶಿವಶರಣೆ ಹೇಮರಡ್ಡಿ ಮಲ್ಲಮ್ಮ 601ನೇ ಜಯಂತ್ಯೋತ್ಸವದ ಶುಭಾಶಯಗಳು**



ಶುಭ ಕೋರುವವರು
ಡಾ॥ ಕೊಟ್ರೇಶ್ ಬಿದ್ರಿ, ಅಧ್ಯಕ್ಷರು
ಮತ್ತು ಪದಾಧಿಕಾರಿಗಳು ಹಾಗೂ ಸಮಾಜದ ಬಂಧುಗಳು.

**ಕಮ್ಮವಾರಿ ಸಂಘ (ರಿ.)**
#3617, ಬೇತೂರು ರೈಸ್ ಮಿಲ್ ಹಿಂಭಾಗ, ಕಾಕತೀಯ ನಗರ, ಹರಿಹರ ರಸ್ತೆ, ದಾವಣಗೆರೆ - 06. ಮೊ : 9972105666

**ಸಾರ್ವಜನಿಕ ಪ್ರಕಟಣೆ**

ಮಾನ್ಯ ಸಾರ್ವಜನಿಕರಲ್ಲಿ ಈ ಮೂಲಕ ತಿಳಿಯಪಡಿಸುವುದೇನೆಂದರೆ ಮೇಲ್ಕಂಡ ನಮ್ಮ ಸಂಘದ ಸಮುದಾಯ ಭವನದಲ್ಲಿ ಯಾರಾದರೂ ತಮಗೆ ಸಂಬಂಧಿಸಿದ ಮದುವೆ ಅಥವಾ ಇನ್ನಾವುದೇ ಸಮಾರಂಭ, ಕಾರ್ಯಕ್ರಮಗಳನ್ನು ನೆರವೇರಿಸಿಕೊಳ್ಳಲು ಮುಂಗಡ ಕಾಯ್ದಿರಿಸಿಕೊಂಡಿರುವವರು ( ಬುಕ್ ಮಾಡಿಕೊಂಡಿರುವವರು) ಕೂಡಲೇ ನಮ್ಮ ಸಂಘದ ಕಛೇರಿಯಲ್ಲಿ ತಪ್ಪದೇ ಭೇಟಿಯಾಗಲು ಕೋರಲಾಗಿದೆ.

ಅಧ್ಯಕ್ಷರು/ಕಾರ್ಯದರ್ಶಿ

**ಸಾರ್ವಜನಿಕ ಪ್ರಕಟಣೆ**

ಶ್ರೀ ಎಚ್.ಕೆ. ಬಸಪ್ಪ ಬಿನ್ ದಿ॥ ಕೆಂಚಪ್ಪ, ಉದ್ಯೋಗ : ವ್ಯವಸಾಯ, ವಿಳಾಸ : ಹಿಂಡಸಗಟ್ಟೆ ಗ್ರಾಮ, ದಾವಣಗೆರೆ ತಾಲ್ಲೂಕು ಮತ್ತು ಜಿಲ್ಲೆ ವಾಸಿಯಾದ ನಾನು ಕೊಡುವ ಪ್ರಕಟಣೆ ಏನೆಂದರೆ.

ನಾನು ಮತ್ತು ನನ್ನ ಸಹೋದರರು ಸೇರಿಕೊಂಡು ದಿನಾಂಕ : 23.04.2010 ರಂದು ಪಾಲುವಿಭಾಗ ಮಾಡಿಕೊಂಡಿದ್ದು, ಸದರಿ ಪಾಲು ವಿಭಾಗ ಪತ್ರವು ದಾವಣಗೆರೆ ಸಬ್ ರಿಜಿಸ್ಟ್ರರ್ ಕಛೇರಿಯಲ್ಲಿ ರಿ.ನಂ. 957/2010-11 ದಿನಾಂಕ : 24.04.2010 ರಂದು ರಿಜಿಸ್ಟರ್ ಆಗಿರುತ್ತದೆ. ನನಗೆ ಈ ಕೆಳಕಂಡ ಷೆಡ್ಯೂಲ್ ಆಸ್ತಿಗಳು ಪಾಲು ವಿಭಾಗ ಪತ್ರದಲ್ಲಿ ನನ್ನ ಹೆಸರಿಗೆ ಬಂದಿರುತ್ತವೆ. ಸದರಿ ಮೂಲ ಪಾಲು ವಿಭಾಗ ಪತ್ರವು ದಿನಾಂಕ : 05.01.2024 ರಂದು ಮನೆ ಬದಲಿಸುವಾಗ ಆಕಸ್ಮಿಕವಾಗಿ ಕಳೆದುಹೋಗಿರುತ್ತದೆ. ಕಳೆದು ಹೋದ ಬಗ್ಗೆ ದಿನಾಂಕ : 08.05.2024 ರಲ್ಲಿ ಪೊಲೀಸ್ ಇಲಾಖೆಗೆ ದೂರು ನೀಡಿದ್ದು, ಸದರಿ ದೂರಿನ ನಂ. 1044266/2024 ಎಂದು ನಮೂದಾಗಿರುತ್ತದೆ. ಸದರಿ ಪಾಲು ವಿಭಾಗ ಪತ್ರವು ಯಾರಿಗಾದರೂ ಸಿಕ್ಕಲ್ಲಿ ದಯವಿಟ್ಟು ನನಗೆ ತಲುಪಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಷೆಡ್ಯೂಲ್ : 1) ದಾವಣಗೆರೆ ತಾಲ್ಲೂಕು, ಮಾಯಕೊಂಡು ಹೋಬಳಿ, ಪಿಟ್ಟನಹಳ್ಳಿ ಗ್ರಾಮದ ರಿ.ಸ.ನಂ. 16/12ರಲ್ಲಿ 1 ಎಕರೆ 17.04 ಗುಂಟೆ ಜಮೀನು. 2) ದಾವಣಗೆರೆ ತಾಲ್ಲೂಕು, ಮಾಯಕೊಂಡ ಹೋಬಳಿ, ಪಿಟ್ಟನಹಳ್ಳಿ ಗ್ರಾಮದ ರಿ.ಸ.ನಂ. : 3/8ರಲ್ಲಿ 2 ಎಕರೆ 14.04 ಗುಂಟೆ ಜಮೀನು.

ದಿನಾಂಕ : 09.05.2024
ಸಹಿ/- ಕುಮಾರ್ ಹೆಚ್.ಬಿ.,
ಮೊ. : 8310254336

SPARSH HOSPITAL
THE TOUCH OF LIFE

**ಸ್ಪರ್ಶ್ ಸೂಪರ್ ಸ್ಪೆಷಾಲಿಟಿ ಕ್ಲಿನಿಕ್**

ಸ್ಪರ್ಶ್ ಆಸ್ಪತ್ರೆ – ಬೆಂಗಳೂರು ಇಲ್ಲಿನ ಪಿತ್ತಕೋಶ
ದಾವಣಗೆರೆ ಸ್ಪರ್ಶ್ ಆಸ್ಪತ್ರೆಯಲ್ಲಿ ಸಮಾಲೋಚನೆಗೆ ಲಭ್ಯರಿರುತ್ತಾರೆ.

**ಡಾ॥ ನಿಖಿಲ್ ಬೋಂದಾಡೆ**
MBBS, MD - Internal Medicine, DM - Gastroenterology
ಕನ್ಸಲ್ಟೆಂಟ್ ಗ್ಯಾಸ್ಟ್ರೋಎಂಟರೊಲೊಜಿಸ್ಟ್



ನಿಮ್ಮ ದಾವಣಗೆರೆಗೆ ಭೇಟಿ ನೀಡುತ್ತಾರೆ

- ಜಾಂಡೀಸ್ • ಫ್ಯಾಟಿ ಲಿವರ್ • ಒಬೆಸಿಟಿ • ಹೆಪಟೈಟಿಸ್ ಬಿ • ಹೆಪಟೈಟಿಸ್ ಸಿ
- ಆಲ್ಕೋಹಾಲ್ ರಿಲೇಟೆಡ್ ಲಿವರ್ ಡಿಸೀಸ್ • ಅಸಿಟ್ಸ್ • ಬ್ಲಡ್ ವೊಮಿಟಿಂಗ್
- ಲಿವರ್ ಸ್ವೆಲ್ಲಿಂಗ್ • ಫ್ಯಾಮಿಲಿ ಹಿಸ್ಟರಿ ಆ ಲಿವರ್ ಡಿಸೀಸ್

ನೋಂದಣಿಗಾಗಿ ಕರೆಮಾಡಿ: 96869 29090 / 99800 33277

ದಿನಾಂಕ: ಭಾನುವಾರ, 12ನೇ ಮೇ 2024 ಸಮಯ: ಬೆಳಿಗ್ಗೆ 11ರಿಂದ ಸಂಜೆ 4ರವರೆಗೆ

ಹೊರ ರೋಗಿಗಳ ಕ್ಲಿನಿಕ್ ವಿಳಾಸ: ಎಸ್. ಎಸ್. ಸ್ಪೆಷಾಲಿಟಿ ಕ್ಲಿನಿಕ್, ಮೋದಿ ಕಾಂಪೌಂಡ್, ಎಂ.ಸಿ.ಸಿ. 'ಎ' ಬ್ಲಾಕ್, ಮೋತಿ ವೀರಪ್ಪ ಕಾಲೇಜು ಹತ್ತಿರ, ದಾವಣಗೆರೆ – 577 002

ಸ್ಪರ್ಶ್ ಆಸ್ಪತ್ರೆ ಎಲ್ಲಾ ಆರೋಗ್ಯ ವಿಮಾ(TPA) ಯೋಜನೆಯಡಿಯಲ್ಲಿ ಅಂಗೀಕೃತವಾಗಿದೆ

॥ ಶ್ರೀ ಆಂಜನೇಯ ಸ್ವಾಮಿ ಪ್ರಸನ್ನ ॥

**ಗೃಹ ಪ್ರವೇಶ ಮತ್ತು ಚಿಕಿತ್ಸಾಲಯ ಉದ್ಘಾಟನ ಆಮಂತ್ರಣ ಪತ್ರಿಕೆ**

ಆತ್ಮೀಯರೇ, ಗುರು–ಹಿರಿಯರ, ಬಂಧು–ಮಿತ್ರರ, ಹಿತೈಷಿಗಳ ಆಶೀರ್ವಾದ, ಹಾರೈಕೆಯಿಂದ ಇಂದು ನಾವು ನಮ್ಮ ಗೃಹ ನಿರ್ಮಾಣ ಕಾರ್ಯವನ್ನು ಸಂಪೂರ್ಣಗೊಳಿಸಿದ್ದೇವೆ. ಇದಕ್ಕೆಲ್ಲಾ ಕಾರಣರಾದ ತಾವುಗಳು **ದಿನಾಂಕ:10–05–2024ರಂದು** ನಡೆಯಲಿರುವ **ಗೃಹ ಪ್ರವೇಶ ಮತ್ತು ಚಿಕಿತ್ಸಾಲಯ ಉದ್ಘಾಟನ** ಕಾರ್ಯಕ್ರಮಕ್ಕೆ ಆಗಮಿಸಿ, ನಮ್ಮನ್ನು ಹರಸಿ, ಆಶೀರ್ವದಿಸಬೇಕೆಂದು ತಮ್ಮಲ್ಲಿ ಕೋರಿಕೊಳ್ಳುತ್ತೇವೆ.

ದಿನಾಂಕ: 10–05–2024ನೇ ಶುಕ್ರವಾರ
ಪೂಜೆ ಸಮಯ ಬೆಳಿಗ್ಗೆ 5ರಿಂದ 7.30ರವರೆಗೆ ಬ್ರಾಹ್ಮಿ ಮುಹೂರ್ತ

ಶ್ರೀ ಸತ್ಯನಾರಾಯಣಸ್ವಾಮಿ ಪೂಜೆ ಬೆಳಗ್ಗೆ 11.30 ರಿಂದ 1.00 ಗಂಟೆಯವರೆಗೆ
ಭೋಜನ ಮದ್ಯಾಹ್ನ 1.00 ರಿಂದ

ಸ್ಥಳ: ಎಸ್.ಎಸ್.ಲೇಔಟ್, ಎ ಬ್ಲಾಕ್, ಅಥಣಿ ಕಾಲೇಜು ಮೇನ್ ರಸ್ತೆ, (ಕುಂದುವಾಡ ಕೆರೆ ರೋಡ್), ದಾವಣಗೆರೆ.

ತಮ್ಮ ಸುಖಾಗಮನ ಬಯಸುವವರು
**ವೈದ್ಯ ರೂಪ.ಬಿ. ಮತ್ತು ವೈದ್ಯ ಪ್ರವೀಣ್.ಬಿ.**
**ಕುಟುಂಬಸ್ಥರು ಹಾಗೂ ಬಂಧುಗಳು–ಮಿತ್ರರು.**

ನಮ್ಮ ಹಳೆಯ ವಿಳಾಸ: ಅಶ್ವಸ್ಥ ಆಯುರ್ವೇದ ಮತ್ತು ಪಂಚಕರ್ಮ ಚಿಕಿತ್ಸಾಲಯ, ವಿದ್ಯಾನಗರ 2ನೇ ಬಸ್‌ಸ್ಟಾಪ್, ಪ್ರಗತಿ ಕೃಷ್ಣ ಗ್ರಾಮೀಣ ಬ್ಯಾಂಕ್ ಎದುರು, ದಾವಣಗೆರೆ-577005

# ನಗರದ ಕೆ.ಆರ್. ಮಾರುಕಟ್ಟೆಯ ಮಳಿಗೆಗಳ ಪುನರಾರಂಭ ಇಂದು

ದಾವಣಗೆರೆ, ಮೇ 9 - ನಗರದ ಶ್ರೀ ಕೃಷ್ಣ ರಾಜೇಂದ್ರ ತರಕಾರಿ ಮಾರುಕಟ್ಟೆ ವರ್ತಕರ ಸಂಘದ ವತಿಯಿಂದ ನಾಳೆ ದಿನಾಂಕ 10ರ ಶುಕ್ರವಾರ ಕೆ.ಆರ್. ಮಾರುಕಟ್ಟೆಯ ನೂತನ ಸಂಕೀರ್ಣದಲ್ಲಿ ವಿಶೇಷ ಪೂಜೆ, ವಾಸ್ತು ಶಾಂತಿ ಹಾಗೂ ಪ್ರಸಾದ ವಿನಿಯೋಗ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದು ಸಂಘದ ಅಧ್ಯಕ್ಷ ಐರಣಿ ಬಕ್ಕೇಶ್ ತಿಳಿಸಿದ್ದಾರೆ.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಹವನ ಪೂಜೆಯೊಂದಿಗೆ ಮಳಿಗೆಗಳನ್ನು ಪುನರ್ ಪ್ರಾರಂಭ ಮಾಡಲಾಗುವುದು ಎಂದು ತಿಳಿಸಿದರು.

ಸ್ಮಾರ್ಟ್ ಸಿಟಿ ವತಿಯಿಂದ ಈ ಸಂಕೀರ್ಣ ನಿರ್ಮಿಸಲಾಗಿದೆ. ಒಟ್ಟು 254 ಮಳಿಗೆಗಳು ಸಿದ್ಧವಾಗಿವೆ. 95 ಜನ ಮೂಲ ಮಳಿಗೆಗಾರರಿಗೆ ಮಳಿಗೆ ದೊರೆತಿವೆ ಎಂದು ಬಕ್ಕೇಶ್ ಹೇಳಿದರು.

ಸಂಘದ ಖಜಾಂಚಿ ಟಿ.ಎಂ. ಚಂದ್ರಮೋಹನ್ ಮಾತನಾಡಿ, ನೆಲ ಮಹಡಿ ಹಾಗೂ ಮೊದಲ ಮಹಡಿಯಲ್ಲಿ 9x9 ಅಡಿಯ ಮಳಿಗೆಗಳನ್ನು ನಿರ್ಮಿಸಿ ವಿತರಿಸಲಾಗುತ್ತಿದೆ. ರ್‍ಯಾಂಪ್ ನಿರ್ಮಾಣ ಇನ್ನೂ ಪೂರ್ಣಗೊಳ್ಳದ ಕಾರಣ, ಎರಡನೇ ಮಹಡಿಯಲ್ಲಿ ವಾಹನ ನಿಲುಗಡೆಗೆ ಅವಕಾಶ ಸಿಗುತ್ತಿಲ್ಲ ತಿಳಿಸಿದರು.

ಈ ಹಿಂದಿನ ಮಾರುಕಟ್ಟೆಯಲ್ಲಿ ಹಣ್ಣು - ಹೂವು, ತರಕಾರಿ, ದಿನಸಿ ಸೇರಿದಂತೆ ವಿವಿಧ ವ್ಯಾಪಾರಿಗಳಿಗೆ ಅನುಕೂಲ ಇತ್ತು. ಈಗ ಎಲ್ಲರಿಗೂ ಏಕರೂಪದ ಸಣ್ಣ ಗಾತ್ರದ ಮಳಿಗೆಗಳು ದೊರೆತಿರುವುದು ಸಮಸ್ಯೆ ತಂದಿದೆ ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

ಪತ್ರಿಕಾಗೋಷ್ಠಿಯಲ್ಲಿ ಸಂಘದ ಪದಾಧಿಕಾರಿಗಳಾದ ಎಂ.ಜಿ. ನಾಗರಾಜ, ಪಿ. ರುದ್ರೇಶ್, ಜಿ.ಎಸ್. ದಾನೇಶಪ್ಪ, ಪಿ. ಶಿವಾನಂದಪ್ಪ, ಎಲ್. ಮುರುಗೇಶ್ ಮತ್ತಿತರರು ಉಪಸ್ಥಿತರಿದ್ದರು.

# ಯುನೈಟೆಡ್ ಇಂಟರ್‌ನ್ಯಾಷನಲ್ ಶಾಲೆಗೆ ಶೇ. 100 ಫಲಿತಾಂಶ

ದಾವಣಗೆರೆ, ಮೇ 9- ನಗರದ ಯುನೈಟೆಡ್ ಇಂಟರ್‌ನ್ಯಾಷನಲ್ ಸ್ಕೂಲ್‌ನ ಮೊದಲ ಬ್ಯಾಚಿನ ಎಲ್ಲಾ ವಿದ್ಯಾರ್ಥಿಗಳು ಉತ್ತೀರ್ಣರಾಗುವ ಮೂಲಕ ಶಾಲೆಗೆ ಶೇ. 100 ಫಲಿತಾಂಶ ಲಭಿಸಿದೆ.

ಅರಫಾ ರಹಮಾನ್ 540 ಅಂಕ ಗಳಿಸುವ ಮೂಲಕ ಶಾಲೆಗೆ ಮೊದಲ ಸ್ಥಾನ, ಅಲ್ಫಿಯಾ ಬಾನು 527 ಅಂಕ ಹಾಗೂ ಅರ್ಫ ಬಾನು 508 ಅಂಕ ಪಡೆದು ಕ್ರಮವಾಗಿ ದ್ವಿತೀಯ ಹಾಗೂ ತೃತೀಯ ಸ್ಥಾನ ಪಡೆದಿದ್ದಾರೆ.

ಶಾಲೆಗೆ ಕೀರ್ತಿ ತಂದ ವಿದ್ಯಾರ್ಥಿಗಳನ್ನು ಶಾಲೆಯ ಛೇರ್ಮನ್ ಬಿ. ದಾದಾಪೀರ್, ಪ್ರಾಚಾರ್ಯ ಇಷ್ತಿಯಾಕ್ ಖಾನ್ ಪಠಾನ್, ಕೋ ಆರ್ಡಿನೇಟರ್ ಶ್ರೀಮತಿ ಶಫುನ್ನೀಸ, ಆಡಳಿತಾಧಿಕಾರಿ ಅಶ್ಫಾಕ್ ಅಹ್ಮದ್ ಪಾಣಿಬಂದ್, ಇಸ್ಲಾಮಿಕ್ ಸ್ಟಡೀಸ್‌ನ ಹೆಚ್.ಓ.ಡಿ ಶೋಯೇಬ್ ನಯಿಮಿ ಹಾಗೂ ಶಿಕ್ಷಕರು, ಬೋಧಕೇತರ ಸಿಬ್ಬಂದಿಗಳು ಅಭಿನಂದಿಸಿದ್ದಾರೆ.

# ನಮಗೇಕಿಲ್ಲ ಕಲಿಕೆಯಲ್ಲಿ ಸಮಾನ ಅವಕಾಶ?

## ಎಸ್.ಎಸ್.ಎಲ್.ಸಿ.ಯಲ್ಲಿ ಸಾಧನೆ ಮಾಡಿದ ಅಂಧ ವಿದ್ಯಾರ್ಥಿನಿ ಪ್ರಶ್ನೆ



ದಾವಣಗೆರೆ, ಮೇ 9 - ಕಲಿಕೆಯಲ್ಲಿ ಸಾಧನೆ ಮಾಡುವ ಸಾಮರ್ಥ್ಯ ಪ್ರದರ್ಶಿಸಿದರೂ, ಕಣ್ಣಿಲ್ಲ ಎಂಬ ಏಕೈಕ ಕಾರಣಕ್ಕೆ ಸಮಾನ ಅವಕಾಶ ನಿರಾಕರಿಸುವುದು ಸರಿಯೇ?

ಈ ಪ್ರಶ್ನೆ ಮುಂದಿಟ್ಟಿರುವುದು ಎಸ್.ಎಸ್.ಎಲ್.ಸಿ.ಯಲ್ಲಿ 593 ಅಂಕ ಗಳಿಸಿ ಸಾಧನೆ ಮಾಡಿರುವ ನಗರದ ಪಿ. ಯುಕ್ತಿ.

ಅಂಧ ವಿದ್ಯಾರ್ಥಿಗಳು 7ನೇ ತರಗತಿಯ ನಂತರ ಸಾಮಾನ್ಯರ ಜೊತೆ ಸಾಮಾನ್ಯ ಶಾಲೆಯಲ್ಲಿ ಕಲಿತರೆ ಸಾಮಾಜಿಕ ಬದುಕಿಗೆ ನೆರವಾಗುತ್ತದೆ. ನಾವೂ ಮುಖ್ಯವಾಹಿನಿಗೆ ಬರಲು ಸಾಧ್ಯವಾಗುತ್ತದೆ. ಆದರೆ, ಅಂಧರೆಂಬ ಕಾರಣಕ್ಕಾಗಿ ಸಾಮಾನ್ಯ ಶಾಲೆಗಳು ನಮ್ಮನ್ನು ಸೇರಿಸಿಕೊಳ್ಳಲು ಹಿಂಜರಿಯುತ್ತವೆ ಎಂದು ಯುಕ್ತಿ ಹೇಳಿದ್ದಾರೆ.

ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ 9ನೇ ತರಗತಿಯ ವಿದ್ಯಾರ್ಥಿನಿ ಯಶಸ್ವಿನಿ ಅವರು ಸ್ಕ್ರೈಬ್ ಆಗಿ ನೆರವು ನೀಡಿದ್ದರು. ಶಿಕ್ಷಕರು ಹಾಗೂ ಸಹಪಾಠಿಗಳು ನನಗೆ ಸಹಕರಿಸಿದ್ದರು. ಮುಂದೆ ಐಎಎಸ್





ಪರೀಕ್ಷೆಯ ಗುರಿ ಇದೆ ಎಂದವರು ತಿಳಿಸಿದ್ದಾರೆ.

ನನ್ನ ಮಗಳು ಏಳನೇ ತರಗತಿಯವರೆಗೆ ಅಂಧರ ಶಾಲೆಯಲ್ಲಿದ್ದಳು. ನಂತರ ಸಾಮಾನ್ಯ ಶಾಲೆಗೆ ಸೇರಿಸಬೇಕು ಎಂದು ಏಳೆಂಟು ಶಾಲೆಗಳಿಗೆ ಅಲೆದಾಡಿದ್ದೆ. ಆದರೆ, ಯಾರೂ ಅವಕಾಶ ನೀಡಲಿಲ್ಲ. ಕೊನೆಗೆ ಸಿದ್ದಗಂಗಾ ಶಾಲೆಯ ಮುಖ್ಯಸ್ಥೆ ಜಸ್ಟಿನ್ ಡಿಸೌಜ ಅವರು ಶಾಲೆಗೆ ಪ್ರವೇಶ ನೀಡಿದರು. ಮೊದಲು ಮಗಳಿಗೆ ಕಣ್ಣಿಲ್ಲ ಎಂದು ನೋವಿನ ಕಣ್ಣೀರು ಬರುತ್ತಿದ್ದು, ಈಗ ಹೆಮ್ಮೆಯಿಂದ ಕಣ್ಣೀರು ಬರುತ್ತಿದೆ ಎಂದು ಯುಕ್ತಿ ತಾಯಿ ಕೆ.ಎಸ್. ಅನಿತಾ ಹೇಳಿದ್ದಾರೆ. ಯುಕ್ತಿ ತಂದೆ ಎಸ್. ಪ್ರಭಾಕರ್ ಅವರು ಗಾರ್ಮೆಂಟ್ಸ್ ಘಟಕದಲ್ಲಿ ಕೆಲಸ ಮಾಡುತ್ತಿದ್ದರೆ, ತಾಯಿ ಅನಿತಾ ಗೃಹಿಣಿಯಾಗಿದ್ದಾರೆ.

ಯುಕ್ತಿ ಶಾಲೆಗೆ ಸೇರಲು ಬಂದಾಗ ಅವರ ಆತ್ಮವಿಶ್ವಾಸ ನೋಡಿ ಮೆಚ್ಚುಗೆಯಾಯಿತು. ಸಾಮಾನ್ಯ ವಿದ್ಯಾರ್ಥಿಯಂತೆ ಕಲಿಯಲು ಲ್ಯಾಪ್ ಟಾಪ್ ಒಂದನ್ನು ಆಡಳಿತ ಮಂಡಳಿಯಿಂದ ಕೊಡಿಸಿದ್ದೆವು. ಇದು ಯುಕ್ತಿ ಕಲಿಕೆಗೆ ನೆರವಾಯಿತು ಎಂದು ಜಸ್ಟಿನ್ ಡಿಸೌಜ ಹೇಳಿದ್ದಾರೆ.

ಸಿದ್ದಗಂಗಾ ಶಾಲೆಯ ದಿವ್ಯಾಂಗರಾದ ವಿದ್ಯಾರ್ಥಿ ಗೋವರ್ಧನ ನಾಯ್ಕ ಅವರು 372 ಅಂಕ ಗಳಿಸಿದ್ದಾರೆ. ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ಅಂಕಗಳನ್ನು ಉತ್ತಮಪಡಿಸಿಕೊಳ್ಳಲು ಇನ್ನೂ ಎರಡು ಅವಕಾಶಗಳಿರುವುದರಿಂದ, ಅದನ್ನು ಬಳಸಿಕೊಂಡು ಇನ್ನಷ್ಟು ಅಂಕ ಗಳಿಸುವ ಪ್ರಯತ್ನ ನಡೆಸುವುದಾಗಿ ಗೋವರ್ಧನ ನಾಯ್ಕ ತಿಳಿಸಿದ್ದಾರೆ.

# ಕನ್ಯಕಾಪರಮೇಶ್ವರಿ ದೇವಿಗೆ ಇಂದು ವಿಶೇಷ ಪೂಜೆ, ಹೋಮ



ದಾವಣಗೆರೆಯಶ್ರೀ ಕನ್ಯಕಾ ಪರಮೇಶ್ವರಿ ದೇವಸ್ಥಾನದ ಆವರಣದಲ್ಲಿ ಅಕ್ಷಯ ತದಿಗೆ ಮಿತಿಯಲ್ಲಿ ಇಂದು ವಾಸವಿ ಜಯಂತಿ ಪೂಜೆ, ಅಮ್ಮನವರಿಗೆ ಅಲಂಕಾರ ಸೇವೆ ಮತ್ತು ಪ್ರಸಾದ ವಿನಿಯೋಗವಿರುತ್ತದೆ.

ಬೆಳಿಗ್ಗೆ 10ರಿಂದ ಅಮ್ಮನವರಿಗೆ ವಿಶೇಷ ಪೂಜೆ, ಗಣ ಹೋಮ, ನವಗ್ರಹ ಹೋಮ, ಶ್ರೀ ಕನ್ಯಾಕಮಪರಮೇಶ್ವರಿ ಹೋಮ ಮತ್ತು ಸಂಜೆ 4ರಿಂದ ವಾಸವಿ ಭಜನಾ ಮಂಡಳಿಯಿಂದ ವಾಸವಿ ಕುಂಕುಮಾರ್ಚನೆ ಮತ್ತು ಶ್ರೀ ಶಂಕರ್ ಭಗವತ್ಪಾದ ವಿರಚಿತ ಕಲ್ಯಾಣ ವೃಷ್ಠಿ ಸ್ತವ: ಪಠನೆ. ಹಾಗೂ ಸಂಜೆ 6.30ರಿಂದ ವಾಸವಿ ಯುವಜನ ಸಂಘ ಇವರಿಂದ 'ವಾಸವಿ ಪುಷ್ಪಾಭಿಷೇಕಂ' ಹಾಡುಗಳೊಂದಿಗೆ ದೇವಿಗೆ ಪುಷ್ಪಾರ್ಚನೆ ನಡೆಯಲಿದೆ ಎಂದು ಶ್ರೀ ಕನ್ಯಕಾಪರಮೇಶ್ವರಿ ದೇವಸ್ಥಾನ ಸಂಘದ ಅಧ್ಯಕ್ಷ ಆರ್.ಎಲ್. ಪ್ರಭಾಕರ್, ಕಾರ್ಯದರ್ಶಿ ಜೆ. ರವಿಂದ್ರ ಗುಪ್ತ ತಿಳಿಸಿದ್ದಾರೆ.

# ಮಲೇಬೆನ್ನೂರು : ಇಂದು ಆಂಜನೇಯ ಸ್ವಾಮಿ ರಥ, ಸಾಮೂಹಿಕ ವಿವಾಹ

ಮಲೇಬೆನ್ನೂರು : ಬಸವ ಜಯಂತಿ ಅಂಗವಾಗಿ ಇಂದು ಸ್ಥಳೀಯ ಆಂಜನೇಯ ಸ್ವಾಮಿ ರಥೋತ್ಸವ ಹಾಗೂ 18ನೇ ವರ್ಷದ ಸಾಮೂಹಿಕ ವಿವಾಹ ಕಾರ್ಯಕ್ರಮ ಏರ್ಪಡಿಸಲಾಗಿದೆ.

ವಿವಿಧ ಧಾರ್ಮಿಕ ಕಾರ್ಯಕ್ರಮಗಳು ಆರಂಭವಾಗಿದ್ದು, ಗಣಪತಿ ಪೂಜೆ, ಕಂಕಣ ಧಾರಣೆ, ಮನರಂಜನಾ ಕಾರ್ಯಕ್ರಮ ಜರುಗಲಿದೆ.

ಇಂದು ಸಾಮೂಹಿಕ ವಿವಾಹ ಸಮಾರಂಭದಲ್ಲಿ ರಟ್ಟಿಹಳ್ಳಿ ಕಬ್ಬಿಣಕಂಥಿ ಮಠದ ಶ್ರೀ ಶಿವಲಿಂಗ ಶಿವಾಚಾರ್ಯ ಸ್ವಾಮೀಜಿ, ಚಿತ್ರದುರ್ಗ ಕುಂಬಾರ ಪೀಠದ ಬಸವಮೂರ್ತಿ ಕುಂಬಾರ ಗುಂಡಯ್ಯ ಸ್ವಾಮೀಜಿ ದಿವ್ಯಸಾನ್ನಿಧ್ಯ ವಹಿಸುವರು.

ಜಿ.ಎಂ. ಸಿದ್ದೇಶ್ವರ, ಸಚಿವ ಎಸ್.ಎಸ್. ಮಲ್ಲಿಕಾರ್ಜುನ್, ಶಾಸಕ ಬಿ.ಪಿ. ಹರೀಶ್, ಮಾಜಿ ಶಾಸಕಾರದ ಶಿವಶಂಕರ್, ರಾಮಪ್ಪ ಮತ್ತಿತರರು ಭಾಗವಹಿಸುವರು.

# ದೈವಜ್ಞ ಸಮಾಜದ ಮಕ್ಕಳಿಗೆ ಶಾರದಾ ಪುರಸ್ಕಾರಕ್ಕೆ ಆಹ್ವಾನ

ದಾವಣಗೆರೆ, ಮೇ 9 - ಪ್ರೇಮಾ ಅರುಣಾಚಲ ಎನ್. ರೇವಣಕರ್ ಪ್ರತಿಷ್ಠಾನದ ವತಿಯಿಂದ 2023-24ನೇ ಸಾಲಿನ 10ನೇ ತರಗತಿ ಪರೀಕ್ಷೆಯಲ್ಲಿ ಶೇ.85ರಷ್ಟು ಫಲಿತಾಂಶ ಪಡೆದ ದೈವಜ್ಞ ಸಮಾಜದ ಮಕ್ಕಳಿಗೆ 'ಶಾರದಾ ಪುರಸ್ಕಾರ' ರಾಜ್ಯ ಪ್ರಶಸ್ತಿ ನೀಡಲಾಗುತ್ತಿದೆ ಎಂದು ಸಂಸ್ಥಾಪಕ ಡಾ. ನಲ್ಲೂರು ಅರುಣಾಚಲ ಎನ್. ರೇವಣಕರ್ ತಿಳಿಸಿದ್ದಾರೆ.

ಜೂ.16 ರಂದು ಗೌರಮ್ಮ ನರಹರಿ ಶೇಟ್ ಸಭಾಂಗಣದಲ್ಲಿ ಖ್ಯಾತ ಹಿರಿಯ ಸಾಹಿತ್ಯ ದಿಗ್ಗಜರಿಂದ ಸನ್ಮಾನ ಕಾರ್ಯ ನಡೆಯಲಿದೆ. ಹೆಚ್ಚಿನ ಮಾಹಿತಿಗಾಗಿ 9341969084, 8147263552 ಸಂಪರ್ಕಿಸುವಂತೆ ಪ್ರಕಟಣೆ ತಿಳಿಸಿದೆ.

# ಅಂತರ್ ಜಿಲ್ಲಾ ಕಳ್ಳನ ಬಂಧನ

ದಾವಣಗೆರೆ, ಮೇ 9- ಜಗಳೂರು ತಾಲ್ಲೂಕಿನ ಪಲ್ಲಾಗಟ್ಟೆ ಗ್ರಾಮದಲ್ಲಿ ಬಂಗಾರ, ಬೆಳ್ಳಿ, ಹಣ ಕಳ್ಳತನ ಮಾಡುತ್ತಿದ್ದ 4 ಜನ ಕಳ್ಳರ ಪೈಕಿ ಒಬ್ಬನನ್ನು ಬಿಳಿಚೋಡು ಪೊಲೀಸಲು ಬಂಧಿಸಿದ್ದಾರೆ.

ಬಂಧಿತನಿಂದ 2,38,472ರೂ. ಮೌಲ್ಯದ 45ಗ್ರಾಂ. 860 ಮಿಲಿ ತೂಕದ ಬಂಗಾರದ ವಡವೆ, 7,554ರೂ. ಮೌಲ್ಯದ 109 ಗ್ರಾಂ. ಬೆಳ್ಳಿ ವಡವೆ ಹಾಗೂ ಕೃತ್ಯಕ್ಕೆ ಉಪಯೋಗಿಸಿದ ಮೋಟಾರ್ ಬೈಕ್ ಹಾಗೂ ಆಕ್ಸೆಲ್ ಬ್ಲೇಡ್ ವಶಪಡಿಸಿಕೊಂಡಿದ್ದಾರೆ.

ಹೆಚ್ಚುವರಿ ಪೊಲೀಸ್ ಅಧೀಕ್ಷಕ ವಿಜಯ್ ಕುಮಾರ್ ಎಂ ಸಂತೋಷ್, ಪೊಲೀಸ್ ಉಪಾಧೀಕ್ಷಕ ಪ್ರಶಾಂತ್ ಸಿದ್ಧನಗೌಡರ್ ಇವರ ಮಾರ್ಗದರ್ಶನದಲ್ಲಿ ಪೊಲೀಸ್ ನಿರೀಕ್ಷಕ ಸೋಮಶೇಖರ್ ಕೆಂಚರೆಡ್ಡಿ ಹಾಗೂ ಠಾಣೆಯ ಸಿಬ್ಬಂದಿಗಳಾದ ಆರ್.ಎ. ಕೃಷ್ಣಮೂರ್ತಿ, ಪಿ. ತಿಪ್ಪೇಸ್ವಾಮಿ, ಎಚ್. ಎಸ್. ಸ್ವಾಮಿ, ಜೆ.ಜೆ. ಬಸವರಾಜ್, ರಾಜು ಕೊಡದರ, ಭೋವಿ ಹನುಮಂತಪ್ಪ, ಸಿದ್ಧಲಿಂಗೇಶ, ಅಶೋಕ್, ಡಿ. ಇಸ್ಮಾಯಿಲ್ ಕಾರ್ಯಾಚರಣೆಯಲ್ಲಿ ಯಶಸ್ವಿಯಾಗಿದ್ದಾರೆ.

# ಅತ್ಯಾಚಾರ ಪ್ರಕರಣ: 20 ವರ್ಷ ಜೈಲು ಶಿಕ್ಷೆ, 37 ಸಾವಿರ ದಂಡ

ದಾವಣಗೆರೆ, ಮೇ 9- ಅಪ್ರಾಪ್ತ ಬಾಲಕಿ ಮೇಲೆ ಅತ್ಯಾಚಾರ ಎಸಗಿದ ಆರೋಪದ ಹಿನ್ನೆಲೆಯಲ್ಲಿ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ಎಫ್.ಟಿ.ಎಸ್.ಸಿ ನ್ಯಾಯಾಲಯವು ಆರೋಪಿಗೆ 20 ವರ್ಷ ಕಾರಾಗೃಹ ಶಿಕ್ಷೆ ಮತ್ತು 37 ಸಾವಿರ ರೂ. ದಂಡ ವಿಧಿಸಿದೆ. ಹೊನ್ನಾಳಿ ತಾಲ್ಲೂಕಿನ ಸೊರಟೂರು ಗ್ರಾಮದ ಮಹೇಶ್ವರಪ್ಪ (34), ಶಿಕ್ಷೆಗೆ ಗುರಿಯಾದ ವ್ಯಕ್ತಿ.

10-11-2021ರಲ್ಲಿ ಈ ಪ್ರಕರಣ ನಡೆದಿದ್ದು, ಸರ್ಕಾರಿ ಶಾಲೆಯಲ್ಲಿ 4ನೇ ತರಗತಿ ಓದುತ್ತಿದ್ದ ಬಾಲಕಿಗೆ, ಆರೋಪಿ ಮಹೇಶ್ವರಪ್ಪ ಚಾಕು ತೋರಿಸಿ ಅತ್ಯಾಚಾರ ಎಸಗಿದ ಪ್ರಕರಣ ಕುರಿತು ಸಂತ್ರಸ್ತೆಯ ತಂದೆ ಹೊನ್ನಾಳಿ ಪೊಲೀಸ್ ಠಾಣೆಗೆ ದೂರು ನೀಡಿದ್ದರು.

ತನಿಖಾಧಿಕಾರಿ ಟಿ.ವಿ. ದೇವರಾಜ್ ದೋಷಾರೋಪಣಾ ಪಟ್ಟಿ ಸಲ್ಲಿಸಿದ್ದರು. ನ್ಯಾಯಾಧೀಶ ಎನ್. ಶ್ರೀಪಾದ್ ಆರೋಪಿಗೆ ಶಿಕ್ಷೆ ವಿಧಿಸಿ ಆದೇಶಿಸಿದ್ದಾರೆ. ಸರ್ಕಾರಿ ವಕೀಲರಾದ ಸುನಂದಾ ಮಡಿವಾಳರ್ ಪಿರ್ಯಾದಿ ಪರ ನ್ಯಾಯ ಮಂಡಿಸಿದರು.

# ಶ್ರೀ ಸೋಮೇಶ್ವರ ಶಾಲೆಗೆ ಶೇ. 100 ಫಲಿತಾಂಶ



ದಾವಣಗೆರೆ, ಮೇ 9- ನಗರದ ನಿಟುವಳ್ಳಿ ಮುಖ್ಯರಸ್ತೆಯಲ್ಲಿರುವ ಶ್ರೀ ಸೋಮೇಶ್ವರ ಶಾಲೆಗೆ ಶೇ. 100 ಫಲಿತಾಂಶ ಲಭಿಸಿದೆ. ಪರೀಕ್ಷೆಗೆ ಹಾಜರಾದ 74 ವಿದ್ಯಾರ್ಥಿಗಳಲ್ಲಿ 30 ವಿದ್ಯಾರ್ಥಿಗಳು ಅತ್ಯುನ್ನತ ಶ್ರೇಣಿ, 43 ವಿದ್ಯಾರ್ಥಿಗಳು ಉತ್ತಮ ಶ್ರೇಣಿ, ಓರ್ವ ವಿದ್ಯಾರ್ಥಿ ದ್ವಿತೀಯ ಶ್ರೇಣಿಯಲ್ಲಿ ಉತ್ತೀರ್ಣರಾಗಿರುತ್ತಾರೆ. ಕು. ವೈ.ಎಂ. ಸೃಜನ 612 ಅಂಕದೊಂದಿಗೆ ಜಿಲ್ಲೆಗೆ 5ನೇ ಸ್ಥಾನ ಪಡೆದಿರುತ್ತಾಳೆ. ರಮ್ಯಶ್ರೀ ಎಸ್.ಎಸ್. (599 - 95.84%), ಸಹನ ಕೆ.ಎಂ. (598 - 95.68%), ಸಿಂಚನ ಆರ್. (590 - 94.40%), ಯುವಶ್ರೀ ಸಿ.ಎಸ್.(590 - 94.40%) ಉತ್ತಮ ಅಂಕ ಪಡೆದಿರುತ್ತಾರೆ.

ಉತ್ತಮ ಫಲಿತಾಂಶಕ್ಕೆ ಶ್ರಮಿಸಿದ, ಸಹಕರಿಸಿದ ಎಲ್ಲಾ ವಿದ್ಯಾರ್ಥಿಗಳಿಗೂ, ಶಿಕ್ಷಕರಿಗೂ, ಪೋಷಕರಿಗೂ ಶ್ರೀ ಸೋಮೇಶ್ವರ ಸಮೂಹ ಸಂಸ್ಥೆಗಳ ಸಂಸ್ಥಾಪಕ ಕೆ.ಎಂ. ಸುರೇಶ್ ಅಭಿನಂದಿಸಿದ್ದಾರೆ.

# 4 ವರ್ಷದ ಪದವಿ ಹಿಂಪಡೆದ ಸರ್ಕಾರ; ಹೋರಾಟಕ್ಕೆ ಜಯ : ಎಐಡಿಎಸ್‌ಓ

ದಾವಣಗೆರೆ, ಮೇ 9- ನಾಲ್ಕು ವರ್ಷದ ಪದವಿಯನ್ನು ಹಿಂಪಡೆಯುವ ಸರ್ಕಾರದ ನಿರ್ಧಾರವನ್ನು ಎಐಡಿಎಸ್‌ಓ ಸ್ವಾಗತಿಸಿದೆ.

ವಿದ್ಯಾರ್ಥಿಗಳು, ಶಿಕ್ಷಕರು ಹಾಗೂ ಶಿಕ್ಷಣ ತಜ್ಞರಿಂದ ವ್ಯಕ್ತವಾದ ಅಪಾರ ಪ್ರತಿರೋಧದ ಪ್ರತಿಫಲವಾಗಿ ಸರ್ಕಾರವು ಈ ನಿರ್ಧಾರವನ್ನು ತೆಗೆದುಕೊಂಡಿದೆ. ಈ ಸಂಬಂಧ ರಾಜ್ಯವ್ಯಾಪಿ ಎಐಡಿಎಸ್‌ಓ ನಡೆಸಿದ ಸಮೀಕ್ಷೆಯಲ್ಲಿ ಸಾವಿರಾರು ವಿದ್ಯಾರ್ಥಿಗಳು 4 ವರ್ಷದ ಪದವಿಯನ್ನು ವಿರೋಧಿಸಿದ್ದರು. ಇದು ರಾಜ್ಯದಲ್ಲಿ ನಡೆದ ಹೋರಾಟಕ್ಕೆ ಸಂದಿರುವ ಐತಿಹಾಸಿಕ ಜಯವಾಗಿದೆ ಎಂದು ರಾಜ್ಯ ಕಾರ್ಯದರ್ಶಿ ಅಜಯ್ ತಿಳಿಸಿದ್ದಾರೆ.

ಹಿಂದಿನ ಬಿಜೆಪಿ ಸರ್ಕಾರವು, ಯಾವುದೇ ಸಮಾಲೋಚನೆ ನಡೆಸದೆ, ಅತ್ಯಂತ ಅಪ್ರಜಾತಾಂತ್ರಿಕವಾಗಿ 4 ವರ್ಷದ ಪದವಿಯನ್ನು ಹೇರಿಕೆ ಮಾಡಿತ್ತು. ಈ ಹೇರಿಕೆಯನ್ನು ಹಿಮ್ಮೆಟ್ಟಿಸಿರುವುದು ವಿದ್ಯಾರ್ಥಿ ಚಳುವಳಿಯ ಜಯವಾಗಿದೆ. ಇದಕ್ಕಾಗಿ ಐಕ್ಯ ಹೋರಾಟ ನಡೆಸಿದ ರಾಜ್ಯದ ವಿದ್ಯಾರ್ಥಿ ಸಮೂಹವನ್ನು ಎಐಡಿಎಸ್‌ಓ ಅಭಿನಂದಿಸುತ್ತದೆ ಎಂದು ಎಐಡಿಎಸ್‌ಓ ಜಿಲ್ಲಾ ಕಾರ್ಯದರ್ಶಿ ಸುಮನ್ ಟಿ. ಎಸ್. ತಿಳಿಸಿದ್ದಾರೆ.

# ಗೋಣಿವಾಡ : ಸೋಮೇಶ್ವರ ವಸತಿಯುತ ವಿದ್ಯಾಲಯಕ್ಕೆ ಶಾಲೆಗೆ ಶೇ. 100 ಫಲಿತಾಂಶ



ದಾವಣಗೆರೆ, ಮೇ 9- ಚನ್ನಗಿರಿ ರಸ್ತೆಯ ಗೋಣಿವಾಡ ಕ್ರಾಸ್‌ನಲ್ಲಿರುವ ಶ್ರೀ ಸೋಮೇಶ್ವರ ವಸತಿಯುತ ವಿದ್ಯಾಲಯಕ್ಕೆ ಈ ಬಾರಿಯ ಎಸ್ಸೆಸ್ಸೆಲ್ಸಿ ಫಲಿತಾಂಶ ಶೇ. 100 ಲಭಿಸಿದೆ.

ಶ್ರೀ ಸೋಮೇಶ್ವರ ವಸತಿಯುತ ವಿದ್ಯಾಲಯಕ್ಕೆ ಗ್ರಾಮಾಂತರ ಭಾಗದಲ್ಲಿ ಸತತ 10ನೇ ವರ್ಷವೂ ಶೇ. 100 ಫಲಿತಾಂಶ ಪಡೆದ ಹೆಗ್ಗಳಿಕೆ ಇದೆ.

ಜಿಲ್ಲೆಯ ಆಲೂರು ಗ್ರಾಮದ ರವಿ ಹಾಗೂ ಪದ್ಮ ಎಂಬ ಕೃಷಿಕ ದಂಪತಿಯ ಮಗಳು ಲಿಖಿತಾ ಶೇ. 98.24 ಅಂಕ ಗಳಿಸುವ ಮೂಲಕ ಗ್ರಾಮಾಂತರ ವಿಭಾಗದಲ್ಲಿ ಪ್ರಥಮ ಸ್ಥಾನ ಪಡೆದಿದ್ದಾರೆ.

ಒಟ್ಟು 45 ವಿದ್ಯಾರ್ಥಿಗಳಲ್ಲಿ 28 ವಿದ್ಯಾರ್ಥಿಗಳು ಡಿಸ್ಟಿಂಕ್ಷನ್, 17 ವಿದ್ಯಾರ್ಥಿಗಳು ಉನ್ನತ ಶ್ರೇಣಿಯಲ್ಲಿ ಉತ್ತೀರ್ಣರಾಗಿದ್ದು, ಈ ಸಾಧನೆಗೆ ಸಹಕರಿಸಿದ ಶಾಲೆಯ ಎಲ್ಲರನ್ನೂ ಶ್ರೀ ಸೋಮೇಶ್ವರ ಸಮೂಹ ಸಂಸ್ಥೆಗಳ ಸಂಸ್ಥಾಪಕರಾದ ಕೆ.ಎಂ. ಸುರೇಶ್ ಅಭಿನಂದಿಸಿದ್ದಾರೆ.

# ನಗರದಲ್ಲಿ ಚೆಸ್ ಚಾಂಪಿಯನ್ ಶಿಪ್ ಹೆಸರು ನೋಂದಾಯಿಸಲು ಕಡೆಯ ದಿನ

ನ್ಯೂ ದಾವಣಗೆರೆ ಡಿಸ್ಟ್ರಿಕ್ಟ್ ಚೆಸ್ ಅಸೋಸಿಯೇಷನ್ ವತಿಯಿಂದ ಜಿಲ್ಲಾ ಚೆಸ್ ಚಾಂಪಿಯನ್‌ಶಿಪ್ ದಿನಾಂಕ 12 ರಂದು ರೋಟರಿ ಬಾಲ ಭವನದಲ್ಲಿ ನಡೆಯಲಿದೆ. ಬಾಲಕ ಮತ್ತು ಬಾಲಕಿಯರ ಪ್ರತ್ಯೇಕ ವಿಭಾಗದಲ್ಲಿ ಸ್ಪರ್ಧೆಗಳು ನಡೆಯಲಿದ್ದು, ಹೆಸರು ನೋಂದಾಯಿಸಬಹುದು. ಇಂದು ಕೊನೆಯ ದಿನಾಂಕವಾಗಿರುತ್ತದೆ.

# ಎಸ್ಸೆಸ್ಸೆಲ್ಸಿ : ಜಯನಗರ ವಿದ್ಯಾನಿಕೇತನ ಪಬ್ಲಿಕ್ ಸ್ಕೂಲ್‌ಗೆ ಶೇ.100 ಫಲಿತಾಂಶ

ದಾವಣಗೆರೆ, ಮೇ 9- ಇಲ್ಲಿನ ಜಯನಗರ ವಿದ್ಯಾನಿಕೇತನ ಪಬ್ಲಿಕ್ ಸ್ಕೂಲ್‌ಗೆ ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ ಶೇ. 100 ಫಲಿತಾಂಶ ಲಭಿಸಿದೆ. ಉತ್ತೀರ್ಣರಾದ ವಿದ್ಯಾರ್ಥಿಗಳನ್ನು ಹಾಗೂ ಶಾಲೆಯ ಶಿಕ್ಷಕರನ್ನು ಸಂಸ್ಥಾಪಕ ರುದ್ರಮುನಿ ಹಾಗೂ ಆಡಳಿತಾಧಿಕಾರಿ ಕೆ.ಬಿ. ಆನಂದ ಅಭಿನಂದಿಸಿದ್ದಾರೆ.

# ಎಸ್ಸೆಸ್ಸೆಲ್ಸಿ : ನಂದಗೋಕುಲ ಆಂಗ್ಲ ಮಾಧ್ಯಮ ಶಾಲೆಗೆ ಶೇ.100 ಫಲಿತಾಂಶ

ದಾವಣಗೆರೆ, ಮೇ 9- ದೇವರಾಜ ಅರಸು ಬಡಾವಣೆ 'ಸಿ' ಬ್ಲಾಕ್‌ನ 6ನೇ ಕ್ರಾಸ್‌ನಲ್ಲಿರುನ ನಂದಗೋಕುಲ ಆಂಗ್ಲ ಮಾಧ್ಯಮ ಶಾಲೆಯ 2023-24ನೇ ಸಾಲಿನ ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ ಶೇ. 100 ಫಲಿತಾಂಶ ಲಭಿಸಿದೆ. 42 ವಿದ್ಯಾರ್ಥಿಗಳಲ್ಲಿ 12 ವಿದ್ಯಾರ್ಥಿಗಳು ಡಿಸ್ಟಿಂಕ್ಷನ್, 12 ಪ್ರಥಮ ದರ್ಜೆ, 18 ದ್ವಿತೀಯ ದರ್ಜೆಯಲ್ಲಿ ತೇರ್ಗಡೆ ಹೊಂದಿದ್ದejz. ಈ ವಿದ್ಯಾರ್ಥಿಗಳಿಗೆ ಶಾಲಾ ಆಡಳಿತ ಮಂಡಳಿ, ಮುಖ್ಯೋಪಾಧ್ಯಾಯರು, ಶಿಕ್ಷಕ ವೃಂದದವರು, ಕಾರ್ಯನಿರ್ವಾಹಕರು ಅಭಿನಂದನೆ ಸಲ್ಲಿಸಿದ್ದಾರೆ.

# ಜಿಲ್ಲಾಡಳಿತ ಭವನದಲ್ಲಿ ನಾಡಿದ್ದು ಶಂಕರಾಚಾರ್ಯ ಜಯಂತಿ

ದಾವಣಗೆರೆ, ಮೇ 9-ಜಿಲ್ಲಾಡಳಿತ ವತಿಯಿಂದ ದಿನಾಂಕ 12 ರಂದು ಬೆಳಿಗ್ಗೆ 11 ಗಂಟೆಗೆ ಜಿಲ್ಲಾಡಳಿತ ಭವನದಲ್ಲಿ ಶ್ರೀ ಶಂಕರಾಚಾರ್ಯ ಜಯಂತಿಯನ್ನು ಚುನಾವಣಾ ನೀತಿ ಸಂಹಿತೆ ಹಿನ್ನೆಲೆಯಲ್ಲಿ ಸರಳ ಹಾಗೂ ಸಾಂಕೇತಿಕವಾಗಿ ಆಚರಿಸಲಾಗುವುದು ಎಂದು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ಮಂಗಳನಾಯ್ಕ್ ತಿಳಿಸಿದ್ದಾರೆ.

# ಹಳೇ ವಿದ್ಯಾರ್ಥಿಗಳಿಂದ ಗುರು ವಂದನೆ




ದಾವಣಗೆರೆ, ಮೇ 9- ಇಲ್ಲಿನ ಎಂಇಎಸ್ ಪ್ರೌಢಶಾಲೆಯ 1994-95ನೇ ಸಾಲಿನ ವಿದ್ಯಾರ್ಥಿಗಳಿಂದ ಇತ್ತೀಚೆಗೆ ಶಾಮನೂರಿನ ಬಸವರಾಜ್ ರೆಸಾರ್ಟ್ ತೋಟದ ಮನೆಯಲ್ಲಿ ಗುರುವಂದನಾ ಕಾರ್ಯಕ್ರಮ ನಡೆಯಿತು.

ಈ ವೇಳೆ ಡಾ.ಕೆ. ಬಸವರಾಜಪ್ಪ ಹಳೇ ವಿದ್ಯಾರ್ಥಿಗಳನ್ನು ಉದ್ದೇಶಿಸಿ ಮಾತನಾಡಿ, ಗುರುಗಳ ಬಗ್ಗೆ ನಿಮ್ಮಲ್ಲಿರುವ ಅಪಾರ ಗೌರವ, ವಿನಯತೆ, ಭಯ-ಭಕ್ತಿಯನ್ನು ಕಂಡು ನನಗೆ ಸಂತೋಷವಾಯಿತು ಎಂದರು.

ಶಿಕ್ಷಕರಾದ ಟಿ.ಎಸ್. ನವೀನ್‌ಕುಮಾರ್, ಸವಿತಾ ಮತ್ತು ವಿದ್ಯಾರ್ಥಿಗಳಾದ ಮಲ್ಲಿಕಾರ್ಜುನ್, ವಿನುತಾ, ಬಸವರಾಜ್, ಧನ್ಯಕುಮಾರ್, ಮಂಜುಳಾ, ಸಾವಿತ್ರ, ಅನಿತಾ, ಆದರ್ಶ್, ಪ್ರವೀಣ್, ಹನುಮಂತಪ್ಪ, ಕರಿಬಸಪ್ಪ, ವಿಜಯ್‌ಕುಮಾರ್, ಗೋಪಿಚಂದ್, ಕಿರಣ್, ಕರಿಬಸಪ್ಪ, ರವಿಕಾಂತ, ಸುರೇಶ್, ರಾಜು ಇದ್ದರು.

# ದಾವಣಗೆರೆ ಬಿಟ್ಟು ನಾನು ಎಲ್ಲೂ ಹೋಗಲ್ಲ, ಇಲ್ಲೇ ಇರುತ್ತೇನೆ : ವಿನಯ್ ಕುಮಾರ್

ಹರಪನಹಳ್ಳಿ, ಮೇ 9 - ಲೋಕಸಭೆ ಚುನಾವಣೆ ಬಳಿಕ ನಾನು ಹೋಗಿಬಿಡುತ್ತೇನೆ ಎಂದು ಕೆಲವರು ಅಂದುಕೊಂಡಿದ್ದಾರೆ. ಆದ್ರೆ, ನಾನು ಎಲ್ಲೂ ಹೋಗಲ್ಲ. ಇಲ್ಲೇ ಇರುತ್ತೇನೆ. ಜನರೊಟ್ಟಿಗಿನ ಒಡನಾಟ ಮುಂದುವರಿಸುತ್ತೇನೆ ಎಂದು ಲೋಕಸಭಾ ಕ್ಷೇತ್ರದ ಪಕ್ಷೇತರ ಅಭ್ಯರ್ಥಿ ಜಿ. ಬಿ. ವಿನಯ್ ಕುಮಾರ್ ತಿಳಿಸಿದರು.



ಇಲ್ಲಿಗೆ ಸಮೀಪದ ಶೃಂಗಾರ ತೋಟ ಗ್ರಾಮದಲ್ಲಿ ಹೊಸಪೇಟೆ ಅತ್ಯಾಧುನಿಕ ಕಣ್ಣಿನ ಆಸ್ಪತ್ರೆ ವತಿಯಿಂದ ಹಮ್ಮಿಕೊಂಡಿದ್ದ ನೇತ್ರ ತಪಾಸಣಾ ಶಿಬಿರವನ್ನು ಸಂಚಾರಿ ವಾಹನದಲ್ಲಿ ಟೇಪ್ ಕಟ್ ಮಾಡುವ ಮೂಲಕ ಉದ್ಘಾಟನೆ ನೆರವೇರಿಸಿ ಅವರು ಮಾತನಾಡಿದರು.

ಜಿಲ್ಲೆಯ ಎಂಟು ವಿಧಾನಸಭಾ ಕ್ಷೇತ್ರಗಳಲ್ಲಿ ವ್ಯಾಪಕವಾಗಿ ಪ್ರವಾಸ ಮಾಡುತ್ತೇನೆ. ಪಾದಯಾತ್ರೆ, ಕಾಲ್ನಡಿಗೆ ವೇಳೆ ಹೋಗಲು ಸಾಧ್ಯವಾಗದ ಹಳ್ಳಿಗಳಿಗೆ ಮತ್ತೆ ಹೋಗುತ್ತೇನೆ. ಇಲ್ಲಿನ ಜನರ ಜೊತೆ ಸಂವಾದ ನಡೆಸುತ್ತೇನೆ. ಸಮಸ್ಯೆಗಳನ್ನು ಅರಿಯುವ ಕೆಲಸ ಮಾಡುತ್ತೇನೆ ಎಂದು ಹೇಳಿದರು.

ಚುನಾವಣಾ ಫಲಿತಾಂಶ ಏನೇ ಆಗಲಿ. ಸೋಲು ಗೆಲುವು ಸಹಜ. ಆದ್ರೆ, ಪ್ರತಿಯೊಂದು ಕಡೆ ಮಾತನಾಡುವ ರೀತಿಯಲ್ಲಿ ಕೆಲಸ ಮಾಡಿದ್ದೇವೆ. ಸ್ವಾಭಿಮಾನಿಯಾಗಿ ಕಣಕ್ಕಿಳಿದು ಲಕ್ಷಾಂತರ ಜನರ ಜೊತೆ ಹೋರಾಡಿದ್ದೇನೆ. ಜನರು ಮಾತನಾಡುವ ರೀತಿಯಲ್ಲಿ ಒಳ ಹೊಡೆತ ಆಗಿದ್ದೇ ಆದರೆ ನಾನು ಗೆಲ್ಲುವುದು ಖಚಿತ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಮುಂದಿನ ರಾಜಕೀಯ ಚಟುವಟಿಕೆಗಳಿಗೆ ಚಾಲನೆ ನೀಡುತ್ತೇನೆ. ಗ್ರಾಮ ಪಂಚಾಯಿತಿ, ತಾಲ್ಲೂಕು ಪಂಚಾಯಿತಿ, ಜಿಲ್ಲಾ ಪಂಚಾಯಿತಿ, ದಾವಣಗೆರೆ ಮಹಾನಗರ ಪಾಲಿಕೆ ಸೇರಿದಂತೆ ಹಲವು ಚುನಾವಣೆಗಳು ಮುಂಬರುವ ದಿನಗಳಲ್ಲಿ ಬರಲಿದ್ದು, ಹೇಗೆ ಎದುರಿಸಬೇಕೆಂಬ ಬಗ್ಗೆ ಕಾರ್ಯತಂತ್ರ ರೂಪಿಸುತ್ತೇನೆ ಎಂದು ತಿಳಿಸಿದರು.

ಚುನಾವಣೆ ಚೆನ್ನಾಗಿಯೇ ಆಗಿದೆ. ಒಳ ಹೊಡೆತ ಇದೆ ಎಂದು ಜನರೇ ಹೇಳುತ್ತಿದ್ದರು. ಲಕ್ಷಾಂತರ ಕಾರ್ಯಕರ್ತರು ಕೈಹಿಡಿದಿದ್ದಾರೆ. ನಿಮಗೆಲ್ಲರಿಗೂ ಧನ್ಯವಾದ ಅರ್ಪಿಸುತ್ತೇನೆ. ನಿಮ್ಮ ಜೊತೆ ಸದಾ ಇರುತ್ತೇನೆ ಎಂದು ಹೇಳಿದರು.


ಮೆ॥ ಆರ್.ಹನುಮಂತಪ್ಪ ಅಂಡ್ ಸನ್
ಹನುಮಂತಪ್ಪನವರ ಕಟ್ಟಡ, ಪೂನಾ-ಬೆಂಗಳೂರು ರಸ್ತೆ,
ದಾವಣಗೆರೆ - 577002. ಫೋ.: 258834, 9449828834
ಬೇಕಾಗಿದ್ದಾರೆ
ಮೇಲ್ಕಂಡ ಸಂಸ್ಥೆಯಲ್ಲಿ ಗೋಡೌನ್‌ಗಳ ಸೂಪರ್ ವೈಸರ್ ಕೆಲಸಕ್ಕೆ ಬೇಕಾಗಿದ್ದಾರೆ.
PUC/JOC/Diploma ಹೊಂದಿದವರಿಗೆ ಮೊದಲ ಆದ್ಯತೆ
ಆಸಕ್ತರು ಕೂಡಲೇ ಸಂಪರ್ಕಿಸಿ



ಬಸವ ಜಯಂತಿ ಶುಭಾಶಯಗಳು
ನಗರದ ಸರ್ವ ನಾಗರಿಕರಿಗೂ, ಆತ್ಮೀಯ ಬಂಧು-ಮಿತ್ರರಿಗೂ ವಿಶ್ವಗುರು ಶ್ರೀ ಜಗಜ್ಯೋತಿ ಬಸವೇಶ್ವರ ಜಯಂತಿ ಶುಭಾಶಯಗಳು.
ಪರಶುರಾಮಪ್ಪ ಪೂಜಾರ್, ಜಿಲ್ಲಾ ಪತ್ರ ಬರಹಗಾರರು,
ಉಪ ನೋಂದಣಿ ಕಛೇರಿ ಆವರಣ, ದಾವಣಗೆರೆ. ಮೊ. : 89703 96509

ಶ್ರೀ ಶಿವಶರಣೆ ಹೇಮರಡ್ಡಿ ಮಲ್ಲಮ್ಮ 601ನೇ ಜಯಂತೋತ್ಸವದ ಶುಭಾಶಯಗಳು
ಜಿ.ಐ. (ಗ್ಲೆಸೆಮಿಕ್ ಇಂಡ್ಯಾಕ್ಸ್) ಅಕ್ಕಿ
ಹಿಮಾಲಯ ಪರ್ವತ ಶ್ರೇಣಿಯ ನದಿಗಳ ನೀರಿನಿಂದ ಬೆಳೆದ, ಒಳ್ಳೆಯ ಗುಣಮಟ್ಟದ, ಸಕ್ಕರೆ ಕಾಯಿಲೆ ಹಾಗೂ ಇತರೆ ಕಾಯಿಲೆಗಳನ್ನು ನಿಯಂತ್ರಣದಲ್ಲಿಡಲು ಸಹಕರಿಸುತ್ತದೆ. ರಕ್ತದಲ್ಲಿ ಗ್ಲುಕೋಸ್ ಅನ್ನು ಕಡಿಮೆ ಮಾಡುವುದಕ್ಕೆ ತುಂಬಾ ಪರಿಣಾಮಕಾರಿಯಾದ ಮತ್ತು ಪೌಷ್ಠಿಕವಾದ ಜಿ.ಐ.ಅಕ್ಕಿ
ಅಧ್ಯಕ್ಷರು, ಶ್ರೀ ಶಂಕರ ಪಾಟೀಲ್ ಬಿ.ಜಿ. ಮತ್ತು ನಿರ್ದೇಶಕರುಗಳು ಹಾಗೂ ಸದಸ್ಯರುಗಳು.
: ಅಕ್ಕಿ ದೊರೆಯುವ ಸ್ಥಳ :
1) ದಾವಣಗೆರೆ ಶಿವಶರಣೆ ಹೇಮರಡ್ಡಿ ಮಲ್ಲಮ್ಮ ಸೌಹಾರ್ದ ಸಹಕಾರಿ ಸಂಘ ನಿಯಮಿತ, ಕೆಇಬಿ ಕಛೇರಿ ಎದುರು, ಹದಡಿ ರಸ್ತೆ, ದಾವಣಗೆರೆ. ಮೊ : 8904939084
2) ಶ್ರೀ ಶಿವಶರಣೆ ಹೇಮರಡ್ಡಿ ಮಲ್ಲಮ್ಮ ದೇವಸ್ಥಾನ ಜೆ.ಎಚ್. ಪಟೇಲ್ ನಗರ, ದಾವಣಗೆರೆ. ಮೊ : 9980548918

ರಾಜನಹಳ್ಳಿ ಮದ್ದೂರಾಯಪ್ಪ ಜ್ಯೂಯಲರಿ ಮಾರ್ಟ್
'ದಯಾನಂದ ಬಿಲ್ಡಿಂಗ್', ಮಂಡಿಪೇಟೆ, ದಾವಣಗೆರೆ.
ಫೋ. : 08192-296550, ಮೊ. : 74835 28258
ವೈವಿಧ್ಯಮಯ ಆಭರಣಗಳ ಮೇಳ
ಪ್ರೀತಿಯ ಬಂಧುಗಳೇ,
ಶ್ರೀ ಕ್ರೋಧಿನಾಮ ಸಂವತ್ಸರದ ಅಕ್ಷಯ ತೃತೀಯ ಮತ್ತು ಬಸವ ಜಯಂತಿಯ ಶುಭಾಶಯಗಳು. ಸೂರ್ಯ ದಿವ್ಯಕಿರಣಗಳು ನಮ್ಮೆಲ್ಲರಿಗೆ ಹೊಸ ಚೇತನವನ್ನು ನೀಡಿವೆ. ಬನ್ನಿ... ಸಂಭ್ರಮಿಸೋಣ.
2024, ಮೇ ತಿಂಗಳ ದಿನಾಂಕ 8, 9 ಮತ್ತು 10 ರಂದು ನಮ್ಮ ಅಂಗಡಿಯಲ್ಲಿ ವೈವಿಧ್ಯಮಯ ಆಭರಣಗಳ ಮೇಳ ನಡೆಯಲಿದೆ. ನಿಮ್ಮವರೊಂದಿಗೆ ಬಂಧು ಆಭರಣಗಳನ್ನು ಖರೀದಿಸಿ, ವಿಶೇಷ ರಿಯಾಯಿತಿ ಹಾಗೂ ಹಲವಾರು ಆಕರ್ಷಕ ಬಹುಮಾನಗಳನ್ನು ಪಡೆಯಿರಿ.
ನಿಮ್ಮ ಆರ್.ಡಿ. ಬದ್ರಿನಾಥ್
ಮೂರು ತಲೆಮಾರುಗಳಿಂದ ನಿಮ್ಮ ಸೇವೆಯಲ್ಲಿರುವ
ರಾಜನಹಳ್ಳಿ ಮದ್ದುರಾಯಪ್ಪ ಜ್ಯೂಯಲರಿ ಮಾರ್ಟ್
ದಯಾನಂದ ಬಿಲ್ಡಿಂಗ್, ಮಂಡಿಪೇಟೆ, ದಾವಣಗೆರೆ. ಮೊ. : 74835 28258

**Admission Open**

**L.K.G. to 10th & PUC**

**PUC Science (PCMB & PCMCs) Commerce (EBACs)**

**Hostel Facility for both Boys & Girls**

With Integrated NEET, JEE & KCET Coaching from IITians






For Registration Contact :

**87927 26686, 7259900623, 8073323791**






**GENIUS PU NEET ACADEMY**
**GENIUS CENTRAL SCHOOL**
Shakthinagara Jayanagara
'C' Block, Davangere-577004.

**GENIUS TECHNO SCHOOL**
**GENIUS TECHNO PU COLLEGE**
Hirethogaleri-Kurki-577514
Next to Davangere University



# ಸ್ವರಾಜ್ ಟ್ರ್ಯಾಕ್ಟರ್ಸ್

30 YEARS
ಶ್ರೀ ರಾಘವೇಂದ್ರ ಆಟೋಮೊಬೈಲ್ಸ್

**30ನೇ ವರ್ಷದ ಈ ಶುಭ ಸಂದರ್ಭದಲ್ಲಿ**
ನಮಗೆ ಸಹಕರಿಸಿದಂತಹ
ಎಲ್ಲಾ ರೈತ ಬಾಂಧವರಿಗೂ, ಗ್ರಾಹಕರಿಗೂ, ಹಿತೈಷಿಗಳಿಗೂ ಹಾಗೂ
**ಮಹೀಂದ್ರಾ ಅಂಡ್ ಮಹೀಂದ್ರಾ ಲಿ., ಸ್ವರಾಜ್ ಡಿವಿಜನ್**
ಮತ್ತು ಎಲ್ಲಾ ಬ್ಯಾಂಕ್ ಸಿಬ್ಬಂದಿ ವರ್ಗದವರಿಗೂ
**'ಬಸವ ಜಯಂತಿ ಹಬ್ಬದ'** ಹಾರ್ದಿಕ ಶುಭಾಶಯಗಳು



**ವೀರಮಾಚನೇನಿ ರಾಘವೇಂದ್ರ ಪ್ರಸಾದ್**
ಮಾಲೀಕರು
ಮೊ : 9448275344

6 ವರ್ಷ ಅಥವಾ 6000 ಗಂಟೆಗಳ ವಾರಂಟಿಯೊಂದಿಗೆ ಸ್ವರಾಜ್ ಟ್ರ್ಯಾಕ್ಟರ್ ಖರೀದಿಸಿ*




## ಶ್ರೀ ರಾಘವೇಂದ್ರ ಆಟೋಮೊಬೈಲ್ಸ್

ಅಧಿಕೃತ ಮಾರಾಟಗಾರರು : ದಾವಣಗೆರೆ, ಜಗಳೂರು ತಾಲ್ಲೂಕುಗಳಿಗೆ

'ಸ್ವರಾಜ್' ಟ್ರ್ಯಾಕ್ಟರ್ಸ್‌ಸೇಲ್ಸ್, ಸರ್ವೀಸ್ ಮತ್ತು ಬಿಡಿ ಭಾಗಗಳು

ಜಿ.ಎಂ. ಕಾಂಪೌಂಡ್, ಪಿ.ಬಿ. ರಸ್ತೆ, ದಾವಣಗೆರೆ-577002. ಫೋನ್ : (08192) 253552, 233420

ಮ್ಯಾನೇಜರ್ : 9164735744, 9972590878

ಬ್ರಾಂಚ್ ಆಫೀಸ್ : ಪಿ.ಎಲ್.ಡಿ. ಬ್ಯಾಂಕ್ ರಸ್ತೆ, ಜಗಳೂರು. ಮೊ : 9164735744, 7022276312

ಶೇಖರ್, ದಾವಣಗೆರೆ - ಮೊ : 7022276323, 9845547215
ಹೇಮಂತ್, ದಾವಣಗೆರೆ - ಮೊ : 7022276314, 7760040407
ಮಂಜುನಾಥ್, ಜಗಳೂರು - ಮೊ : 7022276317, 9164838363

:: ಶುಭ ಕೋರುವವರು ::

**ವಿಶ್ವಚೇತನ ವಿದ್ಯಾನಿಕೇತನ ವಸತಿಯುತ ಸ್ಕೂಲ್ ಮತ್ತು ಪಿ.ಯು. ಕಾಲೇಜ್, ದಾವಣಗೆರೆ. - ಚೇತನ ಒಲಂಪಿಯಾಡ್ ಸ್ಕೂಲ್**
ಎನ್.ಎಚ್.-4, ಹದಡಿ ರೋಡ್, ದಾವಣಗೆರೆ.
ಮೊ : 9900559104/105 ಮೊ : 9900052517

**ವಿದ್ಯಾಚೇತನ ಪಿ.ಯು. ಕಾಲೇಜ್**
ಆಂಜನೇಯ ಬಡಾವಣೆ, ದಾವಣಗೆರೆ.
ಮೊ : 7019009046
ಮೊ : 7022004081
ಮೊ : 9900559101

**ಚೇತನ ಒಲಂಪಿಯಾಡ್ ಸ್ಕೂಲ್**
ಆಂಜನೇಯ ಬಡಾವಣೆ, ದಾವಣಗೆರೆ.
ಮೊ : 9844086555
ಮೊ : 9900071206



Celebrating 33 years

# ಭಾರತದ ಅತ್ಯಂತ ವಿಶ್ವಾಸಾರ್ಹ ಸೋಲಾರ್ ಬ್ರಾಂಡ್

ದಾವಣಗೆರೆ ಜಿಲ್ಲೆಯ ಸಮಸ್ತ ಗ್ರಾಹಕರಿಗೂ ಹಾಗೂ ಡೀಲರ್ಸ್‌ಗಳಿಗೂ ಬಸವಜಯಂತಿಯ ಶುಭಾಶಯಗಳು

**ದೇಶದ ಮೊದಲ ಸ್ಟಾರ್ ರೇಟಿಂಗ್ ಮತ್ತು ಐಎಸ್ಐ ಮಾರ್ಕಿರುವ, ಸರ್ಕಾರದಿಂದ ಮಾನ್ಯತೆ ಪಡೆದಿರುವ ಏಕೈಕ ಸೋಲಾರ್ ವಾಟರ್ ಹೀಟರ್**




IS:16544 CM/L:7500259884

POWER SAVINGS GUIDE — MORE STARS MORE SAVINGS

ಬುದ್ಧಿವಂತಿಕೆಯ ಆಲೋಚನೆ

**Sudarshan Saur®**

www.sudarshansaur.com

ಯಾವುದೇ ರೀತಿಯ ನೀರಿಗಾಗಿಯೂ ಸೋಲಾರ್ ವಾಟರ್ ಹೀಟರ್‌ನ ಧೀರ್ಘ ಬಾಳಿಕೆಯನ್ನು ಖಚಿತಪಡಿಸಿಕೊಳ್ಳಲು ವಿಶಿಷ್ಟ ತಂತ್ರಜ್ಞಾನದೊಂದಿಗೆ ತಯಾರಿಸಲಾಗಿದೆ.

- ಕ್ರಿಸ್ಟಲ್ ಬ್ಲ್ಯೂ ಗ್ಲಾಸ್ ಲೈನಿಂಗ್
- 20% ಹೆಚ್ಚು ಬಿಸಿ ನೀರು
- 6 ಪಟ್ಟುಹೆಚ್ಚು ದಪ್ಪವಾದ ಟ್ಯಾಂಕ್
- ಟ್ಯಾಂಕ್ ಸ್ವಚ್ಛಗೊಳಿಸುವ ಬಾಗಿಲುಗಳು
- Cyclopentane PUF insulation — Trusted PUF around the world
- ಗಡಸು ನೀರಿಗೆ ಸೂಕ್ತವಾದ ಟ್ಯಾಂಕ್
- ಶೂನ್ಯ ನಿರ್ವಹಣೆ
- 3T ಗೋಲ್ಡ್ ಸ್ಟ್ಯಾಂಡರ್ಡ್ ಟ್ಯೂಬ್
- ಹೆಚ್ಚು ಸ್ಟಾರ್. ಸಾಮರ್ಥ್ಯ. ಬಿಸಿ ನೀರು.

# 15 ವರ್ಷಗಳ ಗ್ಯಾರಂಟಿ

100 ಲೀ. ನಿಂದ 500 ಲೀ. ವರೆಗೆ

**24 ವರ್ಷಗಳ ನಿಮ್ಮ ಸೇವೆಯಲ್ಲಿ**

**ದಾವಣಗೆರೆ ಜಿಲ್ಲೆಯ ಎಲ್ಲಾ ತಾಲ್ಲೂಕುಗಳಿಗೆ ಡೀಲರ್ಸ್ ಬೇಕಾಗಿದ್ದಾರೆ**

**Available All Types of UPS Batteries and RO Water Purifers**

ನಮ್ಮಲ್ಲಿ ಎಲ್ಲಾ ಕಂಪನಿಯ RO FILTER, UPS, BATTERY & SOLAR WATER HEATER ಗಳನ್ನು ರಿಪೇರಿ ಮಾಡಲಾಗುತ್ತದೆ.

# PEACE ENTERPRISES

SUPER STOCKIST FOR DAVANAGERE DIST.

Ganesh Temple Building,
Opp. Bakkeshwara High School,
Nijalingappa Layout, Davangere.

Contact: Manjunath Patil H G 8310042490 • 7795026926 | Chandrashekhar 9901318277 • 8088605375 | Nagaraj B 9880156667 • 9110205896


KA/SK/DVG-028/2024-2026. O/P @ B.V. Nagar P.O. JANATHAVANI - Published, Owned and Printed by M.S. Vikas, at Jayadhara Offset Printers, # 605, Hadadi Road, Davangere - 5, Published from # 605, Hadadi Road, Davangere - 5. Editor: M.S. Vikas